ವ್ಯೆಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 17 ಭಾನುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 240 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

PUBLIC NOTICE

Citizen Educational Trust - A registered Public Charitable Trust, Citizens School Campus, KHB Colony, Ooty Road, Nanjangud, represented by its Secretary Sri. Noor Mohammed Ali, cause this PUBLIC NOTICE in the interest of public at large as follows:

Our client, Citizen Educational Trust has obtained an order of attachment before Judgment of the schedule property in O.S.No. 738/2018 on the filed of the Hon'ble II Addl. Senior Civil Judge, at Mysuru in the suit filed against one Syed Mobeenulla. As such, the general public is hereby notified that they should not indulge with said Syed Mobeenulla in respect of the schedule property and not to deal with the schedule property in any manner such as to provide loan by Mortgage of Title Deeds, Agreement of Sale, Sale Deed, and any such other kind of alienations. In spite of this public notice if anybody make any transactions in respect of the schedule property the same will be subject to the attachment of the Court Order referred above.

This is for kind information of the public at large.

SCHEDULE

Eastern portion of alienated land bearing Sy.No.366 situated at Chamalapura Hundi, Kasaba Hobli, Nanjangud Taluk, Mysuru District, measuring an extent of 1 Acre out of 2 Acres and bounded on the : East by: Landed property bearing Sy. No.35 belonging to Srikantaprasad and Venkatesh, West by : Ramaining alienated land of Sy. No.366 and Sy. No. 102 of Sreedhar Layout, North by : Land bearing Sy. No.34 of Manick Shetty and Sons, South by : Land bearing Sy.No.36 of Krishne Urs.

Sd/- , O. SHAMA BHAT, B.A.L.L.B., Reg. No. KAR 417/77, O. SATHISHA, B.Sc. LL.B., Reg. No:KAR 721/89, ADVOCATES, No. 20/c, 2nd Floor, Near Airlines Hotel, Jayalakshmi Vilas Road, Chamarajapuram, Mysuru-570004.
Phone : 0821-2429851

ಬುದ್ಧನ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವವೇ ಸಂವಿಧಾನದ ಮೂಲ ತತ್ವ

ಹೈಕೋರ್ಟ್ ವಕೀಲ ಡಾ.ಎನ್.ಬಿ.ಶಿವರುದ್ರಪ್ಪ ಅಭಿಮತ



ಮೈಸೂರು, ಡಿ.16(ಜಿಎ)–ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತ್ವದ ತತ್ವಗಳು ಬುದ್ಧನಿಂದ ಪಡೆದಿದ್ದೇವೆಯೇ ಹೊರತು ಪಾಶ್ಚಿಮಾತ್ಯ ಮೂಲಗಳಿಂದಲ್ಲ. ಈ ಮೂರು ಮಹಾತತ್ವಗಳೇ ಸಂವಿಧಾನದ ಮೂಲ ತತ್ವಗಳಾಗಿವೆ ಎಂದು ಕರ್ನಾಟಕದ ಉಚ್ಚ ನ್ಯಾಯಾಲಯದ ವಕೀಲರು ಡಾ.ಎನ್.ಬಿ.ಶಿವರುದ್ರಪ್ಪ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣಾ ಕೇಂದ್ರ ಮತ್ತು ಕಾನೂನು ಅಧ್ಯಯನ ಕೇಂದ್ರಗಳಲ್ಲಿ ನಡೆದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಮಾತನಾಡಿದ ಅವರು, ದೇವದತ್ತ ಮತ್ತು ಸಿದ್ಧಾರ್ಥನ ನಡುವೆ ನಡೆಯುವ ಒಂದು ಹಂಸ ಪ್ರಕರಣದಲ್ಲಿ ದೇಶದ ನ್ಯಾಯಶಾಸ್ತ್ರವನ್ನು ಅರ್ಥಮಾಡಿಕೊಳ್ಳಬಹುದು ಎಂದರು.

ಭಾರತದ ಪ್ರಜೆಗಳಾದ ನಮಗೆ ಭಾವೈಕ್ಯತೆ ಮೂಡಲು ಇರುವ ಆಧಾರವೆಂದರೆ ಅದು ಸಂವಿಧಾನ ಮಾತ್ರ. 600ಕ್ಕೂ ಹೆಚ್ಚು ಸಂಸ್ಥಾನಗಳಾಗಿ ಒಡೆದುಹೋಗಿದ್ದ ಉಪಖಂಡವನ್ನು ಒಂದು ಐಕ್ಯತೆ ಒಕ್ಕೂಟವಾಗಿಸಿದ್ದು ಸಂವಿಧಾನ ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಸಂವಿಧಾನವು ಶ್ರೇಷ್ಠ ಅಸ್ತಿತ್ವವಾಗಿದೆ. ಆದರೆ, ವಿದ್ಯಾರ್ಥಿಗಳಲ್ಲಿ ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಸುವಲ್ಲಿ ಶಿಕ್ಷಣ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಾನೂನು ಅಧ್ಯಯನ ವಿಭಾಗದ ಡೀನ್ ಪ್ರೊ.ಟಿ.ಕೆ.ಮಾರುತಿ ಮಾತನಾಡಿ, ದೇಶದ ಸಂವಿಧಾನವನ್ನು ಕಥೆ, ಕಾದಂಬರಿಗಳ ರೀತಿಯಲ್ಲಿ ಅರ್ಥೈಸಿಕೊಳ್ಳುವುದು ಅಸಾಧ್ಯ. ಬದಲಿಗೆ ಸಾಮಾಜಿಕ ಚರಿತ್ರೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎಂದರು.

ಸಂವಿಧಾನ ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಜೊತೆಗೆ ಬದಲಿಸಿದ ಮೇಲೆ ಯಾವುದು ಸಂವಿಧಾನವಾಗಬೇಕು ಎಂಬುವುದು ಸ್ಪಷ್ಟತೆ ಯಾರಲ್ಲಿಯೂ ಇಲ್ಲ. ಈ ಬಗ್ಗೆ ವ್ಯರ್ಥ ಪ್ರಲಾಪಗಳನ್ನು ಬಿಟ್ಟು ಸಂವಿಧಾನವನ್ನು ಸರಿಯಾಗಿ ಅಧ್ಯಯನ ಮಾಡಿ ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆಯೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಪ್ರೊ.ಎಸ್.ನರೇಂದ್ರ ಕುಮಾರ್, ಹಿರಿಯ ವಕೀಲ ಶಾಂತರಾಜು, ಪ್ರಿ.ಮುರುಳೀಧರ್, ಡಾ.ಟಿ.ಪದ್ಮಶ್ರೀ ಉಪಸ್ಥಿತರಿದ್ದರು.


ವೈದ್ಯರು, ಆರೋಗ್ಯಾಧಿಕಾರಿಗಳಿಗೆ ಇಂದು ವಿಚಾರ ಗೋಷ್ಠಿ

ಮೈಸೂರು, ಡಿ.16–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ, ಮೈಸೂರು ಹಾಗೂ ವೃದ್ಧಾರೋಗ್ಯ ಚಿಕಿತ್ಸಾ ವಿಭಾಗ, ಜೆಎಸ್ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು ಸಂಯುಕ್ತಾಶ್ರಯದಲ್ಲಿ 'ವೃದ್ಧರ ಸಮಗ್ರ ಆರೈಕೆ' ವಿಷಯದ ಬಗ್ಗೆ ಡಿ.17ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ಹುಣಸೂರು ರಸ್ತೆಯಲ್ಲಿರುವ ಲಿಂಗದೇವರಕೊಪ್ಪಲಿನ 'ಜ್ಞಾನ ಸರೋವರ ರಿಟ್ರೀಟ್ ಸೆಂಟರ್'ನಲ್ಲಿ ವೈದ್ಯರು ಮತ್ತು ವೈದ್ಯಾಧಿಕಾರಿಗಳಿಗೆ ವಿಚಾರ ಗೋಷ್ಠಿಯನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಕುಟುಂಬ ಸಂಘದ ಅಧ್ಯಕ್ಷ ಡಾ.ಸಿ.ಯು.ಜಯರಾಮ್, ಜೆಎಸ್ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಕಮ್ಯುನಿಟಿ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥ ಡಾ.ಸುನಿಲ್‌ಕುಮಾರ್ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಮೌಂಟ್ ಅಬು, ರಾಜಸ್ತಾನದ ಗ್ಲೋಬಲ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಮಹೇಶ್ವರ್ ಹೇಮಾದ್ರಿ ಆಗಮಿಸಲಿದ್ದಾರೆ. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮೈಸೂರು ಈವಿವಿ ಉಪವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ವಹಿಸಲಿದ್ದಾರೆ. ಅಂದು ಸಂಜೆ 4 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸರ್ವೇಕ್ಷಣಾ ಅಧಿಕಾರಿ ಡಾ.ಎಚ್.ಎನ್.ಮಹದೇವಪ್ರಸಾದ್ ಹಾಗೂ ಜಿಲ್ಲಾ ಕುಟುಂಬ ವೈದ್ಯರ ಸಂಘದ ಉಪಾಧ್ಯಕ್ಷ ಡಾ.ಬಿಕೆ.ಆದಿಶೇಷಯ್ಯ ಭಾಗಹಿಸಲಿದ್ದಾರೆ ಎಂದು ಸಹೋದರಿ ಬಿ.ಕೆ.ಜಯಂತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದವೀಧರರು ಉದ್ಯೋಗಾಕಾಂಕ್ಷಿಯಾಗದೆ ನೀವೇ ಉದ್ಯೋಗ ಸೃಷ್ಟಿಸಿ

● ಅದಕ್ಕನುಗುಣವಾಗಿ ವಿಟಿಯು ಪಠ್ಯ ಪರಿಷ್ಕರಣೆ ಮಾಡಿದೆ ● ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ.ವಿದ್ಯಾಶಂಕರ್ ಸಲಹೆ



ಮೈಸೂರು,ಡಿ.16(ಬಿಎಲ್‌ಯು)– ವಿದ್ಯಾರ್ಥಿಗಳು ಪದವಿ ಪಡೆದ ನಂತರ ಉದ್ಯೋಗಾಕಾಂಕ್ಷಿಗಳಾಗದೆ ಉದ್ಯೋಗ ಸೃಷ್ಟಿಸಲು ಸ್ಟಾರ್ಟ್ ಅಪ್‌ಗಳನ್ನು ಸ್ಥಾಪಿಸಬೇಕು ಎಂದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ (ವಿಟಿಯು) ಕುಲಪತಿ ಡಾ.ಎಸ್.ವಿದ್ಯಾಶಂಕರ್ ಸಲಹೆ ನೀಡಿದ್ದಾರೆ.

ಮೈಸೂರಿನ ಎನ್‌ಐಇ ಕಾಲೇಜಿನ ವಜ್ರ ಮಹೋತ್ಸವ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ 13ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಪದವಿ ಪಡೆದ ನಂತರದ ಈ ಸಮಯ ನಿಮ್ಮ ಜೀವನದಲ್ಲಿ ನಿರ್ಣಾಯಕವಾಗಿದೆ. ನವ ಉದ್ಯಮಿಗಳಾಗಲು ಇದು ಸೂಕ್ತ ಸಮಯವಾಗಿದೆ ಎಂದು ಅಭಿಪ್ರಾಯಪಟ್ಟರು. ಉದ್ಯಮಿಗಳಾಗುವ ಮೂಲಕ ಭವಿಷ್ಯತ್ತಿನಲ್ಲಿ ನಮ್ಮ ದೇಶವನ್ನು ಉತ್ತುಂಗಕ್ಕೆ ಕೊಂಡೊಯ್ಯುತ್ತೀರಾ. ಈ ಮೂಲಕ ಭಾರತವನ್ನು ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕ ದೇಶವಾಗಿ ಮಾಡುತ್ತೀರಾ ಎಂಬ ವಿಶ್ವಾಸವಿದೆ ಎಂದು ಡಾ.ವಿದ್ಯಾಶಂಕರ್ ಹೇಳಿದರು.

ವಿವಿಧ ಪ್ರಕ್ರಿಯೆಗಳ ಯಶಸ್ವಿ ಅನುಷ್ಠಾನದ ಮೂಲಕ ಮುಂದಿನ ದಿನಗಳಲ್ಲಿ ಭಾರತ ಜ್ಞಾನದ ಸೂಪರ್ ಪವರ್ ಆಗಲಿದೆ. ಆಗ ಭಾರತ ಹಿಂದೆಂದೂ ಕಾಣದ ವೇಗದಲ್ಲಿ ಸಾಗುತ್ತದೆ ಎಂದರು.

ನಾವು ನಮ್ಮ ಬೇರುಗಳನ್ನು ಕಂಡುಕೊಳ್ಳಬೇಕು. ಈ ಮೂಲಕ ಅದನ್ನು ನಮ್ಮ ವೃತ್ತಿ ಜೀವನದಲ್ಲಿ ಬೆರೆಸಬೇಕು. ಇದರಿಂದ ಭಾರತ ಪುನರುತ್ಥಾನವಾಗಿ ಆಲೋಚನೆಗಳು ಪುನರುಜ್ಜೀವನಗೊಳ್ಳಲಿವೆ ಎಂದು ಹೇಳಿದರು.

ಈಗ ನಾವು ಜಾಗತಿಕರಣದ ಯುಗದಲ್ಲಿದ್ದೇವೆ. ಇಂಟರ್‌ನೆಟ್, ಮೊಬೈಲ್, ಕೇಬಲ್ ಟಿವಿ ಸೇರಿದಂತೆ ಇತರೆ ಅತ್ಯುನ್ನತ ತಂತ್ರಜ್ಞಾನದ ಮೂಲಕ ವಿಶ್ವದ ಮೂಲೆ ಮೂಲೆಗಳಲ್ಲಿ ಸಂಪರ್ಕ ಸಾಧಿಸುತ್ತಿದ್ದೇವೆ. ಇದರಿಂದ ನಾವು ಜಾಗತಿಕ ಹಳ್ಳಿಯಲ್ಲಿ ವಾಸಿಸುತ್ತಿದ್ದೇವೆ ಎಂದು ಅಭಿಪ್ರಾಯಪಟ್ಟರು.

ಸರಕು ಮತ್ತು ಸೇವೆಗಳು, ಹಣಕಾಸು ಮತ್ತು ತಂತ್ರಜ್ಞಾನ ಅಭಿವೃದ್ಧಿಯಾಗುತ್ತಿದೆ. ಇಷ್ಟೆಲ್ಲಾ ಇದ್ದರೂ ವಿಶ್ವದ ಯಾವುದೇ ದೇಶ ನೋಡಿದರೂ ಅಲ್ಲಿ ಶಾಂತಿ ಇಲ್ಲ. ಜಗತ್ತು ಹಿಂಸಾತ್ಮಕ ಕೃತ್ಯದಿಂದ ಬಳಲುತ್ತಿದೆ ಎಂದು ಡಾ.ವಿದ್ಯಾಶಂಕರ್ ಬೇಸರ ವ್ಯಕ್ತಪಡಿಸಿದರು.

ಸುಸ್ಥಿರ ಹಾಗೂ ಮಾನವೀಯ ತತ್ವಗಳ ಆಧಾರದ ಮೇಲೆ ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಕಳೆದುಕೊಳ್ಳದೆ ಎದುರಾಗುವ ಆಪತ್ತು ಮತ್ತು ವಿಪತ್ತುಗಳನ್ನು ಧೈರ್ಯದಿಂದ ಎದುರಿಸಿ. ಈ ಮೂಲಕ ಜೀವನವನ್ನು ಅರ್ಥಪೂರ್ಣಗೊಳಿಸಿಕೊಳ್ಳಿ ಎಂದು ತಿಳಿಸಿದರು.

ಭವಿಷ್ಯದ ಉದ್ಯೋಗಿಗಳಿಗೆ ಹೆಚ್ಚಿನ ಸೃಜನ ಶೀಲತೆ ಅರಿವಿನ ಸಾಮರ್ಥ್ಯ, ವಿಮರ್ಶಾತ್ಮಕ ಚಿಂತನೆ, ಉತ್ಸಾಹ ಮತ್ತು ಸಹಾನುಭೂತಿ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳನ್ನು ತಾಂತ್ರಿಕ ಪ್ರಗತಿಗೆ ಹೊಂದಿಕೊಳ್ಳುವಂತೆ ಮಾಡಲು ತಂತ್ರಜ್ಞಾನ ಮತ್ತು ವಿಜ್ಞಾನದ ಪ್ರಗತಿಯಲ್ಲಿ ಕಾಲಕ್ಕೆ ತಕ್ಕಂತೆ ಪಠ್ಯವನ್ನು ಬದಲಾಯಿಸಿದೆ ಎಂದರು.

ಹಳೆಯ ಸಾಂಪ್ರದಾಯಿಕ ಪಠ್ಯಕ್ರಮ ಪರಿಷ್ಕರಿಸಲಾಗಿದೆ. ಆಯ್ಕೆಗೆ ಅವಕಾಶ ಕಲ್ಪಿಸಲಾಗಿದೆ. ಸಂಯೋಜಿತ ಪದವಿ ಕಾರ್ಯಕ್ರಮಗಳಲ್ಲಿ ಮೈನರ್, ಆನರ್ಸ್‌ಯಲ್ಲಿ ಪದವಿ ಪರಿಚಯಿಸಲಾಗಿದೆ ಎಂದರು. ಎನ್‌ಐಇ ಕಾಲೇಜಿನ 844 ಪದವಿ ಹಾಗೂ 126 ಸ್ನಾತಕೋತ್ತರ ಪದವಿ ಸೇರಿ ಒಟ್ಟು 970 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಪ್ರದಾನ ಮಾಡಲಾಯಿತು. ಇವರಲ್ಲಿ 49 ಪದವಿ, 11 ಸ್ನಾತಕೋತ್ತರ ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರು. 66 ವಿದ್ಯಾರ್ಥಿಗಳಿಗೆ ಈ ವೇಳೆ ದತ್ತಿ ಪ್ರಶಸ್ತಿಗಳನ್ನು ನೀಡಲಾಯಿತು.

ಎನ್‌ಐಇ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್, ಉಪಾಧ್ಯಕ್ಷ ಡಾ.ಎಂ.ಎಸ್.ಗಣೇಶ್‌ಪ್ರಸಾದ್, ಕಾಲೇಜಿನ ಪ್ರಿನ್ಸಿಪಾಲ್ ಡಾ.ರೋಹಿಣಿ ನಾಗಪದ್ಮ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಭಾರತ–ಪಾಕ್ ಯುದ್ಧದ ವಿಜಯ ಶಿಲ್ಪಿಗಳಲ್ಲಿ ಬಾಬು ಜಗಜೀವನ ರಾಂ ಅಗ್ರಗಣ್ಯರು

ದೇವರತ್ನ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಶಿವಪ್ರಸಾದ್ ಅಭಿಮತ



ಮೈಸೂರು, ಡಿ.16(ಜಿಎ)–ಭಾರತ–ಪಾಕ್ ಯುದ್ಧದ ವಿಜಯ ಶಿಲ್ಪಿಗಳಲ್ಲಿ ಬಾಬು ಜಗಜೀವನರಾಂ ಕೂಡ ಅಗ್ರಗಣ್ಯರು ಎಂದು ದೇವರತ್ನ ಫೌಂಡೇಷನ್‌ನ ಸಂಸ್ಥಾಪಕ ಎಂ.ಶಿವಪ್ರಸಾದ್ ತಿಳಿಸಿದರು.

ನಗರದ ಮೈಸೂರು ವಿವಿಯ ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದ ವತಿಯಿಂದ ನಡೆದ 1971ರ ಭಾರತ–ಪಾಕ್ ಯುದ್ಧದ ವಿಜಯ ರೂವಾರಿ ಡಾ. ಬಾಬು ಜಗಜೀವನರಾಂ ಸ್ಮರಣಾರ್ಥ 52ನೇ ವರ್ಷದ ವಿಜಯ ದಿವಸ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಡಿ.16 ಪವಿತ್ರ ವಿಜಯೋತ್ಸವದ ದಿನ. ಈ ಹಿಂದೆ ದೇಶವೂ ಅಪೂರ್ವ, ಪರಿಣಾಮಕಾರಿ ಮತ್ತು ನಿಚ್ಚಳ ಗೆಲುವನ್ನು ಸಾಧಿಸಿರಲಿಲ್ಲ. 93,000 ಶತ್ರು ಸೈನಿಕರು ಏಕ ಕಾಲದಲ್ಲಿ ಶರಣಾಗಿದ್ದು, ಪ್ರಪಂಚದ ಯುದ್ಧಗಳ ಪರಂಪರೆಯಲ್ಲಿ ಇಲ್ಲ. ಇಂತಹ ಮಹಾನ್ ಸಾಧನೆಯ ಮೂಲಕ ದೇಶದ ಸೈನಿಕರು ಗೌರವ ತಂದು ಕೊಟ್ಟರು. ಈ ಅವಿಸ್ಮರಣೀಯ ಜಯಕ್ಕೆ ಸೂತ್ರದಾರರಾದ ಅಂದಿನ ಪ್ರಧಾನಿ ಉಕ್ಕಿನ ಮಹಿಳೆ ಇಂದಿರಾ ಗಾಂಧಿ ಮತ್ತು ದಕ್ಷ ಮತ್ತು ಅನುಭವಿ ರಕ್ಷಣಾ ಮಂತ್ರಿ ಬಾಬು ಜಗಜೀವನ ರಾಮ್ ಅವರನ್ನು ವಿಜಯೋತ್ಸವ ದಿನದಂದು ಸ್ಮರಿಸಬೇಕು ಎಂದರು.

ಬಾಬೂಜಿ ಧೈರ್ಯ, ಸ್ಥೈರ್ಯ, ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಪಟ್ಟ ಶ್ರಮ ಮತ್ತು ತ್ಯಾಗ ಪ್ರಾತಃಸ್ಮರಣೀಯ. ಆದರೆ ಇಂದಿನ ಯುವ ಪೀಳಿಗೆಗೆ ಬಾಬೂಜಿ ಕಾರ್ಯ ವೈಖರಿಯ ಬಗೆಗಿನ ಅರಿವಿಲ್ಲದಿರವುದು ಬೇಸರದ ಸಂಗತಿ. ಪ್ರಸ್ತುತ ಯುವ ಸಮೂಹಕ್ಕೆ ಬಾಬೂಜಿ ಕಾರ್ಯ ವೈಖರಿಯನ್ನು ತಲುಪಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ಡಾ.ಆರ್.ನಾಗಭೂಷಣ್, ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದ ನಿರ್ದೇಶಕ ಪ್ರೊ.ಆರ್.ತಿಮ್ಮರಾಯಪ್ಪ, ಬರಹಗಾರ ಡಾ.ಹರೀಶ್‌ಕುಮಾರ್, ಸಂಶೋಧನಾಧಿಕಾರಿ ಡಾ.ಎಂ.ಶ್ರೀನಿವಾಸ ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಸಂಸದ ಪ್ರತಾಪ್ ಸಿಂಹ ಬೆಂಬಲಿಸಿ ಭಿತ್ತಿಪತ್ರ ಪ್ರದರ್ಶನ

ಮೈಸೂರು, ಡಿ.16(ಜಿಎ)–ಸಂಸತ್ ಮೇಲೆ ದಾಳಿಯನ್ನು ಖಂಡಿಸುತ್ತೇವೆ. ಆದರೆ, ಪ್ರಕರಣದಲ್ಲಿ ಸಂಸದ ಪ್ರತಾಪ್ ಸಿಂಹ ಅವರನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ಪ್ರತಾಪ್ ಸಿಂಹ ಅಭಿಮಾನಿಗಳು ನಗರದ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿರುವ ಸಂಸದರ ಕಚೇರಿ ಮುಂಭಾಗ 'ವಿ ಸ್ಟಾಡ್ ವಿಥ್ ಪ್ರತಾಪ್ ಸಿಂಹ' ಎಂಬ ಭಿತ್ತಿ ಪತ್ರ ಹಿಡಿದು ಘೋಷಣೆಗಳನ್ನು ಕೂಗಿದರು.

ಈ ವೇಳೆ ಪ್ರತಾಪ್ ಸಿಂಹ ಅಭಿಮಾನಿ ಗೋಕುಲ್ ಗೋವರ್ಧನ್ ಮಾತನಾಡಿ, ಈ ಪ್ರಕರಣದ ಕುರಿತು ಈಗಾಗಲೇ ಕೇಂದ್ರ ಸರ್ಕಾರ ತನಿಖೆ ನಡೆಸುತ್ತಿದೆ. ಈ ನಡುವೇ ಪ್ರತಾಪ್ ಸಿಂಹರನ್ನು ಪಾಸ್ ಕೊಟ್ಟ ಮಾತ್ರಕ್ಕೆ ಭಯೋತ್ಪಾದಕರ ರೀತಿಯಲ್ಲಿ ಹೇಳಿಕೆಯನ್ನು ಕೊಡಲಾಗುತ್ತಿದೆ. ಪ್ರತಾಪ್ ಸಿಂಹ ಅವರೇ ಮೈಸೂರಿನ ವಿದ್ಯಾವರ್ಧಕ ಕಾಲೇಜು ವಿದ್ಯಾರ್ಥಿಗಳಿಗೆ ಪಾಸ್ ಕೊಟ್ಟಿರುವ ಬಗ್ಗೆ ಪೋಸ್ಟ್ ಹಾಕಿದ್ದಾರೆ. ಸಂಸದರಾಗಿ ಅವರು ಮಾಡಿ ರುವ ಅಭಿವೃದ್ಧಿ ಕಾರ್ಯಗಳಿಗೆ ನಾವು ಅಭಿಮಾನಿಗಳಾಗಿದ್ದೇವೆ. ಸಂಸದರ ವಿರುದ್ಧ ಹೇಳಿಕೆ ನೀಡುತ್ತಿರುವವರ ವಿರುದ್ಧ ಕಾನೂನು ಕ್ರಮ ತೆಗೆದು ಕೊಳ್ಳಬೇಕು ಎಂದು ಆಗ್ರಹಿಸಿದರು.



ಪ್ರತಾಪ್ ಸಿಂಹ ಅಭಿಮಾನಿಗಳು ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿರುವ ಸಂಸದರ ಕಚೇರಿ ಮುಂಭಾಗ 'ವಿ ಸ್ಟಾಡ್ ವಿಥ್ ಪ್ರತಾಪ್ ಸಿಂಹ' ಎಂಬ ಭಿತ್ತಿ ಪತ್ರ ಹಿಡಿದು ಘೋಷಣೆಗಳನ್ನು ಕೂಗಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ದಿ ಅನಾಥಾಲಯ :** ಸಾಹಿತ್ಯ ಸಂಘದ ವಾರ್ಷಿಕೋತ್ಸವ ಪ್ರಯುಕ್ತ 28ನೇ ವಾರ್ಷಿಕ ಕನ್ನಡ ಚರ್ಚಾ ಸ್ಪರ್ಧೆ, ವಿಷಯ : ಆಧುನಿಕತೆಯೇ ನಮ್ಮೆಲ್ಲ ಮಾನವೀಯ ಸಂಬಂಧಗಳ ನಾಶಕ್ಕೆ ಕಾರಣ, ಸ್ಥಳ: ಅನ್ನಪೂರ್ಣ ನಿಲಯ, ಅನಾಥಾಲಯ, ಬೆಳಗ್ಗೆ 9ಕ್ಕೆ.

■ **ಮೈಸೂರು ಬೃಂದಾವನ್ ಸ್ಕೈ ಟ್ರಸ್ಟ್:** ವೇದಾದ್ರಿ ಸ್ಕೈ ಯೋಗ ಮತ್ತು ಧ್ಯಾನ, ಬೆಳ್ಳಿಹಬ್ಬದ ಕಾರ್ಯಕ್ರಮ, ಮುಖ್ಯ ಅತಿಥಿಗಳು: ವಿಶ್ವ ಸಮುದಾಯ ಸೇವಾ ಸಂಘದ ಅಧ್ಯಕ್ಷ ಪದ್ಮಶ್ರೀ ಎಸ್.ಕೆ.ಎಂ. ಮೈಲಾನಂದನ್, ಅತಿಥಿಗಳು: ವಿಶ್ವ ಸಮುದಾಯ ಸೇವಾ ಸಂಘ ಕರ್ನಾಟಕ ವಲಯ ಅಧ್ಯಕ್ಷ ಡಾ.ಪಿ.ಧನಪತಿ, ಉಪಾಧ್ಯಕ್ಷ ಡಾ.ವಿಜಯ ಧನಪತಿ, ಸ್ಥಳ: ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪ, ಪಡುವಾರಹಳ್ಳಿ, ಬೆಳಗ್ಗೆ 9.30 ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಶ್ರೀ ಬಲಮುರಿ ಗಣಪತಿ ದೇವಸ್ಥಾನ:** 34ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಮೃತ್ಯು ನಿವಾರಣೆಗಾಗಿ, ಆರೋಗ್ಯಕ್ಕಾಗಿ ಮಹಾ ಮೃತ್ಯುಂಜಯ ಹೋಮ, ಬೆಳಗ್ಗೆ 9ಕ್ಕೆ ಪ್ರಧಾನ ಹೋಮ, ಮಹಾ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರೈಲ್ವೆ ನಿಲ್ದಾಣದ ಸಮೀಪ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.


■ **ಅಸೆಂಡೆನ್ಸ್ :** ಆರ್.ಚೇತನ್ ಅವರಿಂದ ವಾಟರ್‌ಕಲರ್ ಸೋಲೋ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ಗೃಹಶೋಭೆ :** ಗೃಹಶೋಭೆ ಜೀವನ ಶೈಲಿಯ ಪ್ರದರ್ಶನ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10ರಿಂದ.

■ **ಶಾರದಾ ವಿಲಾಸ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್:** ಸಮಾಗಮ–2023, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಟಿ.ಕೆ.ಉಮೇಶ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್.ಚಂದ್ರಶೇಖರ್, ಅಧ್ಯಕ್ಷತೆ: ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ದೇವಿಕಾ, ಸ್ಥಳ: ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಸನ್ನಿತಿ ಪ್ರಕಾಶನ, ಬೋಗಾದಿ:** ಸನ್ನಿತಿ ಕನ್ನಡ ಕಾವ್ಯ ಸಂಭ್ರಮ ರಾಜ್ಯ ಮಟ್ಟದ ಕಾವ್ಯೋತ್ಸವ, 'ಲೇಖನ ವಿಹಾರ' ಪುಸ್ತಕ ಲೋಕಾರ್ಪಣೆ, ಸಾಧಕರಿಗೆ ರಾಜ್ಯ ಮಟ್ಟದ ಸನ್ನಿತಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಪ್ರಗತಿಪರ ಚಿಂತಕಿ ಡಾ.ಕವಿತಾ ರೈ, ಅಧ್ಯಕ್ಷತೆ: ವಿಮರ್ಶಕ ಪ್ರೊ.ಮೈಸೂರು ಕೃಷ್ಣಮೂರ್ತಿ, ಪ್ರಶಸ್ತಿ ಪ್ರದಾನ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪುಸ್ತಕ ಲೋಕಾರ್ಪಣೆ: ಸಾಹಿತಿ ಟಿ.ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು: ಡಾ.ಜಿ.ಎಚ್.ಮಹದೇವಸ್ವಾಮಿ, ಎ.ಎಸ್.ರಂಜಿತ್‌ಕುಮಾರ್, ಆಶಯ ನುಡಿ: ಡಾ.ಕಂಚಿನಕೆರೆ ಗೋವಿಂದೇಗೌಡ, ಸ್ಥಳ: ಎಸ್.ಪಿ ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10.30ಕ್ಕೆ.

■ **ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ:** ಮಾನವ ಹಕ್ಕುಗಳ ದಿನಾಚರಣೆ, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಅವರಿಂದ ಮಾನವ ಹಕ್ಕುಗಳ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗಾಗಿ ಉಳಿಸಿಕೊಳ್ಳೋಣ (2023ರ ಘೋಷವಾಕ್ಯ), ಉಪನ್ಯಾಸ, ಅಧ್ಯಕ್ಷತೆ: ಪಿಯುಸಿಎಲ್, ಮೈಸೂರು ಜಿಲ್ಲಾ ಘಟಕ ಅಧ್ಯಕ್ಷ ಪ್ರೊ.ಕೆ.ಕಾಳಚನ್ನೇಗೌಡ, ಸ್ಥಳ: ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್, ಗೋಕುಲಂ 3ನೇ ಹಂತ, ಬೆಳಗ್ಗೆ 10.30ಕ್ಕೆ.



ಇಂದಿನ ಪಂಚಾಂಗ

17.12.2023 ಭಾನುವಾರ, ಮಳೆ ನಕ್ಷತ್ರ: ಮೂಲ 16.12.2023ರಿಂದ 28.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮಣಿಪಾಲ್ ಆಸ್ಪತ್ರೆ :** ಪೇರೆಂಟ್ ಕ್ರಾಫ್ಟ್ ಕಾರ್ಯಕ್ರಮ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 10.30ರಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ ಶ್ರೀ ಹೊಸಮಠ, ಕನ್ನಡ ಸಾಹಿತ್ಯ ಕಲಾಕೂಟ:** ಕಲಾವಿದ ಎಲ್.ಶಿವಲಿಂಗಪ್ಪ ಅವರು ರಚಿಸಿರುವ ಶಿಲ್ಪಿಯೇ ರಾಜಗುರುವಾಗಿ (ಶಿಲ್ಪ ಸಿದ್ಧಾಂತಿ ಸಿದ್ದಲಿಂಗಸ್ವಾಮಿಗಳ ಸಮಗ್ರ ಅಧ್ಯಯನ) ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಕೃತಿ ಬಿಡುಗಡೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ.ಧರಣಿದೇವಿ ಮಾಲಗತ್ತಿ, ಕೃತಿ ಕುರಿತು: ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ನಂದೀಶ್ ಹಂಚೆ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ, ಮುಖ್ಯ ಅತಿಥಿಗಳು: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ: ಕಲಾವಿದ ಎಲ್.ಶಿವಲಿಂಗಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಜಯ ಕರ್ನಾಟಕ:** 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಉಪಸ್ಥಿತರು: ಜಯ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ಬಿ.ಎನ್.ಜಗದೀಶ್, ಸ್ಥಳ: ಕಿರುರಂಗಮಂದಿರ, ಬೆಳಗ್ಗೆ 11ಕ್ಕೆ.

■ **ಮಾನವ ಹಕ್ಕುಗಳ ಸೇವಾ ಸಮಿತಿ:** ಕಾನೂನು ಅರಿವು ನೆರವು ಕಾರ್ಯಕ್ರಮ, ವಾರ್ಷಿಕೋತ್ಸವ, ಮಾನವ ರತ್ನ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಡಾ.ಅನುಅಮ್ಮ, ವಿಶೇಷ ಆಹ್ವಾನಿತರು: ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್, ಉದ್ಘಾಟನೆ: ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಮಾನವ ಹಕ್ಕುಗಳ ಸೇವಾ ಸಮಿತಿ ರಾಜ್ಯಾಧ್ಯಕ್ಷ ಡಾ.ಸೀತಾರಾಮೇಗೌಡ, ಸ್ಥಳ: ಪುರಭವನ, ಬೆಳಗ್ಗೆ 11ಕ್ಕೆ.

■ **ಗಾನಭಾರತೀ:** ವೀಣೆ ಶೇಷಣ್ಣನವರ ಸಂಸ್ಮರಣ ಪ್ರಯುಕ್ತ ವೀಣಾ ಉತ್ಸವ, ಬೆಳಗ್ಗೆ 10ರಿಂದ ವಿದುಷಿ ಗೀತಾ ರಮಾನಂದ್ ಅವರಿಂದ 'ಮೈಸೂರಿನ ವೈಣಿಕ ವಾಗ್ಗೇಯಕಾರರು' ವಿಷಯ ಕುರಿತು ಪ್ರಾತ್ಯಕ್ಷಿಕೆ, ಬೆಳಗ್ಗೆ 11.15ರಿಂದ ವಿದುಷಿ ಮೈಸೂರು ರಾಜಲಕ್ಷ್ಮಿ ಮತ್ತು ವಿದುಷಿ ವೀಣಾ ಮತ್ತು ಅನಘಾ ಅವರಿಂದ ಮೈಸೂರು ವಾಗ್ಗೇಯಕಾರರ ಕೆಲವು ಅಪರೂಪದ ರಚನೆಗಳು, ಮ. 12.30ರಿಂದ ವಿದುಷಿ ಮಂಜುಳಾ ಅವರಿಂದ ಹಿಂದಿನವರ ಅಪರೂಪದ ರಚನೆಗಳನ್ನು ಉಳಿಸಿಕೊಳ್ಳುವ ಅವಶ್ಯಕತೆ ಬಗ್ಗೆ ಪ್ರಾತ್ಯಕ್ಷಿಕೆ, ಮ. 2.30ರಿಂದ ವಿದುಷಿ ವೈ.ಜಿ.ಶ್ರೀಲತಾ ಅವರಿಂದ ವಿವಿಧ ವೀಣಾ ಬಾನಿಗಳ ಕಿರುನೋಟ ಬಗ್ಗೆ ಪ್ರಾತ್ಯಕ್ಷಿಕೆ, ಮ. 3.45ರಿಂದ ವಿದುಷಿ ಎನ್.ಭಾರತಿ ಮತ್ತು ಎಸ್.ಶ್ರೀಲಕ್ಷ್ಮಿ ಅವರಿಂದ ವೀಣೆ ಶೇಷಣ್ಣ ಮತ್ತು ಸುಬ್ಬಣ್ಣನವರ ರಚನೆಗಳ ವೀಣಾವಾದನ, ಸಂಜೆ 5.30ರಿಂದ ವಿದುಷಿ ಎಂ.ಕೆ.ಸರಸ್ವತಿ ಮತ್ತು ಐಶ್ವರ್ಯ ಮಣಿಕರ್ಣಿಕೆ ಅವರಿಂದ ಯುಗಳ ವೀಣಾವಾದನ, ಸ್ಥಳ: ಗಾನಭಾರತಿ ವೀಣೆ ಶೇಷಣ್ಣ ಭವನ, ಕುವೆಂಪುನಗರ.

■ **ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘ:** ಪಿಂಚಣಿದಾರರ ದಿನಾಚರಣೆ, ಉದ್ಘಾಟನೆ: ನಿವೃತ್ತ ಸರ್ಕಾರಿ ಅಧೀನ ಕಾರ್ಯದರ್ಶಿ ಡಾ.ಪಿ.ಬೋರೇಗೌಡ, ಮುಖ್ಯ ಅತಿಥಿಗಳು: ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಸಹ ನಿರ್ದೇಶಕಿ ಪಿ.ಶಾರದೆ, ಕ್ಯಾಲೆಂಡರ್ ಬಿಡುಗಡೆ: ಸಂಸ್ಥಾಪನಾ ಅಧ್ಯಕ್ಷ ಎನ್.ಓಬಯ್ಯ, ಅಧ್ಯಕ್ಷತೆ: ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ್, ಸ್ಥಳ: ಶಿವ ಭವನ, ಮಧ್ಯಾಹ್ನ 3ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಚಿನ್ನಪ್ಪ ಗೌಡ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ–ಸೈಬರ್ ಸುರಕ್ಷೆ–ವಾರದ ಮಾತು, ಪ್ರಸ್ತುತಿ–ಸತೀಶ್ ವಿ.ಪ್ರಾಯೋಜಕರು cybermitra.in ಮೈಸೂರು, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕೆ.ಎಲ್.ಪ್ರಸನ್ನಾಕ್ಷಿ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–ಸ್ಥೂಲ ಕಾಯ ಅಥವಾ ಒಬೆಸಿಟಿ–ಕಾರಣಗಳು ಮತ್ತು ಪರಿಹಾರ ಈ ಕುರಿತು ಡಾ. ರಾಮಚಂದ್ರ ನೇಸರ್ಗಿ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ– ಅಮೃತಾ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ; 12.30 ದೇವರನಾಮ–ಬಾಂಬೆ ಸಹೋದರಿಯರು, 12.45 ಜನಪದ ಸಂಗೀತ–ಪುಟ್ಟನಿಂಗಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ– ಎಸ್. ಪ್ರವೀಣ್, 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ವ್ಯಾಸಾನುಗ್ರಹ, ಪ್ರಸ್ತುತಿ– ಕರ್ನಾಟಕ ಯಕ್ಷ ಭಾರತಿ ಕಲಾವಿದರು, ಪುತ್ತೂರು, 6.50 ಕೃಷಿರಂಗ– ಸುಸ್ಥಿರ ಹೈನುಗಾರಿಕೆ ಕುರಿತು ಮಂಡ್ಯ ತಾಲೂಕು ಕೊತ್ತತ್ತಿ ಹೋಬಳಿ ಹುಲಿ ಕೆರೆಯ ಎನ್.ನಿತ್ಯಾನಂದ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, ಬಾನುಲಿ ಸರಣಿ–ಭಾಗವಹಿಸುವವರು–ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್‌ನ ಸಂತೋಷ್ ಕೌಲಗಿ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ–ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಸಂಗೀತಾ ಲಾಹಿರಿ–ಲಘು ಶಾಸ್ತ್ರೀಯ ಗಾಯನ.

■ **ಲೀಸಾಸ್ ಫಸ್ಟ್ ಸ್ಟೆಪ್ (ಲೀಲಾಂಬಿಕೆ ಸದಾನಂದ) :** ಶ್ರೀರಾಮಮಂದಿರ ಮಾದರಿ ವಿಶೇಷ ಪ್ರದರ್ಶನ, ಸ್ಥಳ: ಲೀಸಾಸ್ ಫಸ್ಟ್ ಸ್ಟೆಪ್ ಸಭಾಂಗಣ, ಶ್ರೀರಾಂಪುರ, ಸಂಜೆ 4ರಿಂದ.

■ **ಸ್ವರಾಂಜಲಿ:** ಸಂಧ್ಯಾ ಸಂಭ್ರಮ, ಮುಖ್ಯ ಅತಿಥಿಗಳು: ಚಂದನ ವಾಹಿನಿಯ ಥಟ್ ಅಂತ ಹೇಳಿ ಖ್ಯಾತಿಯ ಡಾ.ನಾ.ಸೋಮೇಶ್ವರ್, ವಾಗ್ಮಿ ಪ್ರೊ.ಕೃಷ್ಣೇಗೌಡ, ಸ್ಥಳ: ಎಂಎಂಸಿ ಕಾಲೇಜು ಅಮೃತ ಮಹೋತ್ಸವ ಸಭಾಂಗಣ, ಸಂಜೆ 5ಕ್ಕೆ.

■ **ಶ್ರೀ ನರ್ತನ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಸೌಮ್ಯ ನೃತ್ಯ ಶಾಲಾ:** ನರ್ತನೋತ್ಸವ, ಮುಖ್ಯ ಅತಿಥಿಗಳು: ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ಮಾಲೀಕ ಬಿ.ಎಂ.ರಾಮಚಂದ್ರ, ಸನ್ಮಾನಿತರು: ವಿದುಷಿ ಎ.ಚಂದ್ರಮತಿ, ಸ್ಥಳ: ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಕನ್ನಡ ಸಂಘ, ಭಾರತೀಯ ಸ್ಟೇಟ್ ಬ್ಯಾಂಕ್:** ವಾರ್ಷಿಕೋತ್ಸವ ಮತ್ತು ಕೆ.ರಘುಶೆಟ್ಟಿ ವಿರಚಿತ ಪ್ರಾಚ್ಯ–ಪ್ರಚಲಿತ ಪುಸ್ತಕ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು: ಅಂಕಣಕಾರ ಡಾ.ವಿ.ರಂಗನಾಥ್, ಅಧ್ಯಕ್ಷತೆ : ಎಸ್‌ಬಿಐ ನಿವೃತ್ತ ಉಪಪ್ರಧಾನ ವ್ಯವಸ್ಥಾಪಕ ಕೆ.ರಘುಶೆಟ್ಟಿ, ಸ್ಥಳ: ರೋಟರಿ (ಪಶ್ಚಿಮ) ಸಭಾಂಗಣ, ಸರಸ್ವತಿಪುರಂ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಆರಾತ್ರಿಕ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು, ಹೆಬ್ಬಾರ್ ಶ್ರೀ ವೈಷ್ಣವ ಉಪ ಸಭಾ, ಮೈಸೂರು:** ವಿದ್ವಾನ್ ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.15ರಿಂದ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** 63ನೇ ವಾರ್ಷಿಕ ಪೂಜಾ ಮಹೋತ್ಸವ, ಮಧ್ಯಾಹ್ನ 12.30ರಿಂದ ಮಹಾ ಅನ್ನದಾನ, ಸಂಜೆ 5.30ರಿಂದ ಪ್ರಸಾದ ಶುದ್ಧಿ, ಧ್ವಜಾರೋಹಣ, ವಾಸ್ತು ಹೋಮ, ವಾಸ್ತು ಕಳಶ, ರಾತ್ರಿ 9ರಿಂದ ಪೂಜಾ, ವಾಸ್ತುಬಲಿ, ರಕ್ಷೋಘ್ನ ಹೋಮ, ಅಸ್ತ್ರ ಕಳಶ ಪೂಜಾ, ಅತ್ತಾಳ ಪೂಜಾ, ಶ್ರೀ ಭೂತ ಬಲಿ, ವಿಳಕ್ಕು, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ, ಚಾಮುಂಡಿಬೆಟ್ಟದ ಪಾದ.

■ **ಇನ್ನೋವೇಟಿವ್ ಮೈಸೂರು, ಕನ್ನಡ ಸಾಹಿತ್ಯ ಕಲಾಕೂಟ :** ಮಹಿಳಾ ಯಕ್ಷ ಸಂಭ್ರಮ, ಕರ್ನಾಟಕ ಮಹಿಳಾ ಯಕ್ಷಗಾನ ಕಲಾವಿದರಿಂದ ಚಕ್ರವ್ಯೂಹ (ಕವಿ–ದೇವಿದಾಸ ವಿರಚಿತ) ಯಕ್ಷಗಾನ ಪ್ರಸಂಗ, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ

■ **ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ ಕಸಾಂದ್ರ ಮತ್ತು ಸತಿ ನಾಟಕ ಪ್ರದರ್ಶನ, ರಚನೆ : ಹೆಚ್.ಎಸ್. ಶಿವಪ್ರಕಾಶ್, ನಿರ್ದೇಶನ : ಬಿ.ಆರ್. ವೆಂಕಟರಮಣ ಐತಾಳ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ಶ್ರೀ ಸುತ್ತೂರು ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ:** ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಸ್ಮರಣಾರ್ಥ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ವಿಧಾನಪರಿಷತ್ ಸದಸ್ಯ ಡಾ.ಕೆ.ಗೋವಿಂದರಾಜು, ಉದ್ಘಾಟನೆ: ಅಂತಾರಾಷ್ಟ್ರೀಯ ಕಬಡ್ಡಿ ಕ್ರೀಡಾಪಟು ಸುಕೇಶ್ ಹೆಗ್ಡೆ, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪೊಲೀಸ್ ಅಧೀಕ್ಷಕಿ ಶ್ರೀಮತಿ ಸೀಮಾ ಲಾಟ್ಕರ್, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಸಂಜೆ 4ಕ್ಕೆ.

ಶ್ರೀ ಸುತ್ತೂರು ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರೀ ರಾಜೇಂದ್ರ ಶ್ರೀಗಳವರ ಪುಣ್ಯಾರಾಧನೆ ಹಾಗೂ ಜಾತ್ರಾ ಮಹೋತ್ಸವ ಪೂರ್ವಭಾವಿ ಸಮಾಲೋಚನಾ ಸಭೆ, ಕರ್ತೃ ಗದ್ದುಗೆಯಲ್ಲಿ ರುದ್ರಾಭಿಷೇಕ, ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆ 9ಕ್ಕೆ

ಪೊನ್ನಂಪೇಟೆಯಲ್ಲಿಂದು, ಕೊಡಗು ಜಿಲ್ಲೆ

■ **ಶ್ರೀರಾಮಕೃಷ್ಣ ಶಾರದಾಶ್ರಮ:** ಮಹಾಮಾತೆ ಶ್ರೀ ಶಾರದಾದೇವಿಯವರ 171ನೇ ಜನ್ಮದಿನ, ಬೆಳಗ್ಗೆ 5.30ಕ್ಕೆ ಮಂಗಳಾರತಿ, ಉಷಾಕೀರ್ತನೆ, 7.30ಕ್ಕೆ ವಿಶೇಷ ಪೂಜೆ, 9.30ಕ್ಕೆ ವೇದ ಪಾರಾಯಣ ಮತ್ತು ಭಜನೆ, 10.30ಕ್ಕೆ ಹೋಮ, 11.15ಕ್ಕೆ ಶ್ರೀ ಮಾತೆಯವರ ಜೀವನ ಚರಿತ್ರೆಯಿಂದ ವಾಚನ ಮತ್ತು ಪ್ರವಚನ, 12.15ಕ್ಕೆ ಭಜನೆ, 12.45ಕ್ಕೆ ಮಹಾಮಂಗಳಾರತಿ ಮತ್ತು ಪುಷ್ಪಾಂಜಲಿ,ಸಂಜೆ 6.30ಕ್ಕೆ ಆರತಿ ಮತ್ತು ವಿಶೇಷ ಭಜನೆ, ಸ್ಥಳ: ಶ್ರೀ ರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ.

ಕೊಳ್ಳೇಗಾಲದಲ್ಲಿಂದು, ಚಾಮರಾಜನಗರ ಜಿಲ್ಲೆ

■ **ಮಾನಸ ಶಿಕ್ಷಣ ಸಂಸ್ಥೆಗಳು:** ಬೆಳಗ್ಗೆ 9ಕ್ಕೆ ಮಾನಸೋತ್ಸವ, ಮಾನಸ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಮಾಜಿ ಶಾಸಕ ಎಸ್. ಬಾಲರಾಜು, ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಚಾ.ನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಪತ್ರಕರ್ತ ಸಿ.ಕೆ.ಮಹೇಂದ್ರ, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಮಧ್ಯಾಹ್ನ 3ಕ್ಕೆ ಮಾನಸ ಪ್ರಶಸ್ತಿ ಪ್ರದಾನ ಮತ್ತು ಸಮಾರೋಪ ಸಮಾರಂಭ, ಸಾನ್ನಿಧ್ಯ: ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಪ್ರಶಸ್ತಿ ಪ್ರದಾನ: ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ, ಸಮಾರೋಪ ಭಾಷಣ: ಸಂಸದ ವಿ. ಶ್ರೀನಿವಾಸ ಪ್ರಸಾದ್, ಅಧ್ಯಕ್ಷತೆ: ಶಾಸಕ ಎ.ಆರ್.ಕೃಷ್ಣಮೂರ್ತಿ, ವಾರ್ಷಿಕ ಸಂಚಿಕೆ ಬಿಡುಗಡೆ: ಹಂಪಿ ಕನ್ನಡ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಹಿ.ಚಿ.ಬೋರಲಿಂಗಯ್ಯ, ಸ್ಥಳ: ಮಾನಸ ಶಿಕ್ಷಣ ಸಂಸ್ಥೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 17 ಭಾನುವಾರ 2023

ಸಂಪುಟ: 44 | ಸಂಚಿಕೆ: 240 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹ 4

ಕೇರಳದಲ್ಲಿ ಕೋವಿಡ್ ರೂಪಾಂತರಿ JN.1 ಪತ್ತೆ; ದೇಶದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ಮತ್ತೆ ಹೆಚ್ಚಳ!



ನವದೆಹಲಿ: ಕೇರಳದಲ್ಲಿ ಕೋವಿಡ್ ರೂಪಾಂತರಿ JN.1 ಪತ್ತೆಯಾದ ಬೆನ್ನಲ್ಲೇ ಇತ್ತ ದೇಶದಲ್ಲಿನ ಕೋವಿಡ್ ಸೋಂಕಿತರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಕಳೆದ 24 ಗಂಟೆಗಳ ಅವಧಿಯಲ್ಲಿ ಭಾರತದಾದ್ಯಂತ 339 ಹೊಸ ಕೋವಿಡ್–19 ಪ್ರಕರಣಗಳು ದಾಖಲಾಗಿವೆ ಎಂದು ಕೇಂದ್ರ ಆರೋಗ್ಯ ಇಲಾಖೆ ಮಾಹಿತಿ ನೀಡಿವೆ. ಶನಿವಾರ ಕೇಂದ್ರ ಆರೋಗ್ಯ ಸಚಿವಾಲಯದ ನವೀಕರಿಸಿದ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ 339 ಹೊಸ COVID–19 ಸೋಂಕು ಪ್ರಕರಣಗಳ ವರದಿಯಾಗಿದ್ದು, ಆ ಮೂಲಕ ದೇಶದಲ್ಲಿನ ಸಕ್ರಿಯ ಪ್ರಕರಣಗಳ ಸಂಖ್ಯೆ 1,492ಕ್ಕೆ ಏರಿದೆ. ಅಂತೆಯೇ ಕೋವಿಡ್ ಸಾವಿನ ಸಂಖ್ಯೆ 5,33,311 (5.33 ಲಕ್ಷ)ಕ್ಕೆ ದಾಖಲಾಗಿದೆ. ದೇಶದಲ್ಲಿನ ಒಟ್ಟಾರೆ ಕೋವಿಡ್ ಪ್ರಕರಣಗಳ ಸಂಖ್ಯೆ ಪ್ರಸ್ತುತ 4,50, 04,481 (4.50 ಕೋಟಿ) ಆಗಿದೆ.


ಆರೋಗ್ಯ ಸಚಿವಾಲಯದ ವೆಬ್‌ಸೈಟ್ ಪ್ರಕಾರ, ರೋಗದಿಂದ ಚೇತರಿಸಿಕೊಂಡ ಜನರ ಸಂಖ್ಯೆ ಪ್ರಸ್ತುತ 4,44, 69,678 (4.44 ಕೋಟಿ) ಆಗಿದ್ದು, ರಾಷ್ಟ್ರೀಯ ಚೇತರಿಕೆಯ ಪ್ರಮಾಣವು 98.81 ಪ್ರತಿಶತದಷ್ಟಿದೆ. ಪ್ರಕರಣದ ಸಾವಿನ ಪ್ರಮಾಣವು ಶೇಕಡಾ 1.19 ರಷ್ಟಿದೆ. ಅಂತೆಯೇ ಆರೋಗ್ಯ ಸಚಿವಾಲಯದ ವೆಬ್‌ಸೈಟ್ ಪ್ರಕಾರ, ದೇಶದಲ್ಲಿ ಇದುವರೆಗೆ 220.67 ಕೋಟಿ ಕೋವಿಡ್ ಲಸಿಕೆ ಡೋಸ್‌ಗಳನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದೆ.

ಪೂರ್ಣಯ್ಯ ನಾಲೆಯ 'ಡ್ರೋನ್ ಸರ್ವೆ'

● 21 ಕಿ.ಮೀ. ಉದ್ದದ ನಾಲೆಯ ವಸ್ತುಸ್ಥಿತಿ ದಾಖಲಿಸಲು ಕ್ರಮ ● ಸರ್ವೆ ಬಳಿಕ ಒತ್ತುವರಿದಾರರ ತೆರವಿಗೆ ಕ್ರಮ ● ಸರ್ಕಾರದಿಂದ ಮಂಜೂರಾದ ಒತ್ತುವರಿ ಜಾಗಕ್ಕೆ ಪರ್ಯಾಯ ಜಾಗ ನೀಡುವ ಆಲೋಚನೆ ● ಕಾನೂನು ಉಲ್ಲಂಘಿಸಿರುವ ಅಧಿಕಾರಿಗಳ ವಿರುದ್ಧವೂ ಕ್ರಮಕ್ಕೆ ಚಿಂತನೆ



ಡ್ರೋನ್ ಸರ್ವೆ ಕಾರ್ಯ ಆರಂಭಿಸಿದ ಅಧಿಕಾರಿಗಳು.



ಪೂರ್ಣಯ್ಯ ನಾಲೆಯ ಒತ್ತುವರಿ ತೆರವಿಗೆ ಡ್ರೋನ್ ಸರ್ವೆ ನಡೆಸಲು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸುತ್ತಿರುವುದು.

ಮೈಸೂರು, ಡಿ.16(ಎಂಟಿವೈ)– ಕೆರೆಯಿಂದ ಕೆರೆಗೆ ಮಳೆ ನೀರು ಸರಾಗವಾಗಿ ಹರಿಯಲು ನೂರಾರು ವರ್ಷದ ಹಿಂದೆ ಮೈಸೂರು ಮಹಾರಾಜರಿಂದ ನಿರ್ಮಿಸಲಾಗಿದ್ದ ಪೂರ್ಣಯ್ಯ ನಾಲೆಗೆ ಸೇರಿದ ಜಾಗ ಒತ್ತುವರಿ ತೆರವಿಗೆ ಜಿಲ್ಲಾಡಳಿತ ಮುಂದಾಗಿದ್ದು, ಅದಕ್ಕೆ ಪೂರಕವಾಗಿ ಬೆಂಗಳೂರಿನ ಖಾಸಗಿ ಸಂಸ್ಥೆಯ ಸಹಯೋಗದಲ್ಲಿ ಡ್ರೋನ್ ಸರ್ವೆ ಆರಂಭಿಸಿದೆ.

ಮಳೆಗಾಲದಲ್ಲಿ ಬೋಗಾದಿ ಭಾಗದಿಂದ ನೀರು ಸರಾಗವಾಗಿ ಹರಿಯದೇ ಕೆಲವು ಬಡಾವಣೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಸಿತ್ತು. ಈ ಹಿನ್ನೆಲೆಯಲ್ಲಿ ರಾಜಕಾಲುವೆ ಒತ್ತುವರಿ ತೆರವುಗೊಳಿಸುವಂತೆ ಸ್ಥಳೀಯರು, ಸಂಘ–ಸಂಸ್ಥೆಗಳ ಮುಖಂಡರು ಹಾಗೂ ಹಿರಿಯ ನಾಗರಿಕರು ಕೆಲ ವರ್ಷಗಳಿಂದ ಆಗ್ರಹಿಸುತ್ತಾ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಇದೀಗ ಜಿಲ್ಲಾಡಳಿತ ಪೂರ್ಣಯ್ಯ ನಾಲೆಯ ಸ್ಪಷ್ಟ ಚಿತ್ರಣ ದಾಖಲಿಸಲು ಮುಂದಾಗಿದೆ. ಆ ದಾಖಲೆಯಲ್ಲಿ ಎಲ್ಲೆಲ್ಲಿ ಒತ್ತುವರಿಯಾಗಿದೆ. ಅನಧಿಕೃತ ಹಾಗೂ ಅಧಿಕೃತ(ಸರ್ಕಾರದಿಂದ ಮಂಜೂರು) ಒತ್ತುವರಿದಾರರು ಎಷ್ಟು ಎಂಬ ಅಂಕಿ–ಅಂಶ ಕಲೆ ಹಾಕಲು ಮುಂದಾಗಿದೆ.

21 ಕಿ.ಮೀ. ಪೂರ್ಣಯ್ಯ ನಾಲೆ: ಪೂರ್ಣಯ್ಯ ನಾಲೆ ಒಟ್ಟು 21 ಕಿ.ಮೀ. ಉದ್ದವಿದೆ. ಅದರಲ್ಲಿ ಮೈಸೂರು ನಗರ ವ್ಯಾಪ್ತಿಯೊಳಗೆ 15 ರಿಂದ 17 ಕಿ.ಮೀ. ನಾಲೆ ಹಾದು ಹೋಗಿರುವ ಮಾರ್ಗದುದ್ದಕ್ಕೂ ಹಲವೆಡೆ ಒತ್ತುವರಿಯಾಗಿದ್ದು, ಕೆಲವೆಡೆ ನಾಲೆ ಜಾಗದಲ್ಲಿ ಕಟ್ಟಡ, ರಸ್ತೆ, ವಾಣಿಜ್ಯ ಮಳಿಗೆ ● 9ನೇ ಪುಟಕ್ಕೆ

ಬೆಳಗಾವಿ ಅಧಿವೇಶನ ಮುಗಿಸಿಕೊಂಡು ಬಂದ ಸಿಎಂ ಸಿದ್ದರಾಮಯ್ಯ, ಅವರ ಸಂಪುಟದ

ಹಲವು ಸದಸ್ಯರಿಗೆ ವರಿಷ್ಠರ ಬುಲಾವ್!

● ಹಿರಿಯ ಶಾಸಕರಿಗೆ ನಿಗಮ–ಮಂಡಳಿಯಲ್ಲಿ ಸ್ಥಾನಮಾನ ಕಲ್ಪಿಸುವ ವಿಚಾರ
● ಲೋಕಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ ಸಂಬಂಧ ಚರ್ಚೆ
● ಮೂರು ದಿನ ದೆಹಲಿಯಲ್ಲೇ ಬಿಡಾರ ಹೂಡಲಿರುವ ನಾಯಕರು

ಬೆಂಗಳೂರು, ಡಿ.16(ಕೆಎಂಶಿ)– ಬೆಳಗಾವಿಯ ಚಳಿಗಾಲದ ಅಧಿವೇಶನ ಮುಗಿಸಿಕೊಂಡು ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಸಂಪುಟದ ಅನೇಕ ಸದಸ್ಯರು ದೆಹಲಿಯತ್ತ ಹೊರಟಿದ್ದಾರೆ.

ಸಚಿವ ಆಕಾಂಕ್ಷಿಗಳಾಗಿದ್ದ ಹಿರಿಯ ಸದಸ್ಯರಿಗೆ ನಿಗಮ–ಮಂಡಳಿಗಳಿಗೆ ನೇಮಕಾತಿ ಹಾಗೂ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚೆ ನಡೆಸಲು ವರಿಷ್ಠರು ರಾಜ್ಯ ನಾಯಕರಿಗೆ ಬುಲಾವ್ ಮಾಡಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಾಳೆಯಿಂದ ಎರಡು–ಮೂರು ದಿನಗಳ ಕಾಲ ಕರ್ನಾಟಕದಲ್ಲಿನ ರಾಜಕೀಯ ಬೆಳವಣಿಗೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸುವ ಬಗ್ಗೆ ಚರ್ಚೆ ನಡೆಯಲಿದೆ.

ವರಿಷ್ಠರ ಆಹ್ವಾನದ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ● 9ನೇ ಪುಟಕ್ಕೆ

ಸಂಚಾರಿ ಆರೋಗ್ಯ ಘಟಕಕ್ಕೆ ಚಾಲನೆ

ಗ್ರಾಮೀಣ, ಗುಡ್ಡಗಾಡು, ಕೊಳಚೆ ಪ್ರದೇಶಗಳಲ್ಲಿನ ಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆ



ಬೆಂಗಳೂರು, ಡಿ.16 (ಕೆಎಂಶಿ)–ಗ್ರಾಮೀಣ, ಗುಡ್ಡಗಾಡು ಹಾಗೂ ಕೊಳಚೆ ಪ್ರದೇಶಗಳಲ್ಲಿನ ಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಒದಗಿಸುವ ಸೌಲಭ್ಯಕ್ಕೆ ಸರ್ಕಾರ ಇಂದಿಲ್ಲಿ ಚಾಲನೆ ನೀಡಿತು.

ಖಾಸಗಿ ಸಹಭಾಗಿತ್ವದಲ್ಲಿ ಸುಧಾರಿತ ಸಂಚಾರಿ ಸಮುದಾಯ ಆರೋಗ್ಯ ಘಟಕಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

ಸಂಚಾರಿ ಸಮುದಾಯ ಘಟಕವು ರಾಜ್ಯಾದ್ಯಂತ ನಿಗದಿತ ದಿನಾಂಕಗಳಂದು ಸಂಚರಿಸಲಿದೆ. ಈ ಘಟಕವು ಸಂಪೂರ್ಣ ಹವಾ ನಿಯಂತ್ರಿತ ವ್ಯವಸ್ಥೆ ಹೊಂದಿದ್ದು, ಆರೋಗ್ಯ ತಪಾಸಣೆ, ಇಂಟರ್‌ನೆಟ್ ಸೌಲಭ್ಯ, ವಿವಿಧ ಪರೀಕ್ಷಾ ಪ್ರಯೋಗಾಲಯ, ಒಂದು ಕೆಮಿಕಲ್ ಶೌಚಾಲಯ ಸೌಲಭ್ಯವನ್ನು ಹೊಂದಿರುತ್ತದೆ. ಗ್ರಾಮೀಣ, ಗುಡ್ಡಗಾಡು ಪ್ರದೇಶಗಳಿಗೆ ತೆರಳಿ ● 9ನೇ ಪುಟಕ್ಕೆ

ಮನೋರಂಜನ್ ಹಣಕಾಸು ಮೂಲ ಶೋಧಿಸುತ್ತಿರುವ ಪೊಲೀಸರು!

ಬ್ಯಾಂಕ್ ಖಾತೆ, ವಹಿವಾಟುಗಳ ಪರಿಶೀಲನೆ



ಮೈಸೂರು, ಡಿ.16 (ಬಿಎಲ್‌ಯು)– ಸಂಸತ್ ಅಧಿವೇಶನ ನಡೆಯುವ ವೇಳೆ ಲೋಕಸಭೆಗೆ ನುಗ್ಗಿ ಸ್ಮೋಕ್ ಬಾಂಬ್ ಸ್ಫೋಟಿಸಿದ ಮೈಸೂರಿನ ಮನೋರಂಜನ್‌ಗೆ ಹಣಕಾಸು ನೆರವು ದೊರೆಯುತ್ತಿದ್ದ ಮಾಹಿತಿಯನ್ನು ಪೊಲೀಸರು ಕಲೆ ಹಾಕುತ್ತಿದ್ದಾರೆ. ಮನೋರಂಜನ್ ಬಿಇ ಪದವಿ ಪೂರ್ಣಗೊಳಿಸಿಲ್ಲ ಜೊತೆಗೆ ನಿರುದ್ಯೋಗಿ. ಆದರೆ ಮೈಸೂರಿನಿಂದ ನಿರಂತರವಾಗಿ ಬೆಂಗಳೂರು ಹಾಗೂ ದೆಹಲಿಗೆ ಹೋಗಿ ಬರುತ್ತಿದ್ದ.

ನನ್ನ ಮಗನಿಗೆ ಆಗಾಗ ಒಂದು ಸಾವಿರ ರೂಪಾಯಿ ನೀಡುತ್ತಿದ್ದೆ ಎಂದು ಮನೋರಂಜನ್ ತಂದೆ ದೇವರಾಜೇಗೌಡ ಹೇಳುತ್ತಿದ್ದಾರೆ. ಮನೋರಂಜನ್‌ಗೆ ಬೇರೆ ಯಾವುದೇ ಆದಾಯದ ಮೂಲ ಇಲ್ಲ ಎಂಬುದು ಸ್ಪಷ್ಟ. ಆದರೆ ಮನೋರಂಜನ್ ಆಗಾಗ ದೆಹಲಿಗೆ ಹೋಗಿ ಬರಲು ವಿಮಾನ ಪ್ರಯಾಣದ ಖರ್ಚು, ಅಲ್ಲಿ ವಾಸ್ತವ್ಯ ಸೇರಿದಂತೆ ಹಲವು ವೆಚ್ಚ ಭರಿಸಲು ಹಣಕಾಸು ನೆರವು ದೊರೆಯುತ್ತಿತ್ತು. ಈ ಬಗ್ಗೆ ಪೊಲೀಸರಿಗೆ ಸುಳಿವು ಸಿಕ್ಕಿದೆ. ಈ ಹಿನ್ನೆಲೆಯಲ್ಲಿ ಮನೋರಂಜನ್ ಯಾವ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದ, ಅವನ ಹಣಕಾಸು ವ್ಯವಹಾರ ಹೇಗಿತ್ತು, ಯಾರಿಂದ ಇವನಿಗೆ ಹಣ ಬಂದಿತ್ತು. ಗೂಗಲ್ ಪೇ ಹಾಗೂ ಫೋನ್ ಪೇಯಿಂದ ಯಾರಿಂದ, ಯಾರಿಗೆ ಹಣ ಸಂದಾಯವಾಗುತ್ತಿತ್ತು ಎಂಬ ಮಾಹಿತಿಯನ್ನು ಪೊಲೀಸರು ಕಲೆ ಹಾಕುತ್ತಿದ್ದಾರೆ.


ಸಂಸತ್ ಒಳಗೆ ನುಗ್ಗಿ ಭದ್ರತಾ ಲೋಪ ವೆಸಗಿರುವ ಹಿನ್ನೆಲೆ ಮುಜುಗರಕ್ಕೊಳಗಾಗಿರುವ ಕೇಂದ್ರ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ.

ದೆಹಲಿ ಪೊಲೀಸರು, ಕೇಂದ್ರ ಹಾಗೂ ರಾಜ್ಯ ಗುಪ್ತಚರ ಇಲಾಖೆ ಅಧಿಕಾರಿಗಳು, ಮೈಸೂರು ಪೊಲೀಸರು ಈ ಪ್ರಕರಣದ ಜಾಡು ಹಿಡಿದು ಹೊರಟಿದ್ದಾರೆ. ನ್ಯಾಯಾಲಯ ನೀಡಿರುವ ಪೊಲೀಸ್ ಕಸ್ಟಡಿ ಅವಧಿಯ ಒಳಗೆ ಮನೋರಂಜನ್ ಸೇರಿದಂತೆ 7 ಜನರಿಂದ ಬಹಳಷ್ಟು ಮಾಹಿತಿಗಳನ್ನು ಕಲೆ ಹಾಕಲು ಪೊಲೀಸರು ಮುಂದಾಗಿದ್ದಾರೆ. ಮೈಸೂರು ಮನೆಯಲ್ಲಿ ಮಹಜರ್ ಮಾಡಲು ನಾಳೆ ಅಥವಾ ನಾಡಿದ್ದು ದೆಹಲಿ ಪೊಲೀಸರು ಮನೋರಂಜನ್‌ನನ್ನು ಮೈಸೂರಿಗೆ ಕರೆತರುವ ಸಾಧ್ಯತೆ ಇದೆ. ಒಟ್ಟಾರೆ ಈ ಪ್ರಕರಣದಲ್ಲಿರುವ ಕಾಣದ ಕೈಗಳು ಕೂಡ ಸಿಕ್ಕಿ ಬೀಳುವುದಂತೂ ನಿಶ್ಚಿತ.

ಮನೋರಂಜನ್ ತಂದೆ–ತಾಯಿಗೆ ಕೇಂದ್ರ ಗುಪ್ತಚರ ಇಲಾಖೆ ಅಧಿಕಾರಿಗಳಿಂದ ಕಟ್ಟುನಿಟ್ಟಿನ ಸೂಚನೆ!?

ಮೈಸೂರು, ಡಿ.16(ಬಿಎಲ್‌ಯು)– ಸಂಸತ್ ಅಧಿವೇಶನ ನಡೆಯುವ ವೇಳೆ ಲೋಕಸಭೆಗೆ ನುಗ್ಗಿ ಸ್ಮೋಕ್ ಬಾಂಬ್ ಸ್ಫೋಟಿಸಿದ ಮೈಸೂರಿನ ಮನೋರಂಜನ್ ಕುಟುಂಬಸ್ಥರಿಗೆ ಕೇಂದ್ರ ಗುಪ್ತಚರ ಇಲಾಖೆಯ ಅಧಿಕಾರಿಗಳು ಕೆಲವು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮಕ್ಕಳು ಮಾಡಿದ ತಪ್ಪಿಗೆ ತಂದೆ–ತಾಯಿಗೆ ಶಿಕ್ಷೆ ಎಂಬ ಮಾತಿನಂತೆ ಈಗ ಮನೋರಂಜನ್ ಮಾಡಿರುವ ತಪ್ಪಿಗೆ ಅವನ ಕುಟುಂಬಸ್ಥರಿಗೆ ಸಂಕಷ್ಟ ಎದುರಾಗಿದೆ. ಶುಕ್ರವಾರ ದಿಢೀರನೆ ಮನೋರಂಜನ್ ಮನೆಗೆ ಭೇಟಿ ನೀಡಿದ ಕೇಂದ್ರ ಗುಪ್ತಚರ ಇಲಾಖೆಯ ಅಧಿಕಾರಿಗಳು, ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ಆತನ ಮನೆಯಲ್ಲೇ ಇದ್ದರು. ಮನೋರಂಜನ್‌ಗೆ ಸಂಬಂಧಿಸಿದಂತೆ ಮನೆಯ ಇಂಚಿಂಚು



ದೇವರಾಜೇಗೌಡ

ಪರಿಶೀಲನೆ ನಡೆಸಿದರು. ತರುವಾಯ ಮನೋರಂಜನ್ ತಂದೆ ದೇವರಾಜೇಗೌಡ ಹಾಗೂ ತಾಯಿಗೆ ಕೇಂದ್ರ ಗುಪ್ತಚರ ಇಲಾಖೆಯ ಅಧಿಕಾರಿಗಳು ಕೆಲವು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಯಾವುದೇ ಕಾರಣಕ್ಕೂ ನೀವು ಮೈಸೂರು ಬಿಟ್ಟು ಹೊರಗೆ ಹೋಗುವಂತಿಲ್ಲ. ತುರ್ತಾಗಿ ಹೋಗಬೇಕಾದ ಸಂದರ್ಭ ಬಂದರೆ ನಮ್ಮ ಅನುಮತಿ ಪಡೆಯಬೇಕು. ಜೊತೆಗೆ ನಿಮ್ಮ ಮನೆಗೆ ಯಾವ ಸಂಬಂಧಿಕರೂ ಬರದಂತೆ ತಡೆಯಿರಿ. ಸದ್ಯಕ್ಕೆ ಯಾರನ್ನು ಮನೆಗೆ ಸೇರಿಸಬೇಡಿ ಎಂದು ಸೂಚನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ನಿಮ್ಮ ಮಗ ಓದುತ್ತಿದ್ದ ದಿನಪತ್ರಿಕೆಗಳು, ಮ್ಯಾಗಝೀನ್‌ಗಳು, ಪುಸ್ತಕಗಳನ್ನು ಯಾರಿಗೂ ಕೊಡಬೇಡಿ ಹಾಗೂ ಮಾರಾಟ ಮಾಡಬೇಡಿ. ಜೊತೆಗೆ ಯಾವುದನ್ನು ಮುಚ್ಚಿಡಬೇಡಿ ಎಂದು ಹೇಳಿದ್ದಾರೆ. ಪ್ರತಿದಿನ ನಿಮಗೆ ಬರುವ ಎಲ್ಲಾ ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಸ್ವೀಕರಿಸಬೇಕು. ಯಾವುದೇ ಕಾರಣಕ್ಕೂ ದೂರವಾಣಿ ಕರೆಗಳ ಸಂಪರ್ಕ ಕಡಿತಗೊಳಿಸಬೇಡಿ. ನಿಮ್ಮ ಮಗ ಸಂಸತ್‌ಗೆ ನುಗ್ಗಿರುವ ಪ್ರಕರಣ ಸಂಬಂಧ ಯಾರಾದರೂ ಫೋನ್ ಮಾಡಿ ಮಾತನಾಡಿದರೆ ಅವರ ಬಗ್ಗೆ ನಮಗೆ ಮಾಹಿತಿ ನೀಡಬೇಕು ಎಂದು ಹೇಳಿದ್ದಾರೆ.

ಮೈಸೂರು ವಿಮಾನ ನಿಲ್ದಾಣಕ್ಕೆ 'ನಾಲ್ವಡಿ' ನಾಮಕರಣ ಈಗಾಗಲೇ ತೀರ್ಮಾನವಾಗಿದೆ

–ಸಂಸದ ಪ್ರತಾಪ್‌ಸಿಂಹ ಸ್ಪಷ್ಟನೆ

● ಬಿಜೆಪಿ ಸರ್ಕಾರದ ಸಂಪುಟ ಸಭೆ ನಿರ್ಧಾರ ಕೈಗೊಂಡಿತ್ತು ● ಪ್ರಸ್ತಾಪವನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಕೂಡ ಮಾಡಲಾಗಿದೆ ● ಈಗ ಟಿಪ್ಪು ಹೆಸರಿಟ್ಟರೆ ಸುಮ್ಮನೆ ಬಿಡಲ್ಲ ● ಸಿದ್ದರಾಮಯ್ಯಗೆ ಯದುವಂಶದ ಬಗ್ಗೆ ಕಿಂಚಿತ್ತೂ ಗೌರವವಿಲ್ಲ



ಮೈಸೂರು, ಡಿ.16(ಬಿಎಲ್‌ಯು)– ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ಮರುನಾಮಕರಣ ಮಾಡುವ ಸಂಬಂಧ ಈಗಾಗಲೇ ತೀರ್ಮಾನವಾಗಿದೆ. ಇದರ ಪ್ರಕ್ರಿಯೆ ಅಂತಿಮ ಹಂತದಲ್ಲಿರುವ ಕಾರಣ, ಯಾವುದೇ ಕಾರಣಕ್ಕೂ ಟಿಪ್ಪು ಹೆಸರಿಡಲು ನಾವು ಬಿಡುವುದಿಲ್ಲ ಎಂದು ಮೈಸೂರು ಹಾಗೂ ಕೊಡಗು ಸಂಸದ ಪ್ರತಾಪ್‌ಸಿಂಹ ರಾಜ್ಯ ಸರ್ಕಾರವನ್ನು ಎಚ್ಚರಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಪ್ರತಾಪ್ ಸಿಂಹ, ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ ಮಾಡುವ ಸಂಬಂಧ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ತನಕ ನಡೆದಿರುವ ಕಾನೂನಾತ್ಮಕ ಪ್ರಕ್ರಿಯೆಗಳ ದಾಖಲಾತಿಗಳನ್ನು ಈ ವೇಳೆ ಬಿಡುಗಡೆ ಮಾಡಿದ್ದಾರೆ. ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮೇ 25, 2022ರಂದು ಪತ್ರ ಬರೆದು ಮೈಸೂರು ವಿಮಾನ ನಿಲ್ದಾಣದ ಹೆಸರನ್ನು 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್' ವಿಮಾನ ನಿಲ್ದಾಣ ಎಂದು ಮರು ನಾಮಕರಣ ಮಾಡುವಂತೆಯೂ ಹಾಗೂ ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೆ. ಈ ಸಂಬಂಧ ಬಸವರಾಜ ಬೊಮ್ಮಾಯಿ ಅವರನ್ನು ಖುದ್ದಾಗಿ ಭೇಟಿ ಮಾಡಿಯೂ ವಿನಂತಿ ಮಾಡಿಕೊಂಡಿದ್ದೆ ಎಂದು ತಿಳಿಸಿದ್ದಾರೆ.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಬಸವರಾಜ ಬೊಮ್ಮಾಯಿ ಅವರು, ರನ್ ವೇ ವಿಸ್ತರಣೆಗೆ 319 ಕೋಟಿ ರೂಪಾಯಿ ಬಿಡುಗಡೆ ಮಾಡಿ, ಮೈಸೂರು ವಿಮಾನ ನಿಲ್ದಾಣಕ್ಕೆ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್' ಹೆಸರು ಮರು ನಾಮಕರಣ ಮಾಡಲು ಸಚಿವ ಸಂಪುಟದಲ್ಲಿ ಒಪ್ಪಿಗೆ ಕೊಟ್ಟರು. ಇದಕ್ಕೆ ಸಂಬಂಧಿಸಿದಂತೆ ಆಗಸ್ಟ್



18, 2022 ರಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕೂಡ ಮಾಡಿದ್ದರು. ಈ ಮೂಲಕ ಮೈಸೂರು ವಿಮಾನ ನಿಲ್ದಾಣಕ್ಕೆ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್' ಹೆಸರು ಮರು ನಾಮಕರಣ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಮತ್ತೆ ಟಿಪ್ಪು ಹೆಸರು ಪ್ರಸ್ತಾಪ ಮಾಡುತ್ತಿರುವುದು ಸರಿಯಲ್ಲ ಎಂದು ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮೈಸೂರು ಯದುವಂಶದ ಬಗ್ಗೆ ಎಳ್ಳಷ್ಟೂ ಗೌರವವಿಲ್ಲ. ಅವರ ಈ ಮನಸ್ಥಿತಿ ನನಗೆ ಚೆನ್ನಾಗಿ ಗೊತ್ತಿದೆ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಟಿಪ್ಪು ಜಯಂತಿ ಆಚರಣೆ ಮಾಡಿ ಮೈಸೂರಿಗರು, ಕೊಡವರು ಹಾಗೂ ಹಿಂದೂಗಳಿಗೆ ನೋವುಂಟು ಮಾಡಿದ್ದರು. ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಶ್ರೀರಂಗಪಟ್ಟಣದಲ್ಲಿ ಟಿಪ್ಪು ವಿಶ್ವವಿದ್ಯಾನಿಲಯ ಸ್ಥಾಪಿಸುವ ಪ್ರಯತ್ನ ಮಾಡಿದ್ದರು ಎಂದು ಆರೋಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜನರ ಭಾವನೆಗೆ ಅನುಗುಣವಾಗಿ ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ಮರು ನಾಮಕರಣ ಮಾಡುವ ಶತ ಪ್ರಯತ್ನ ಮಾಡಿದೆ. ಅಲ್ಲದೆ ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರನ್ನು 'ಒಡೆಯರ್ ● 9ನೇ ಪುಟಕ್ಕೆ

ಲೋಕಸಭಾ ಚುನಾವಣೆಯಲ್ಲಿ ಮಗನನ್ನು ಗೆಲ್ಲಿಸಲು ಸಂಸದ ಪ್ರತಾಪ್‌ಸಿಂಹ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಷಡ್ಯಂತ್ರ



ಕರ್ನಾಟಕದ ಬಿಜೆಪಿ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಾ ಆರೋಪ

ಬೆಂಗಳೂರು, ಡಿ.16– ಲೋಕಸಭಾ ಚುನಾವಣೆಯಲ್ಲಿ ತಮ್ಮ ಮಗನನ್ನು ಗೆಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಸತ್ ಹೊಗೆ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದ ಪ್ರತಾಪ್‌ಸಿಂಹ ವಿರುದ್ಧ ಷಡ್ಯಂತ್ರ ರೂಪಿಸಿದ್ದಾರೆ ಎಂದು ಕರ್ನಾಟಕದ ಬಿಜೆಪಿ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಾ ಶನಿವಾರ ಆರೋಪಿಸಿದ್ದಾರೆ.

ನವದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಲೆಹರ್ ಸಿಂಗ್, ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರನ್ನು ಟ್ರ್ಯಾಪ್(ಸಿಲುಕಿಸಲು) ಮಾಡಲು ಷಡ್ಯಂತ್ರ ರೂಪಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಮೈಸೂರು–ಕೊಡಗು ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸಲಿದ್ದಾರೆ. ಅವರ (ಸಿಎಂ ಸಿದ್ದರಾಮಯ್ಯ) ಪುತ್ರನ ಗೆಲುವನ್ನು ಖಾತರಿಪಡಿಸಿ ಕೊಳ್ಳಲು ಪ್ರತಾಪ್ ಸಿಂಹ ವಿರುದ್ಧ ಯೋಜಿತ ರೀತಿಯಲ್ಲಿ ಷಡ್ಯಂತ್ರ ರೂಪಿಸಲಾಗಿದೆ ಎಂದು ಅವರು ದೂರಿದರು. ನಗರ ನಕ್ಸಲರು ಭಾರತ್ ಜೋಡೋ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಸಿಎಂ ಸಿದ್ದರಾಮಯ್ಯ ನಗರ ನಕ್ಸಲರ ಬೆಳವಣಿಗೆಯನ್ನು ಖಾತರಿಪಡಿಸುತ್ತಿದ್ದಾರೆ. ಸಂಸತ್ತಿನಲ್ಲಿ ಹೊಗೆ ದಾಳಿ ನಡೆದ ಕೇವಲ 15 ನಿಮಿಷಗಳಲ್ಲೇ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದ್ದರು. ಇದು ಪ್ರತಾಪ್ ಸಿಂಹ ವಿರುದ್ಧದ ಷಡ್ಯಂತ್ರವನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಅವರು ಹೇಳಿದರು. ಹೊಗೆ ದಾಳಿ ಪ್ರಕರಣದ ಇಬ್ಬರು ಆರೋಪಿಗಳಿಗೆ ಲೋಕಸಭಾ ಕಲಾಪ ವೀಕ್ಷಣೆಗೆ ಪಾಸ್ ನೀಡಿರುವ ಪ್ರತಾಪ್ ಸಿಂಹ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಿಎಂ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ನಾಯಕರು ಒತ್ತಾಯಿಸುತ್ತಿದ್ದಾರೆ. ಆರೋಪಿ ಮನೋರಂಜನ್ ಡಿ ಅವರೊಂದಿಗೆ ಪ್ರತಾಪ್ ಸಿಂಹ ನಿಕಟ ಸಂಪರ್ಕ ಹೊಂದಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ಅಲ್ಲದೆ ಅವರ ಕಚೇರಿಯನ್ನು ವಶಪಡಿಸಿಕೊಳ್ಳಬೇಕು, ಅವರನ್ನು ಅಮಾನತಿನಲ್ಲಿಡಬೇಕು ಎಂದು ಅದು ಒತ್ತಾಯಿಸಿದೆ. ಈ ನಡುವೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಕರ್ನಾಟಕ ಕಾಂಗ್ರೆಸ್ ಪತ್ರ ಬರೆದಿದ್ದು, ಈ ವಿಷಯದಲ್ಲಿ ಅವರ ನಿಷ್ಕ್ರಿಯತೆಯನ್ನು ಆಕ್ಷೇಪಿಸಿದೆ ಎಂದು ತಿಳಿಸಿದರು.

" ನಾವು ಯಾರನ್ನೂ ಟ್ರ್ಯಾಪ್ ಮಾಡಿಲ್ಲ. ಇದೆಲ್ಲಾ ಬಿಜೆಪಿಯ ಕಪೋಲಕಲ್ಪಿತ ಆರೋಪ ಅಷ್ಟೇ. ಬಿಜೆಪಿಯವರಿಗೆ ಸ್ವಲ್ಪ ಬುದ್ಧಿ ಕಡಿಮೆ ಅನ್ಸುತ್ತೆ. ಅದಕ್ಕೇ ಹೀಗೆಲ್ಲಾ ಮಾತನಾಡುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ಡಾ. ಯತೀಂದ್ರ ಸ್ಪರ್ಧಿಸುವುದಿಲ್ಲ. ಆದರೆ ಜನ ಬಯಸಿದರೆ ಏನು ಮಾಡುವುದು?



–ಮುಖ್ಯಮಂತ್ರಿ ಸಿದ್ದರಾಮಯ್ಯ

" ನಾವು ಯಾವುದೇ ಟ್ರ್ಯಾಪ್ ಮಾಡಬೇಕಾದ ಅವಶ್ಯಕತೆ ಇಲ್ಲ. ದೇಶದ ಭದ್ರತೆ ಮುಖ್ಯ. ಈಗ ನಿರುದ್ಯೋಗ ಸಮಸ್ಯೆ ಎಲ್ಲಿಗೆ ಬಂದಿದೆ ಎಂಬುದರ ಬಗ್ಗೆ ಇಡೀ ದೇಶ ಚರ್ಚೆ ಮಾಡುವ ಸಮಯ ಬಂದಿದೆ.



–ಡಿಸಿಎಂ ಡಿ.ಕೆ.ಶಿವಕುಮಾರ್

ನಕ್ಕರೆ ಅದೇ ಸ್ವರ್ಗ

ಶಂಕರ್ : "ಮದುವೆಯಾದ ಮೇಲೆ ನಿಮ್ಮ ಸಂಸಾರದಲ್ಲಿ ಆದ ಮುಖ್ಯ ಬದಲಾವಣೆ ಏನು?"

ಈಶ್ವರ್ : "ತುಂಬಾ ಸಿಂಪಲ್, ನನ್ನ ಹೆಂಡತಿ ಅಡುಗೆ ಮಾಡೋದು ಮರೆತಳು. ನಾನು ಅಡುಗೆ ಮಾಡೋದು ಕಲಿತೆ!"

ಮೈಸೂರು ಮಿತ್ರ

ಭಾನುವಾರ, 17 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿನಂತೆ –ಸುಭಾಷಿತ

ವೇದ ಸುಳ್ಳಾದರೂ { ಲೋಕ ತಿಳಿಬೇಕು,
ಗಾದೆ ಸುಳ್ಳಾಗದು { ಲೆಕ್ಕ ಕಲಿಯಬೇಕು

ನಿಮ್ಮ ಪತ್ರಗಳು

■ ನೂತನ ಸಂಸತ್ ಭವನದ ಭದ್ರತೆ ಬಿಗಿಗೊಳಿಸಿ

ಮಾನ್ಯರೆ,

ಕಳೆದ ಬುಧವಾರ ದೇಶದ ಪ್ರಜಾಪ್ರಭುತ್ವದ ದೇಗುಲವೆಂದೇ ಕರೆಯಲ್ಪಡುವ ಸಂಸತ್ ಭವನದಲ್ಲಿ ಸ್ಮೋಕ್ ಕ್ಯಾನ್ ಸಿಡಿಸಿ ಧಾಳಿ ಮಾಡಿರುವುದು ಸಂಪೂರ್ಣವಾಗಿ ಸಂಸತ್ ಭವನದ ಸಿಬ್ಬಂದಿಯ ವೈಫಲ್ಯವೇ ಕಾರಣ. ಈ ಘಟನೆಗೆ ಸಂಬಂಧಿಸಿದಂತೆ ಸಂಸದ ಪ್ರತಾಪ ಸಿಂಹ ಅವರನ್ನು ಬಲಿಪಶು ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ?

ಒಂದು ಲೋಕಸಭಾ ಕ್ಷೇತ್ರದಲ್ಲಿ ಕನಿಷ್ಠ 20ರಿಂದ 25 ಲಕ್ಷ ಜನರಿರುತ್ತಾರೆ. ಅವರೆಲ್ಲರನ್ನೂ ಸಂಸದರು ಗುರುತಿಸಲು ಸಾಧ್ಯವಿಲ್ಲ. ಸಂಸತ್ತಿನ ಕಲಾಪಗಳನ್ನು ವೀಕ್ಷಿಸಲು ಸಂದರ್ಶಕರ ಗ್ಯಾಲರಿಗೆ ಪಾಸ್ ತೆಗೆದುಕೊಳ್ಳಲು ಸಾಮಾನ್ಯವಾಗಿ ಆಯಾಯ ಲೋಕಸಭಾ ಸದಸ್ಯರ ಹೆಸರು ಹೇಳಿಕೊಂಡು ಪಡೆಯುತ್ತಾರೆ.

ಪೊಲೀಸರ ಪ್ರಾಥಮಿಕ ತನಿಖೆಯಿಂದ ಈ ದಾಳಿಗೆ ಮುಖ್ಯ ಕಾರಣ, ದೇಶದ ಬಡತನ, ನಿರುದ್ಯೋಗ ಸಮಸ್ಯೆ ಮತ್ತು ಸರ್ವಾಧಿಕಾರಿ ಧೋರಣೆ ಕಾರಣ ಎಂದು ದಾಳಿಕೋರರು ಹೇಳಿದ್ದಾರೆ.

ದಾಳಿಕೋರರು ತಮ್ಮ ಷೂನಲ್ಲಿ ಸ್ಮೋಕ್ ಡಬ್ಬಿಗಳನ್ನು ಇಟ್ಟುಕೊಂಡು ಗ್ಯಾಲರಿಯನ್ನು ಪ್ರವೇಶಿಸಿದ್ದಾರೆ. ಇವರನ್ನು ಭದ್ರತಾ ಸಿಬ್ಬಂದಿ ಪರೀಕ್ಷಿಸಲಿಲ್ಲವೇ? ಇದು ನೂತನ ಸಂಸತ್ ಭವನದ ಭದ್ರತಾ ವ್ಯವಸ್ಥೆ ಎಷ್ಟು ದುರ್ಬಲವಾಗಿದೆ ಎಂಬುದಕ್ಕೆ ನಿದರ್ಶನ. ಇಲ್ಲಿನ ಭದ್ರತಾ ಸಿಬ್ಬಂದಿಯನ್ನು ಪುನರ್ರಚಿಸಿ ಮುಂದೆ ಇಂತಹ ಘಟನೆಗಳು ಸಂಭವಿಸದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಶಾಸಕನಿಗೆ ಜೈಲು ಶಿಕ್ಷೆಯ ಬದಲು ಗಲ್ಲು ಶಿಕ್ಷೆಯಾಗಬೇಕಿತ್ತು

ಮಾನ್ಯರೆ,

ಒಬ್ಬ ಪ್ರಜಾ ಪ್ರತಿನಿಧಿಯಾಗಿ, ಗೌಪ್ಯತಾ ಪ್ರಮಾಣ ವಚನ ಸ್ವೀಕರಿಸಿದ ಅರಿವು ಇಲ್ಲದೆ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಉತ್ತರ ಪ್ರದೇಶದ ಬಿಜೆಪಿ ಶಾಸಕ ರಾಮದುಲರ್ ಗೊಂಡ್‌ಗೆ ಅಲ್ಲಿನ ವಿಶೇಷ ನ್ಯಾಯಾಲಯ ಇಪ್ಪತ್ತೈದು ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿರುವುದು ಸ್ವಾಗತಾರ್ಹ. ಆದರೆ ಈತನಿಗೆ ಜೈಲು ಶಿಕ್ಷೆಗಿಂತ ಗಲ್ಲು ಶಿಕ್ಷೆ ವಿಧಿಸಬೇಕಿತ್ತು.

ಸುಮಾರು ಒಂಬತ್ತು ವರ್ಷಗಳ ಹಿಂದೆ ನಡೆದ ಈ ಘಟನೆಗೆ ಈಗ ನ್ಯಾಯ ದೊರೆತಿದೆ. ಇಂತಹ ಪ್ರಕರಣದಲ್ಲಿ ನ್ಯಾಯಾಲಯ ಕನಿಷ್ಠ ಒಂದು ವರ್ಷದ ಅವಧಿಯಲ್ಲಿ ಪ್ರಕರಣ ಇತ್ಯರ್ಥಪಡಿಸಿದರೆ ಒಳ್ಳೆಯದು. ಏಕೆಂದರೆ ಬಲಿಷ್ಠ ವ್ಯಕ್ತಿಗಳು ಸಾಕ್ಷ್ಯ ನಾಶಪಡಿಸುವ ಮತ್ತು ಸಂತ್ರಸ್ತರ ಕುಟುಂಬದವರನ್ನು ಹೆದರಿಸುವ ಸಾಧ್ಯತೆ ಹೆಚ್ಚು.

ಪ್ರಜಾ ಪ್ರತಿನಿಧಿ ಕಾಯ್ದೆ ಅನುಸಾರ ಈತನನ್ನು ಜೀವನಪರ್ಯಂತ ಚುನಾವಣೆಗೆ ನಿಲ್ಲದಂತೆ ಮಾಡಬೇಕು. ವಿಪರ್ಯಾಸವೆಂದರೆ ಒಂದೆಡೆ ಬಿಜೆಪಿ ಶಾಸಕ ಅತ್ಯಾಚಾರ ಎಸಗಿ ಜೈಲು ಪಾಲಾದರೆ ಬೆಳಗಾವಿಯಲ್ಲಿ ನಡೆದ ಬುಡಕಟ್ಟು ಮಹಿಳೆಯ ಬೆತ್ತಲೆ ಮೆರವಣಿಗೆ ಪ್ರಕರಣದ ಸತ್ಯಶೋಧನೆಗೆ ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಬಿಜೆಪಿ ತಂಡ ರಚಿಸಿರುವುದು ಹಾಸ್ಯಾಸ್ಪದವಾಗಿದೆ. ಅಲ್ಲದೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಆಗಿಂದಾಗ್ಗೆ ಇಂತಹ ಘಟನೆಗಳು ನಡೆಯುತ್ತವೆ ಎಂದಿದ್ದಾರೆ. ಉತ್ತರ ಪ್ರದೇಶದಲ್ಲಿ ತಮ್ಮದೇ ಬಿಜೆಪಿ ಸರ್ಕಾರ ಇದೆ. ವರದಿಗಳ ಪ್ರಕಾರ ಅತೀ ಹೆಚ್ಚು ಮಹಿಳಾ ದೌರ್ಜನ್ಯ ನಡೆದಿರುವುದು ಉತ್ತರ ಪ್ರದೇಶದಲ್ಲಿ. ಇದನ್ನು ಯಾಕೆ ಕೇಂದ್ರ ಅಧ್ಯಯನ ಮಾಡಲಿಲ್ಲ. ಮಹಿಳೆಯರ ವಿಚಾರದಲ್ಲಿ ರಾಜಕೀಯ ಮಾಡಬೇಡಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

■ ಕರ್ನಾಟಕದ ಮತದಾರ ಜಾಗೃತನಾಗಬೇಕಾಗಿದೆ

ಮಾನ್ಯರೆ,

ಬಹು ನಿರೀಕ್ಷಿತ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಅಧಿವೇಶನಕ್ಕೆ ತೆರೆ ಬಿದ್ದಿದೆ. 2012ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಅಂದಿನ ರಾಷ್ಟ್ರಾಧ್ಯಕ್ಷ ಪ್ರಣವ್ ಮುಖರ್ಜಿ ಉದ್ಘಾಟನೆ ಮಾಡಿದ ಈ ಸುವರ್ಣಸೌಧ ಎಂಇಎಸ್ ಪುಂಡಾಟಕ್ಕೆ ಕಡಿವಾಣ ಹಾಕಲು ವರ್ಷಕ್ಕೊಮ್ಮೆ ಅಧಿವೇಶನ ನಡೆಸಿ ಆ ಪಕ್ಷಕ್ಕೆ ಎಚ್ಚರಿಕೆ ಘಂಟೆ ಬಾರಿಸಲು ಪ್ರಾರಂಭವಾದದ್ದು.

ಈ ಅಧಿವೇಶನ ಇತ್ತೀಚೆಗೆ ಹತ್ತರಲ್ಲಿ ಒಂದಾಗಿ ಜನ ಸಾಮಾನ್ಯರ ತೆರಿಗೆ ಹಣದ ದುಂದುವೆಚ್ಚವಾಗಿದ್ದು, ಬಿಟ್ಟರೆ ಬೇರೆ ಯಾವುದೇ ಉಪಯೋಗ ಕಂಡಂತೆ ಆಗಿಲ್ಲ ಎಂಬುದು ವಿಪರ್ಯಾಸ.

ಈ ಅಧಿವೇಶನದಲ್ಲಿ ನೂತನ ವಿಪಕ್ಷ ನಾಯಕನೊಂದಿಗೆ, ಪಕ್ಷದ ಹೊಸ ಅಧ್ಯಕ್ಷರೊಂದಿಗೆ ಅಖಾಡಕ್ಕೆ ಇಳಿದ ಬಿಜೆಪಿ ಯಾಕೋ ಸಿದ್ದರಾಮಯ್ಯ ಹೊಡೆತಕ್ಕೆ ನಲುಗಿತು ಎನಿಸಿತು.

ಮಹಿಳೆಯೊಬ್ಬರ ಹಲ್ಲೆ ಪ್ರಕರಣ ಖುದ್ದು ನೋಡಿಕೊಂಡು ಬಂದು ನಾಲ್ಕು ದಿನ ಬಾಯಿ ಮುಚ್ಚಿಕೊಂಡು ಕಡೇ ದಿನ ವಿಜಯೇಂದ್ರ ಅಬ್ಬರಿಸಿದ್ದರ ಹಿಂದಿನ ಮರ್ಮ ತಿಳಿಯಬೇಕಾಗಿದೆ. ಅಷ್ಟು ದಿನ ಅವರು ಮೌನವಾಗಿದ್ದೇಕೆ?

ಜಮೀರ್ ಹಾಗೂ ಡಿಕೆಶಿ ವಿಚಾರದಲ್ಲೂ ಎಲ್ಲೂ ಬಿಜೆಪಿಯ ಹೋರಾಟ ಪರಿಣಾಮಕಾರಿ ಎನಿಸಲೇ ಇಲ್ಲ. ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಭಾರತೀಯ ಜನತಾ ಪಕ್ಷ ಸಂಪೂರ್ಣ ಸೋತಿತು. ಈ ಒಗ್ಗಟ್ಟಿನ ಕೊರತೆಗೆ ಹೈಕಮಾಂಡ್ ಉತ್ತರಿಸಬೇಕಾಗಿದೆ. ಸದನದ ಹೊರಗೆ ವೀರಾವೇಷದಿಂದ ಮಾತನಾಡುವ ಬಿಜೆಪಿ ನಾಯಕರು ಒಳಗಡೆ ಸಿದ್ದರಾಮಯ್ಯ ಅವರನ್ನು ಎದುರಿಸುವ, ಅಷ್ಟೇ ಏಕೆ ಅವರು ಮಾನ ಮರ್ಯಾದೆ ಇಲ್ವಾ ಎಂದರೂ ಪ್ರತಿಭಟಿಸಲಾರದಷ್ಟು ಶರಣಾಗಿದ್ದು ಸರಿಯಲ್ಲ.

ಇನ್ನು ಕಾಂಗ್ರೆಸ್ ಪಕ್ಷವಂತೂ ಎಲ್ಲಾ ವಿಚಾರದಲ್ಲೂ ಏಕಪಕ್ಷೀಯ ಹಾಗೂ ದುರಹಂಕಾರಿ ಧೋರಣೆಯಿಂದ ಜನ ಸಾಮಾನ್ಯರನ್ನು ಸದ್ದಿಲ್ಲದ ಬೆಲೆ ಏರಿಕೆಯಿಂದ ಚಾಟಿ ಏಟು ನೀಡುತ್ತಲೇ ಇದೆ. ಉದಾಹರಣೆಗೆ, ಮೇ ತಿಂಗಳಲ್ಲಿ 110 ರೂ ಇದ್ದ ಉದ್ದಿನ ಬೇಳೆ ಈಗ 160 ರೂ.ಗೆ, ಹಾಗೂ 130 ರೂ ಇದ್ದ ತೊಗರಿಬೇಳೆ ಈಗ ರೂ 190 ಆಗಿದೆ. ಇದು ಸ್ಯಾಂಪಲ್.

ಹಾಲಿನ ದರ, ಎಲ್ಲಾ ದಿನಸಿ ಬೆಲೆ ಶೇಕಡಾ 40ರಷ್ಟು ಏರಿರುವುದು. ಕಾಂಗ್ರೆಸ್ಸನ್ನು 40% ಸರ್ಕಾರ ಎಂದು ಜನ ಸಾಮಾನ್ಯರು ಹಿಡಿಶಾಪ ಹಾಕುತ್ತಿದ್ದಾರೆ.

ಜನಹಿತದ ಬದ್ಧತೆ ಇರದ ಆಡಳಿತ ಸರ್ಕಾರ ಹಾಗೂ ವಿರೋಧಪಕ್ಷಗಳೇ ನೀವು ಬೆಳಗಾವಿ ಅಲ್ಲ ಎಲ್ಲೇ ಅಧಿವೇಶನ ಮಾಡಿದರೂ ಮತದಾರರ ಕಣ್ಣೊರೆಸುವ ತಂತ್ರದ ನಾಟಕದ ಭಾಗವಾಗುತ್ತಿರುವುದು ವಿಷಾದನೀಯ ಹಾಗೂ ಖಂಡನೀಯ. ಕರ್ನಾಟಕದ ಮತದಾರ ಜಾಗೃತನಾಗಬೇಕಾಗಿದೆ. ಹಾಗೆಯೇ ಮಾಧ್ಯಮಗಳೂ ಈ ಬಗ್ಗೆ ನಿಷ್ಪಕ್ಷಪಾತವಾಗಿ ವರ್ತಿಸಿ ತಮ್ಮ ಜವಾಬ್ದಾರಿ ಅರಿಯಬೇಕಾಗಿದೆ.

–ಶಿವಮೊಗ್ಗ ನಾ ದಿನೇಶ್ ಅಡಿಗ, ಮೈಸೂರು



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ, – 574 104 ಉಡುಪಿ ಜಿಲ್ಲೆ

ದಿಕ್ಕುದೆಸೆ

ಕೋವಿಡ್ ಅನಾಥರಿಗೆ ಪ್ರಧಾನಿಯ ಆಶ್ರಯ

ಕೊರೊನಾ ಮಹಾಮಾರಿಯು ದೇಶದಲ್ಲಿ ಲಕ್ಷಾಂತರ ಜೀವಗಳನ್ನು ಬಲಿ ಪಡೆದಿದೆ. ಈ ಮಹಾಮಾರಿಯಲ್ಲಿ ಸಾವಿರಾರು ಮಕ್ಕಳು ತಮ್ಮ ತಂದೆ ತಾಯಿಯರನ್ನು, ಕಾನೂನುಬದ್ಧ ಪಾಲಕರನ್ನು, ದತ್ತು ಪಡೆದ ಪೋಷಕರನ್ನು ಕಳೆದುಕೊಂಡು ಅನಾಥರಾದರು. ಕೇಂದ್ರ ಸರಕಾರ ಈ ಮಕ್ಕಳ ಹೊಣೆಗಾರಿಕೆಯನ್ನು ವಹಿಸುವ ಬಗ್ಗೆ ನಿರ್ಣಯಿಸಿತು. ಈ ಅನಾಥ ಮಕ್ಕಳಿಗೆ ಹೊಸ ಬದುಕನ್ನು, ಜೀವನಕ್ಕೆ ಭದ್ರತೆಯನ್ನು ಕಲ್ಪಿಸಲು **'ಪಿಎಂ ಕೇರ್ಸ್ ಫಾರ್ ಚಿಲ್ಡ್ರನ್'** ಯೋಜನೆಯನ್ನು ರೂಪಿಸಲಾಯಿತು. ಪ್ರಧಾನಿ ನರೇಂದ್ರ ಮೋದಿಯವರು ಮೇ 29, 2021ರಂದು ಈ ಯೋಜನೆಗೆ ಚಾಲನೆ ನೀಡಿದರು. ಅನಾಥ ಮಕ್ಕಳ ಬದುಕನ್ನು ಸುಂದರಗೊಳಿಸಲು ಕೇಂದ್ರವು ಚಾಲನೆ ನೀಡಿದ ಅತ್ಯಂತ ದೃಢ ಸಂಕಲ್ಪದಿಂದ ಕೂಡಿದ ಹೃದಯಸ್ಪರ್ಶಿ ಯೋಜನೆ ಇದಾಗಿದೆ.



ಪಿಎಂ ಕೇರ್ಸ್ ಯೋಜನೆಯು ಕೋವಿಡ್‌ನಲ್ಲಿ ಅನಾಥರಾದ ಮಕ್ಕಳಿಗೆ ಸಮಗ್ರ ಆರೈಕೆ, ಸುಸ್ಥಿರ ರೂಪದಲ್ಲಿ ಬದುಕಿಗೆ ಭದ್ರತೆ, ರಕ್ಷಣೆ ನೀಡಲಿದೆ. ಕೊರೊನಾದಿಂದಾಗಿ ದಿ. 11.03.2020 ರಿಂದ ದಿನಾಂಕ 28.02.2022ರ ಅವಧಿಯಲ್ಲಿ ಅನಾಥರಾದವರಿಗೆ ಈ ಯೋಜನೆಯಲ್ಲಿ ಹೆಸರು ನೋಂದಾಯಿಸುವ ಅವಕಾಶ ನೀಡಲಾಗಿತ್ತು. ಪಿಎಂ ಕೇರ್ಸ್ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಅನುಷ್ಠಾನ ಮಾಡುತ್ತದೆ.

ಪಿಎಂ ಕೇರ್ಸ್ ಯೋಜನೆಯಡಿ ಅನಾಥರಾದವರಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯದೊಂದಿಗೆ ಉಚಿತ ಶಿಕ್ಷಣ ದೊರೆಯುವುದು. ಆರು ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕ ಆಹಾರ, ಶಾಲಾಪೂರ್ವ ಶಿಕ್ಷಣ, ಆರೋಗ್ಯ ರಕ್ಷಣೆ ಹಾಗೂ ತಪಾಸಣೆಯನ್ನು ಅಂಗನವಾಡಿಗಳ ಮೂಲಕ ನೀಡಲಾಗುವುದು. ಹತ್ತು ವರ್ಷದೊಳಗಿನ ಮಕ್ಕಳಿಗೆ ಸರ್ವ ಶಿಕ್ಷಾ ಅಭಿಯಾನದಡಿ ಪಠ್ಯ ಪುಸ್ತಕ, ಸಮವಸ್ತ್ರ ನೀಡಿಕೆ, ಬೋಧನಾ ಶುಲ್ಕ, ಲೇಖನ ಸಾಮಗ್ರಿಗಳು, ವಾಹನ ಸೌಲಭ್ಯ ಉಚಿತವಾಗಿ ಲಭ್ಯವಾಗುವುದು. ಸಂಬಂಧಿಕರ ಮನೆಗಳಲ್ಲಿರುವ ಹನ್ನೊಂದರಿಂದ 18 ವರ್ಷದೊಳಗಿನ ಮಕ್ಕಳಿಗೆ ಸಾರ್ವಜನಿಕ ಶಾಲೆ, ಸರ್ಕಾರಿ ಅನುದಾನಿತ ಶಾಲೆ, ಕೇಂದ್ರೀಯ ಶಿಕ್ಷಣ ಅಥವಾ ಖಾಸಗಿ ಶಾಲೆಗಳಿಗೆ ಸೇರಿಸಲು ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ. ಹತ್ತು ವರ್ಷ ಮೇಲ್ಪಟ್ಟ ವಿದ್ಯಾರ್ಥಿಯು ಸರಕಾರಿ ವಸತಿ ಶಾಲೆಗಳಲ್ಲಿನ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಸರಕಾರದ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ, ನೇತಾಜಿ ವಸತಿ ವಿದ್ಯಾಲಯ, ಏಕಲವ್ಯ ಮಾದರಿ ಶಾಲೆಗಳು, ಸೈನಿಕ ಶಾಲೆಗಳು, ನವೋದಯ ಶಾಲೆಗಳಲ್ಲಿ ದಾಖಲಾತಿ ಪಡೆವ ಅವಕಾಶವಿದೆ. ಉನ್ನತ ಶಿಕ್ಷಣ ಪಡೆಯಲು ಸರಕಾರವು ಅಗತ್ಯ ಶೈಕ್ಷಣಿಕ ಸಾಲ ಸೌಲಭ್ಯ ಒದಗಿಸಿ, ಬಡ್ಡಿಯನ್ನು ಪಿಎಂ ಕೇರ್ಸ್ ಯೋಜನೆಯಡಿ ಪಾವತಿಸುವುದು.

ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯನ್ವಯ (ಪಿಎಂ ಜೆಎವೈ) ಗುರುತಿಸಿ, ಪರಿಶೀಲಿಸಿ, ದೃಢೀಕರಿಸಿದ ನಂತರ ಅರ್ಹ ಮಕ್ಕಳಿಗೆ ರೂ. 5 ಲಕ್ಷದವರೆಗೆ ಉಚಿತ ಆರೋಗ್ಯ ವಿಮೆ ಮಾಡಿ ಪ್ರೀಮಿಯಂ ಅನ್ನು ಸರಕಾರವೇ ಪಾವತಿಸುತ್ತದೆ. ಈ ವಿಮೆಯಲ್ಲಿ ವೈದ್ಯಕೀಯ ಪರೀಕ್ಷೆ, ಚಿಕಿತ್ಸೆ ಸಮಾಲೋಚನೆ, ಆಹಾರ, ವಸತಿ ಸೌಲಭ್ಯ, ಚಿಕಿತ್ಸಾ ಪೂರ್ವ ವಸತಿ ಸೌಲಭ್ಯ, ತೀವ್ರ ನಿಗಾ ಸೇವೆ, ಔಷಧಿಗಳು, ರೋಗ ಪರೀಕ್ಷೆ ಹಾಗೂ ಚಿಕಿತ್ಸಾ ನಂತರದ ಹದಿನೈದು ದಿನಗಳ ವರೆಗಿನ ವೆಚ್ಚಗಳನ್ನು ಪಡೆವ ಅವಕಾಶವಿದೆ.



ಪಿಎಂ ಕೇರ್ಸ್ ಯೋಜನೆಯಡಿ 33 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಸುಮಾರು ಒಟ್ಟು 611 ಜಿಲ್ಲೆಗಳಿಂದ ಒಟ್ಟು 9042 ಅರ್ಜಿಗಳು ಪಿಎಂ ಕೇರ್ಸ್ ಪೋರ್ಟಲ್‌ಗೆ ಬಂದಿರುತ್ತವೆ. ಇದರಲ್ಲಿ 31 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶದ 537 ಜಿಲ್ಲೆಗಳ ಒಟ್ಟು 4345 ಅರ್ಜಿಗಳಿಗೆ ಸ್ವೀಕೃತಿ ದೊರೆತಿದ್ದು ಯೋಜನೆಯ ಪ್ರಯೋಜನವನ್ನು ನೀಡಲಾಗುತ್ತಿದೆ. ರಾಜ್ಯವಾರು ಮಾಹಿತಿಯಂತೆ ರಾಜಸ್ಥಾನದ 206 ಮಕ್ಕಳಿಗೆ 16.84 ಕೋಟಿ ರೂ. ಹಾಗೂ ಅಸ್ಸಾಂನ 55 ಮಕ್ಕಳಿಗೆ ರೂ. 4.44 ಕೋಟಿಯಷ್ಟು ಸಹಾಯ ನೀಡಲಾಗಿದೆ. ಕರ್ನಾಟಕದ 18 ಜಿಲ್ಲೆಗಳ 49 ಮಕ್ಕಳು ಪಿಎಂ ಕೇರ್ಸ್ ಯೋಜನೆಗೆ ಸೇರ್ಪಡೆಗೊಂಡಿದ್ದಾರೆ.

ಆರ್ಥಿಕ ಭದ್ರತೆ

ಮಗುವಿಗೆ ಹದಿನೆಂಟು ವರ್ಷ ತುಂಬಿದ ಮೇಲೆ ಒಟ್ಟು ಕಾರ್ಪಸ್ ನಿಧಿ ರೂ. 10 ಲಕ್ಷದಷ್ಟು ಸಂಗ್ರಹವಾಗುವಷ್ಟು ಮೊತ್ತವನ್ನು ಲಾಭಾರ್ಥಿಯ ಅಂಚೆ ಕಚೇರಿ ಖಾತೆಗೆ ನೇರ ವರ್ಗಾಯಿಸಲಾಗುವುದು. ಲಾಭಾರ್ಥಿಗೆ ಹದಿನೆಂಟು ವರ್ಷದ ನಂತರ 23 ವರ್ಷ ವಯಸ್ಸಿನವರೆಗೆ ಮಾಸಿಕ ರೂ. 4000/– ಸ್ಟೈಪಂಡ್ ನೀಡಲಾಗುತ್ತದೆ. 23 ವರ್ಷದ ನಂತರ ಲಾಭಾರ್ಥಿಯ ಬ್ಯಾಂಕ್ ಖಾತೆಗೆ ರೂ. 10 ಲಕ್ಷವನ್ನು ನೇರವಾಗಿ ವರ್ಗಾಯಿಸಲಾಗುತ್ತದೆ. ಆತ/ಆಕೆಗೆ ಹದಿನೆಂಟು ವರ್ಷವಾಗುವವರೆಗೆ ಜಂಟಿ ಖಾತೆದಾರರಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಇರುತ್ತಾರೆ. 1–12 ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ರೂ. 20 ಸಾವಿರ ವಿದ್ಯಾರ್ಥಿ ವೇತನ ದೊರೆಯುವುದು. ಈ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯವು ನೋಡಲ್ ಸಚಿವಾಲಯವಾಗಿರುತ್ತದೆ. ಸಾಮಾಜಿಕ ನ್ಯಾಯ ಅಥವಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗಗಳು ರಾಜ್ಯ ಮಟ್ಟದಲ್ಲಿ ನೋಡಲ್ ಏಜೆನ್ಸಿಗಳಾಗಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳು ನೋಡಲ್ ಅಧಿಕಾರಿಗಳಾಗಿರುತ್ತಾರೆ. ಮಕ್ಕಳ ಅವಶ್ಯಕತೆಗನುಸಾರ ಸೌಲಭ್ಯ ಮತ್ತು ಸೇವೆಗಳನ್ನು ಒದಗಿಸಲು ಒಂದಕ್ಕಿಂತ ಹೆಚ್ಚು ಸಚಿವಾಲಯಗಳು ಮತ್ತು ಸರಕಾರಿ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಸರಕಾರದ ಸಾಕ್ಷರತಾ ಖಾತೆಯು ಮಕ್ಕಳಿಗೆ ಶೈಕ್ಷಣಿಕ ಸಹಾಯ ಖಾತ್ರಿಪಡಿಸುತ್ತದೆ. ಉನ್ನತ ಶಿಕ್ಷಣ ಸಚಿವಾಲಯವು ಶಿಕ್ಷಣ ಸಾಲ–ವಿದ್ಯಾರ್ಥಿ ವೇತನ ನೀಡುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಲಯವು ಜೀವ ವಿಮಾ ಸೌಲಭ್ಯ ಖಾತ್ರಿಪಡಿಸುತ್ತದೆ. ಆರ್ಥಿಕ ಸಚಿವಾಲಯವು ಠೇವಣಿ ಹೂಡಿಕೆಗಳಿಗೆ ಮಾರ್ಗದರ್ಶನ ನೀಡುತ್ತದೆ. ಸಾಮಾಜಿಕ ನ್ಯಾಯ ಮತ್ತು ಉದ್ಯೋಗ ಸಚಿವಾಲಯ, ಬುಡಕಟ್ಟು ಸಮುದಾಯದ ಸಚಿವಾಲಯಗಳು ವಿದ್ಯಾರ್ಥಿವೇತನಕ್ಕೆ ಅರ್ಹರನ್ನು ಗುರುತಿಸುತ್ತದೆ.

ತಳಮಟ್ಟದಲ್ಲಿ ಪ್ರಕ್ರಿಯೆ

ಜಿಲ್ಲಾ ಮ್ಯಾಜಿಸ್ಟ್ರೇಟ್, ಪೊಲೀಸ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ನಾಗರಿಕ ಸಮಿತಿಗಳು, ಗ್ರಾಮ ಪಂಚಾಯತ್, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಅರ್ಹರನ್ನು ಗುರುತಿಸಿ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡುತ್ತಾರೆ. ಗುರುತಿಸಿದ ಮಕ್ಕಳ ಮಾಹಿತಿಯನ್ನು ಒಂದು ವಾರದೊಳಗೆ ಆನ್‌ಲೈನ್ ಮೂಲಕ ನಿಗದಿತ ಪೋರ್ಟಲ್‌ನಲ್ಲಿ ದಾಖಲಿಸಬೇಕು. ಅನಂತರ ದಾಖಲಿತ ಮಾಹಿತಿಗಳನ್ನು ಹದಿನೈದು ದಿನದೊಳಗೆ ಮಕ್ಕಳ ಕಲ್ಯಾಣ ಸಮಿತಿ ಸಂಪೂರ್ಣ ಪರಿಶೀಲಿಸಿ ಪೋರ್ಟಲ್‌ನಲ್ಲಿ ದಾಖಲಿಸುತ್ತದೆ. ಮಕ್ಕಳ ಕಲ್ಯಾಣ ಸಮಿತಿಯ ಶಿಫಾರಸು ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟರು ದೃಢೀಕರಿಸಿದ ನಂತರ ಅರ್ಹ ಮಕ್ಕಳಿಗೆ ಯೋಜನೆಯ ಲಾಭ ದೊರೆಯಲಾರಂಭವಾಗುತ್ತದೆ. ಮಕ್ಕಳ ಕಲ್ಯಾಣ ಸಚಿವಾಲಯ ನೀಡಿದ ಮಾಹಿತಿಯಂತೆ ಈ ಯೋಜನೆಯಲ್ಲಿ ದೇಶಾದ್ಯಂತ ಇದುವರೆಗೆ ಸುಮಾರು 4000 ಮಕ್ಕಳು ಸೇರ್ಪಡೆಯಾಗಿದ್ದು, ಅವರಿಗೆ ಸಹಾಯ ನೀಡಲಾಗುತ್ತಿದೆ.

ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗವು ನೀಡಿರುವ ಮಾಹಿತಿಯಂತೆ ದೇಶದಲ್ಲಿ ಮಾರ್ಚ್ 2020ರಿಂದ ಮೇ 2021ರ ಅವಧಿಯಲ್ಲಿ ಸುಮಾರು 147492 ಮಕ್ಕಳು ತಮ್ಮ ತಂದೆ, ತಾಯಿ ಅಥವಾ ಓರ್ವರನ್ನು ಕಳೆದುಕೊಂಡಿದ್ದಾರೆ. ಇದರಲ್ಲಿ ಕೋವಿಡ್‌ನಿಂದಾಗಿಯೇ ಅನಾಥರಾದ ಮಕ್ಕಳ ಸಂಖ್ಯೆ ನಿಖರವಾಗಿ ದೊರೆತಿಲ್ಲ. ಸಂಬಂಧಿತ ಕೇಂದ್ರ ಸಚಿವಾಲಯವು ನೀಡಿರುವ ಮಾಹಿತಿಯಂತೆ ಪಿಎಂ ಕೇರ್ಸ್ ಯೋಜನೆಯಡಿ ಮೂವತ್ತ ಮೂರು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಒಟ್ಟು 611 ಜಿಲ್ಲೆಗಳಿಂದ ಒಟ್ಟು 9042 ಅರ್ಜಿಗಳು ಪಿಎಂ ಕೇರ್ಸ್ ಪೋರ್ಟಲ್‌ಗೆ ಬಂದಿರುತ್ತವೆ. ಇದರಲ್ಲಿ ಮೂವತ್ತೊಂದು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶದ 537 ಜಿಲ್ಲೆಗಳ ಒಟ್ಟು 4345 ಅರ್ಜಿಗಳಿಗೆ ಸ್ವೀಕೃತಿ ದೊರೆತಿದ್ದು ಯೋಜನೆಯ ಪ್ರಯೋಜನವನ್ನು ನೀಡಲಾಗುತ್ತಿದೆ. ರಾಜ್ಯವಾರು ಮಾಹಿತಿಯಂತೆ ರಾಜಸ್ಥಾನದ 206 ಮಕ್ಕಳಿಗೆ 16.84 ಕೋಟಿ ರೂ. ಹಾಗೂ ಅಸ್ಸಾಂನ 55 ಮಕ್ಕಳಿಗೆ ರೂ. 4.44 ಕೋಟಿಯಷ್ಟು ಸಹಾಯ ನೀಡಲಾಗಿದೆ. ಕರ್ನಾಟಕದ ಹದಿನೆಂಟು ಜಿಲ್ಲೆಗಳ 49 ಮಕ್ಕಳು ಪಿಎಂ ಕೇರ್ಸ್ ಯೋಜನೆಗೆ ಸೇರ್ಪಡೆಗೊಂಡಿದ್ದಾರೆ. ವಾಸ್ತವವಾಗಿ ಸರಕಾರ, ಸರಕಾರೇತರ ಸಂಸ್ಥೆಗಳಿಗೆ ಕೋವಿಡ್‌ನಿಂದಾಗಿ ಅನಾಥರಾದ ಮಕ್ಕಳ ಬಗ್ಗೆ ನಿಖರ ಮಾಹಿತಿ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ಸರಕಾರಗಳು ಸಮರ್ಪಕ ರೀತಿಯಲ್ಲಿ ಸಮೀಕ್ಷೆ ನಡೆಸಿದಲ್ಲಿ ಎಲ್ಲ ಅರ್ಹರಿಗೆ ಈ ಯೋಜನೆಯ ಪ್ರಯೋಜನ ನೀಡಬಹುದಿತ್ತು.

ಪ್ರಧಾನಿ ಮೋದಿಯವರ ದೂರದರ್ಶಿತ್ವದಿಂದಾಗಿ ಪಿಎಂ ಕೇರ್ಸ್ ಯೋಜನೆ ರೂಪುಗೊಂಡಿದ್ದು, ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ಹೊಸ ಬದುಕು, ಭರವಸೆ, ಭದ್ರತೆ ವಿಶ್ವಾಸವನ್ನು ನೀಡಿದೆ.

ವಿಶ್ವ ಉದ್ಯಮ ಕ್ಷೇತ್ರದಲ್ಲಿ 2050ರ ವೇಳೆಗೆ ಶೇ.40ರಷ್ಟು ಭಾರತೀಯರು!

● ಬೆನೆಟ್ ಕೋಲ್ಮನ್ ಅಂಡ್ ಕೋ. ಲಿ.ನ ವ್ಯವಸ್ಥಾಪಕ ನಿರ್ದೇಶಕ ವಿನೀತ್ ಜೈನ್ ಅಭಿಮತ ● ಜಿಐಟಿ ಅಂತಾರಾಷ್ಟ್ರೀಯ ಸಮಾವೇಶದ ಸಮಾರೋಪ ಭಾಷಣ

ಮೈಸೂರು, ಡಿ.16(ಎಂಕೆ)–ವಿಶ್ವದ ಪ್ರಖ್ಯಾತ ಮಲ್ಟಿ ನ್ಯಾಷನಲ್ ಕಂಪನಿಗಳಲ್ಲಿ ಭಾರತೀಯರ ಪಾಲುದಾರಿಕೆ ದೊಡ್ಡಮಟ್ಟದಲ್ಲಿದ್ದು, 2050ರ ವೇಳೆಗೆ ವಿಶ್ವ ಉದ್ಯಮ ಕ್ಷೇತ್ರದಲ್ಲಿನ ಶೇ.40ರಷ್ಟು ಭಾಗದಲ್ಲಿ ಭಾರತೀಯರೇ ಇರಲಿದ್ದಾರೆ ಎಂದು ಬೆನೆಟ್ ಕೋಲ್ಮನ್ ಅಂಡ್ ಕೋ. ಲಿಮಿಟೆಡ್(ಟೈಮ್ಸ್ ಗ್ರೂಪ್)ನ ವ್ಯವಸ್ಥಾಪಕ ನಿರ್ದೇಶಕ ವಿನೀತ್ ಜೈನ್ ಹೇಳಿದರು.

ನಗರದ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕೋಝಿಕೋಡ್(IIM Kozhikode) ಆಯೋಜಿಸಿದ್ದ 'ಭಾರತೀಯ ಚಿಂತನೆಯನ್ನು ಜಾಗತೀಕರಣಗೊಳಿಸುವಿಕೆ' (Globalizing Indian thought GIT-2023) ಶೀರ್ಷಿಕೆಯ 4ನೇ ಅಂತಾರಾಷ್ಟ್ರೀಯ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದ ದೊಡ್ಡ ಶಕ್ತಿಯೇ ಮಾನವ ಸಂಪನ್ಮೂಲವಾಗಿದ್ದು, ಪ್ರಪಂಚದಾದ್ಯಂತ ಭಾರತೀಯರ ಕೊಡುಗೆ ಪ್ರಮುಖವಾಗಿದೆ. ಇದಕ್ಕೆ ಭಾರತೀಯರ ಚಿಂತನೆ, ಇಲ್ಲಿನ ಸಂಸ್ಕೃತಿ ಮುಖ್ಯ ಕಾರಣವಾಗಿದೆ ಎಂದು ಹೇಳಿದರು.



ವಿನೀತ್ ಜೈನ್

ದೇಶದಲ್ಲಿ 495 ಮಿಲಿಯನ್ ಜನರು ವಿವಿಧ ವೃತ್ತಿಯಲ್ಲಿ ತೊಡಗಿದ್ದು, 2050ರ ವೇಳೆಗೆ 1.1 ಬಿಲಿಯನ್ ಆಗಲಿದೆ. ಮುಂದಿನ 27 ವರ್ಷಗಳಲ್ಲಿ ವಿಶ್ವದ ಶೇ.40ರಷ್ಟು ಕಾರ್ಯಪಡೆ(ಕಾರ್ಮಿಕರು) ಭಾರತೀಯರೇ ಆಗಿರಲಿದ್ದಾರೆ. ಪ್ರತಿವರ್ಷ 1.5 ಬಿಲಿಯನ್ ಪದವೀಧರರು ಹೊರಹೊಮ್ಮುತ್ತಿದ್ದು, ವಿಶ್ವ ವೇದಿಕೆಯಲ್ಲಿ ಭಾರತೀಯರು ಯಾವ ರೀತಿಯಲ್ಲಿ ಮುನ್ನುಗ್ಗಲಿದ್ದಾರೆ ಎಂಬುದು ಕೂಡ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಇಂತಹ ಜಾಗತಿಕ ಸಮಾವೇಶಗಳ ಮೂಲಕ ಯುವ ಪದವೀಧರರನ್ನು ಪ್ರೇರೇಪಿಸುವ ಕಾರ್ಯ ನಿರಂತರವಾಗಿರಬೇಕು ಎಂದರು.

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯು ಭಾರತವು ಈಗಾಗಲೇ ಪ್ರಮುಖ ಕೊಡುಗೆದಾರ ಎಂದು ಹೇಳಿದೆ. ಪ್ರಪಂಚದಲ್ಲಿ ಸುಮಾರು 17.5 ಮಿಲಿಯನ್ ಭಾರತೀಯ ಪ್ರತಿಭೆಗಳು ವಿದೇಶದಲ್ಲಿ ನೆಲೆಸಿದ್ದಾರೆ. ಭಾರತೀಯರು ವಿವಿಧ ಸಂಪ್ರದಾಯಗಳು ಮತ್ತು ಭಾಷೆಗಳೊಂದಿಗೆ ಬಹು ಸಮುದಾಯಗಳು ಮತ್ತು ಸಂಸ್ಕೃತಿಗಳ ಸುತ್ತಲೂ ಬೆಳೆಯುತ್ತಾರೆ. ಅಲ್ಲದೆ ಮಾರ್ಗದರ್ಶನ ಮಾಡುವ ಪರಿಣತರಾಗಿ ಅವರು ರೂಪುಗೊಳ್ಳುತ್ತಾರೆ. 2030ರ ನಂತರ ಪ್ರತಿ ತಿಂಗಳು ಒಂದು ಮಿಲಿಯನ್ ಯುವ ಭಾರತೀಯರು ಉದ್ಯೋಗಿಗಳಾಗಿ ಸೇರ್ಪಡೆಗೊಳ್ಳುವುದರೊಂದಿಗೆ, ಭಾರತವು ವಿಶ್ವದಲ್ಲಿಯೇ ಹೆಚ್ಚುವರಿ ಪ್ರತಿಭೆಯನ್ನು ಹೊಂದಿರುವ ಏಕೈಕ ದೇಶವಾಗಲಿದೆ. ಭಾರತೀಯರು ಅತ್ಯಂತ ಶ್ರಮಜೀವಿಗಳು, ನವೀನರು ಹಾಗೂ ಹೊಂದಿಕೊಳ್ಳಬಲ್ಲವರು ಎಂಬುದನ್ನು ಈಗಾಗಲೇ ಸಾಬೀತುಪಡಿಸಿದ್ದಾರೆ ಎಂಬುದಕ್ಕೆ ಪ್ರಪಂಚದ ಅತ್ಯಂತ ಪ್ರಸಿದ್ಧ ಸಂಸ್ಥೆಗಳ ಆಡಳಿತ ಚುಕ್ಕಾಣಿ ಹಿಡಿದಿರುವುದೇ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ವಿಶ್ವದ ಶ್ರೀಮಂತ ಕಂಪನಿಗಳ ಸಿಇಓಗಳಾಗಿ ಶೇ.10ಕ್ಕಿಂತ ಹೆಚ್ಚು ಭಾರತೀಯ ಹಾಗೂ ಭಾರತೀಯ ಮೂಲದವರಿದ್ದಾರೆ. ಜಾಗತಿಕ ಮಟ್ಟದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಭಾರತೀಯರೇ ಅಧ್ಯಕ್ಷರು ಮತ್ತು ಡೀನ್‌ಗಳಾಗಿದ್ದಾರೆ. 15ಕ್ಕೂ ಹೆಚ್ಚು ದೇಶಗಳಲ್ಲಿ ಕ್ಯಾಬಿನೆಟ್ ಶ್ರೇಣಿಯನ್ನು ಹೊಂದಿದ್ದಾರೆ. ಆಸ್ಕರ್ ಅವಾರ್ಡ್ ಪಡೆಯುವ ಮಟ್ಟಕ್ಕೆ ಭಾರತೀಯ ಮನರಂಜನಾ ಉದ್ಯಮ ಬೆಳೆದಿದೆ. ಕ್ರೀಡೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಕಳೆದ ಏಷ್ಯನ್ ಗೇಮ್ಸ್ 107 ಪದಕಗಳನ್ನು ಗೆಲ್ಲುವ ಮೂಲಕ ಚಾರಿತ್ರಿಕ ಇತಿಹಾಸ ಬರೆದಿದ್ದಾರೆ ಎನ್ನುತ್ತಲೇ ಭಾರತೀಯ ಚಿಂತನಾ ವ್ಯವಸ್ಥೆಯ ಗುಣಮಟ್ಟ, ಪ್ರೇರಕಶಕ್ತಿಯಾಗಿರುವ ಕಲೆ, ಸಂಸ್ಕೃತಿಯ ಮಹತ್ವ ತಿಳಿಸಿದರು.

ಭಾರತದ ಕಲೆ, ಸಂಸ್ಕೃತಿ ಜಾಗತೀಕರಣಕ್ಕೆ ಮೈಸೂರು ಅತ್ಯುತ್ತಮ ಸ್ಥಳ

ಜಿಐಟಿ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಮೈಸೂರು ಆಯ್ಕೆ ಮಾಡಿಕೊಂಡಿದ್ದಕ್ಕೆ ಕೋಝಿಕೋಡ್ ಐಐಎಂ ನಿರ್ದೇಶಕ ಪ್ರೊ.ದೇಬಾಶಿಸ್ ಚಟರ್ಜಿ ಸಮರ್ಥನೆ

*ಭಾರತೀಯ ಚಿಂತನೆ, ಕಲೆ–ಸಂಸ್ಕೃತಿ ವಿಶ್ವಕ್ಕೆ ಮಾದರಿಯಾಗಬೇಕು. ಈ ನಿಟ್ಟಿನಲ್ಲಿ ಭಾರತದಲ್ಲಿರುವ ಪ್ರತಿಭಾನ್ವಿತರ ಮೂಲಕ ಯುವ ಪೀಳಿಗೆಯನ್ನು ಪ್ರೇರೇಪಿಸುವ ಧ್ಯೇಯೋದ್ದೇಶದೊಂದಿಗೆ ಕೇರಳ ಕೋಝಿಕೋಡ್‌ನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆ 'ಭಾರತೀಯ ಚಿಂತನೆಯನ್ನು ಜಾಗತೀಕರಣಗೊಳಿಸುವಿಕೆ' (**Globalizing Indian thought GIT-2023**) ಶೀರ್ಷಿಕೆಯಡಿ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸುತ್ತಿದೆ ಎಂದು ತಿಳಿಸಿರುವ ಸಂಸ್ಥೆಯ ನಿರ್ದೇಶಕ ಪ್ರೊ.ದೇಬಾಶಿಸ್ ಚಟರ್ಜಿ, 'ಮೈಸೂರು ಮಿತ್ರ'ನಲ್ಲಿ ಸಂಸ್ಥೆ ಹಾಗೂ 4ನೇ ಯಶಸ್ವಿ ಸಮಾವೇಶದ ಕುರಿತು ಮಾತನಾಡಿದ್ದಾರೆ.*

ಮೈಸೂರು ಮಿತ್ರ: ಮೈಸೂರಿನಲ್ಲಿ ಜಿಐಟಿ–2023 ಸಮಾವೇಶ ಆಯೋಜಿಸಲು ಕಾರಣವೇನು?

ಚಟರ್ಜಿ: ಮೈಸೂರು ಭಾರತದ ಪಾರಂಪರಿಕ ರಾಜಧಾನಿ. ಭಾರತದ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಜಾಗತೀಕರಣಗೊಳಿಸಲು ಇದು ಅತ್ಯುತ್ತಮ ಸ್ಥಳವಾಗಿದೆ. ಮೈಸೂರು ಮಹಾರಾಜರ ಕೊಡುಗೆಯೊಂದಿಗೆ ವಿಖ್ಯಾತಿ ಪಡೆದಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಬೆಳೆದಿದೆ. ದೇಶ–ವಿದೇಶಗಳಿಂದ ಬರುವ ಪ್ರವಾಸಿಗರ ನೆಚ್ಚಿನ ಸ್ಥಳವಾಗಿರುವ ಮೈಸೂರು ಯೋಗ ನಗರಿಯೂ ಆಗಿರುವುದರಿಂದ ಜಿಐಟಿ ಸಮಾವೇಶಕ್ಕೆ ಸೂಕ್ತ ಸ್ಥಳವೆಂದು ನಿರ್ಧರಿಸಲಾಯಿತು.

ಮಿತ್ರ ಜಿಐಟಿ ಅಂತಾರಾಷ್ಟ್ರೀಯ ಸಮಾವೇಶದ ಮುಖ್ಯ ಉದ್ದೇಶವೇನು?

ಚಟರ್ಜಿ: ಭಾರತ ಈಗಾಗಲೇ ಜಾಗತಿಕವಾಗಿ ಬೆಳೆದಿದ್ದು, 1.4 ಶತಕೋಟಿ ಜನರಿರುವ ಸುಸಂಸ್ಕೃತ ದೇಶವಾಗಿದೆ. ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯುಳ್ಳ, ನಂಬರ್ ಓನ್ ತಂತ್ರಜ್ಞಾನ ಹಾಗೂ ಸ್ಟಾರ್ಟ್‌ಅಪ್ ಹೊಂದಿರುವ ದೇಶ. ಬಲಿಷ್ಠ ಜಾಗತಿಕ ರಾಷ್ಟ್ರವಾಗಿ ರೂಪುಗೊಂಡಿರುವ ಭಾರತದಲ್ಲಿನ ಕಾರ್ಯವೈಖರಿಯನ್ನು ವಿಶ್ವಕ್ಕೆ ತಿಳಿಸುವುದು ಹಾಗೂ ನಮ್ಮ ದೇಶದ ಸಂಸ್ಕೃತಿಯನ್ನು ಮತ್ತಷ್ಟು ಜಾಗತೀಕರಣಗೊಳಿಸುವುದಾಗಿದೆ.



ಪ್ರೊ. ದೇಬಾಶಿಸ್ ಚಟರ್ಜಿ

ಮಿತ್ರ: ಜಿಐಟಿ ಸಮಾವೇಶದ ಕಾರ್ಯವೈಖರಿ ಹೇಗಿರಲಿದೆ?

ಚಟರ್ಜಿ: ಐಐಎಂಕೆ ಸಂಸ್ಥೆ ದೇಶದ ಕಲೆ–ಸಂಸ್ಕೃತಿ ಉಳಿಸುವ–ಬೆಳೆಸುವ ಧ್ಯೇಯದಿಂದ ಅಂತಾರಾಷ್ಟ್ರೀಯ ಸಮಾವೇಶ ಆಯೋಜಿಸುತ್ತಿದೆ. ಸಮಾವೇಶದಲ್ಲಿ ಭಾರತೀಯ ಸಾಧಕ ಪ್ರತಿಭೆಗಳನ್ನು ಆಹ್ವಾನಿಸಿ, ಯುವ ಪೀಳಿಗೆಗೆ ಮಾರ್ಗದರ್ಶನ ನೀಡಲಾಗುವುದು. ಹಾಗೆಯೇ ದೇಶದ ಕಲೆ–ಸಂಸ್ಕೃತಿಯ ಬಗ್ಗೆ ಮಾಹಿತಿ ನೀಡಲಾಗುವುದು. ಅದಕ್ಕಾಗಿ ಸ್ಥಳಿಯ ಕಾಲೇಜು ವಿದ್ಯಾರ್ಥಿಗಳನ್ನು ಆಹ್ವಾನಿಸುತ್ತೇವೆ. ಮೂರು ದಿನಗಳ ಸಮಾವೇಶದಲ್ಲಿ ಚರ್ಚೆ, ಸಂವಾದ, ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಾಡಾಗಿದ್ದವು.

ಮಿತ್ರ: ಎಂಬಿಎ ವಿದ್ಯಾರ್ಥಿಗಳಿಗೆ ತಮ್ಮ ಸಲಹೆ ಏನು?

ಚಟರ್ಜಿ: ಎಂಬಿಎ ವಿದ್ಯಾರ್ಥಿಗಳು ಮುಖ್ಯವಾಗಿ ತಮ್ಮಲ್ಲಿನ ಕೌಶಲ್ಯತೆ ವೃದ್ಧಿಸಿಕೊಳ್ಳುವ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಉದ್ಯೋಗಿ ನಂತರ ಉದ್ಯಮಿಗಳಾಗಿ ರೂಪುಗೊಳ್ಳುವುದು ಅತೀ ಮುಖ್ಯವಾಗಿದೆ. ಉದ್ಯಮಿಗಳು ಹೆಚ್ಚಾದಂತೆ ಉದ್ಯೋಗ ಸೃಷ್ಟಿ ಹೆಚ್ಚಾಗುತ್ತದೆ. ಇದರಿಂದ ದೇಶದ ಆರ್ಥಿಕತೆ ಇನ್ನಷ್ಟು ಉತ್ತಮವಾಗುತ್ತದೆ.

ಮಿತ್ರ: ಐಐಎಂಕೆ ಸಂಸ್ಥೆಯ ಸಾಧನೆ ಹೇಗಿದೆ?

ಚಟರ್ಜಿ: ದೇಶದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳಲ್ಲಿಯೇ ಐಐಎಂಕೆ 3 ಸ್ಥಾನದಲ್ಲಿದೆ. ವಿಶ್ವದಲ್ಲಿ 75ನೇ ಸ್ಥಾನ ಪಡೆದಿದೆ. ಸಣ್ಣ ನಗರದಲ್ಲಿ ಆರಂಭವಾಗಿ ದೊಡ್ಡಮಟ್ಟದಲ್ಲಿ ಬೆಳೆದಿದ್ದು, ಪ್ರತಿವರ್ಷ 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ, ಪಿಹೆಚ್.ಡಿ ಪಡೆದುಕೊಳ್ಳುವುದಲ್ಲದೆ ದೇಶ–ವಿದೇಶಗಳಲ್ಲಿ ಉದ್ಯೋಗ ಪಡೆದು, ಉದ್ಯಮಿಗಳಾಗಿ ಸಾಧನೆ ಮಾಡುತ್ತಿದ್ದಾರೆ.

ಮಿತ್ರ: ಜಿಐಟಿ–2023 ಸಮಾವೇಶ ಫಲಶ್ರುತಿ?

ಚಟರ್ಜಿ: ಖಂಡಿತವಾಗಿ ಜಿಐಟಿ–2023, 4ನೇ ಅಂತಾರಾಷ್ಟ್ರೀಯ ಸಮಾವೇಶ ಅತ್ಯಂತ ಯಶಸ್ವಿಯಾಗಿದೆ. ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಅವರಿಂದ ಚಾಲನೆಗೊಂಡು ಸುಜುಕಿ ಮೋಟಾರ್ ಕಾರ್ಪೊರೇಷನ್ ನಿರ್ದೇಶಕ ಕಿಂಜಿ ಸೈಟೊ, ಡಿಆರ್‌ಡಿಓ ಮಾಜಿ ನಿರ್ದೇಶಕರಾದ ಡಾ.ಟೆಸ್ಸಿ ಥಾಮಸ್ ಸೇರಿದಂತೆ ಹಲವು ಸಾಧಕರು ಉಪನ್ಯಾಸ ನೀಡಿದ್ದಾರೆ. ಗ್ರಾಮ್ಮೀ ಅವಾರ್ಡ್ ವಿನ್ನರ್ ವಿಶ್ವ ಮೋಹನ್ ಭಟ್ ಅವರಿಂದ ವೀಣಾ ವಾದನ, ಕರಾವಳಿ ಯಕ್ಷಗಾನ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿವೆ. ಸ್ಥಳೀಯ ನೂರಾರು ಎಂಬಿಎ ವಿದ್ಯಾರ್ಥಿಗಳು ಭಾಗವಹಿಸಿದ್ದು, ಒಟ್ಟಾರೆ ಸಮಾವೇಶ ಅತ್ಯಂತ ಯಶಸ್ವಿಯಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಎಸ್‌ಬಿಎಂ ಮಂಜು ಸ್ನೇಹ ಬಳಗ, ಮಾತಾ ಅಮೃತಾನಂದಮಯಿ ಆಸ್ಪತ್ರೆ ಮತ್ತು ಇಎಸ್‌ಐ ಪಿಕೆಟಿಬಿ ಆಸ್ಪತ್ರೆ ಸಹಯೋಗದೊಂದಿಗೆ ನಂದಗೋಕುಲ ಬಡಾವಣೆಯಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಾಜಿ ಸಚಿವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜಿ.ಟಿ.ದೇವೇಗೌಡರು, ಮೈಸೂರು ನಗರಪಾಲಿಕೆ ನಿಕಟಪೂರ್ವ ಸದಸ್ಯ ಎಸ್‌ಬಿಎಂ ಮಂಜು ಉದ್ಘಾಟಿಸಿದರು. ಈ ವೇಳೆ ಡಾ.ಸೌಮ್ಯ ಮೋದಿ, ಜೆಡಿಎಸ್ ಮುಖಂಡ ಎಚ್.ಕೆ.ರಮೇಶ್, ಮಾಜಿ ಮೇಯರ್ ಆರ್.ಲಿಂಗಪ್ಪ, ಡಾ.ಸಿರಾಜ್ ಅಹಮದ್, ನಾಗೇಂದ್ರ ಪ್ರಸಾದ್, ಗೋಪಾಲ್, ಗೀತಾ, ಅಣ್ಣಪ್ಪ ಸ್ವಾಮಿ, ವಸುಮತಿ, ರವಿಶಂಕರ್, ನಟರಾಜ್, ಸತೀಶ್, ಸಿದ್ದೇಶ್ ಉಪಸ್ಥಿತರಿದ್ದರು.



ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಶ್ರೀರಂಗಪಟ್ಟಣದಲ್ಲಿ ಜೆಡಿಎಸ್ ಕಾರ್ಯಕರ್ತರು ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಈ ವೇಳೆ ಪುರಸಭೆ ಸದಸ್ಯರಾದ ಕೃಷ್ಣಪ್ಪ, ಶಿವು, ಎಸ್.ಪ್ರಕಾಶ್, ಎಸ್.ಟಿ.ರಾಜು, ನರಸಿಂಹೇಗೌಡ, ನಿಂಗರಾಜು, ಪುರಸಭಾ ಮಾಜಿ ಸದಸ್ಯ ವೆಂಕಟೇಶ್, ಮುಖಂಡರಾದ ಸುಧಾಕರ್, ತಿಲಕ್, ಎನ್.ಶಿವಸ್ವಾಮಿ, ಸತ್ಯನಾರಾಯಣ, ನವೀನ್, ಪ್ರವೀಣ್, ರಾಕೇಶ್, ನಾಗೇಂದ್ರ, ಕಿರಣ್, ಸಂಜಯ್, ಮಂಜುನಾಥ್, ನಾಗೇಂದ್ರ, ಪ್ರಕಾಶ್, ಒಕ್ಕಲಿಗರ ಸಂಘದ ಅಧ್ಯಕ್ಷ ಚಂದ್ರು ಸೇರಿದಂತೆ ಇತರರಿದ್ದರು.



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ಶ್ರೀ ಬಸವೇಶ್ವರ ನವಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು. ಮಕ್ಕಳಿಗೆ ನೋಟ್‌ಬುಕ್, ಹಣ್ಣು ಹಂಪಲು ವಿತರಿಸಲಾಯಿತು. ಈ ವೇಳೆ ವರುಣ ಜೆಡಿಎಸ್ ಅಧ್ಯಕ್ಷ ಬಾಲಕೃಷ್ಣ, ಬಳಗದ ಅಧ್ಯಕ್ಷ ಪ್ರದೀಪ್, ಕೃಷ್ಣೇಗೌಡ, ಖಜಾಂಚಿ ಮೂರ್ತಿ, ಸುಬ್ರಹ್ಮಣ್ಯ, ಹೇಮಂತ್, ಟ್ರಸ್ಟ್ ಅಧ್ಯಕ್ಷ ಮರಿಗೌಡ ಉಪಸ್ಥಿತರಿದ್ದಾರೆ.



ಮಾಜಿ ಸಿಎಂ ಕುಮಾರಸ್ವಾಮಿ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಂಡ್ಯದ ವಿದ್ಯಾ ಗಣಪತಿ ದೇವಾಲಯದಲ್ಲಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿ, ಜಿಲ್ಲಾಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಈ ವೇಳೆ ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ, ಜಿಲ್ಲಾಧ್ಯಕ್ಷ ಡಿ.ರಮೇಶ್, ಮಾಜಿ ಶಾಸಕರಾದ ಜಿ.ಬಿ.ಶಿವಕುಮಾರ್, ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಜಯರಾಮ್, ನಗರಸಭಾ ಸದಸ್ಯರಾದ ನಾಗೇಶ್, ರಜನಿ, ಮುಖಂಡರಾದ ವಸಂತ್‌ರಾಜು, ಮೋಹನ್, ಪ್ರತಾಪ್, ಬಿ.ಆರ್.ಸುರೇಶ್, ರಮೇಶ್, ಮಂಜುನಾಥ್, ಸುಜಾತಮಣಿ ಮತ್ತಿತರರಿದ್ದರು.



ಮಾಜಿ ಸಿಎಂ ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಪಾಂಡವಪುರದ ಸಾರ್ವಜನಿಕ ಆಸ್ಪತ್ರೆ ಒಳರೋಗಿಗಳಿಗೆ ಜೆಡಿಎಸ್ ಮುಖಂಡರು ಹಣ್ಣು ಹಂಪಲು ವಿತರಿಸಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇಶ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ನಿರ್ದೇಶಕ ಯೋಗೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಚಲುವರಾಜು, ಪುರಸಭೆ ಸದಸ್ಯರಾದ ಆರ್.ಸೋಮಶೇಖರ್, ಶಿವಣ್ಣ, ಚಂದ್ರು, ಶಿವಕುಮಾರ್, ಮುಖಂಡರಾದ ಪುಟ್ಟಣ್ಣ, ಚೇತನ್, ಗಿರೀಶ್, ಪ್ರಸನ್ನಕುಮಾರ್, ಎಸ್.ನಾರಾಯಣಗೌಡ, ಅಶೋಕ್, ಚನ್ನಕೃಷ್ಣ, ರಾಮಕೃಷ್ಣ, ಚಂದ್ರು, ಬೊಮ್ಮರಾಜು, ರಾಮಚಂದ್ರು, ಸಗಾಯಂ, ಸೋಮಣ್ಣ, ಮೋಹನ್, ಸಿ.ಎನ್.ಚೇತನ್ ಹಲವರಿದ್ದರು.



ಮೈಸೂರು ನಗರಪಾಲಿಕೆ ವಾರ್ಡ್ ನಂ.6ರ ನಿಕಟಪೂರ್ವ ಸದಸ್ಯರಾದ ಎಸ್‌ಬಿಎಂ ಮಂಜು ಅವರು ಗೋಕುಲಂ ಬೃಂದಾವನ ಬಡಾವಣೆಗಳಲ್ಲಿ ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಾದ ಪುಟ್ಟೇಗೌಡ, ದಿನೇಶ್ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಹಿರಿಯ ನಾಗರಿಕರಾದ ರಾಜೇಶ್ವರಿ, ಲೀಲಾವತಿ, ಲಕ್ಷ್ಮಣ್, ರಾಮಕೃಷ್ಣ, ವಿ.ಮಾದೇವ ಉಪಸ್ಥಿತರಿದ್ದರು.



ನವದೆಹಲಿಯ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ್ದ 39ನೇ ರಾಷ್ಟ್ರೀಯ ಸಾಹಿತ್ಯ ಸಮ್ಮೇಳನದಲ್ಲಿ ಉತ್ತಮ ರಂಗಭೂಮಿ ಕಲಾವಿದರಿಗೆ ಕೊಡಮಾಡುವ ಡಾ.ಬಿ.ಆರ್.ಅಂಬೇಡ್ಕರ್ ರಾಷ್ಟ್ರೀಯ ಫೆಲೋಶಿಪ್ ಪ್ರಶಸ್ತಿಯನ್ನು ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಅವರಿಗೆ ಅಕಾಡೆಮಿ ಅಧ್ಯಕ್ಷ ಎಸ್.ಪಿ.ಸುಮನಸ್ಕರ್ ಪ್ರದಾನ ಮಾಡಿದರು. ಈ ವೇಳೆ ಕೇಂದ್ರ ಮಾಜಿ ಸಚಿವ ಪ್ರತಾಭ್ ಸಿಂಗ್, ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ಸಂಪತ್‌ಕುಮಾರ್ ಉಪಸ್ಥಿತರಿದ್ದರು.

ಕರಾವಳಿ ಕಲೆ ಯಕ್ಷಗಾನ ಪ್ರದರ್ಶನ

ಮಹಿಳಾ ಯಕ್ಷ ಸಂಭ್ರಮಕ್ಕೆ ಚಾಲನೆ

ಈ ಮಣ್ಣಿನ ಕಲೆ ಉಳಿಸಿಕೊಂಡು ಹೋಗಲು ಸರ್ಕಾರದ ಸಹಾಯಹಸ್ತ ಅವಶ್ಯ: ಸಂಸ್ಕೃತಿ ಪೋಷಕ ಜಿ.ಎಂ.ಹೆಗಡೆ ಮನವಿ

ಮೈಸೂರು, ಡಿ.16 (ಎಸ್‌ಬಿಡಿ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕರಾವಳಿ ಕಲೆ ಯಕ್ಷಗಾನಕ್ಕೆ ಅಭೂತಪೂರ್ವ ಪ್ರೋತ್ಸಾಹ ಸಿಕ್ಕಿದೆ ಎಂದು ಸಂಸ್ಕೃತಿ ಪೋಷಕ, ಉದ್ಯಮಿ ಜಿ.ಎಂ.ಹೆಗಡೆ ಸಂತಸ ವ್ಯಕ್ತಪಡಿಸಿದರು.

ಮೈಸೂರಿನ ಇನ್ನೊವೇಟಿವ್ ಸಂಸ್ಥೆ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಆಯೋಜಿಸಿರುವ 2 ದಿನಗಳ 'ಮಹಿಳಾ ಯಕ್ಷ ಸಂಭ್ರಮ'ಕ್ಕೆ ಶನಿವಾರ ಚಾಲನೆ ನೀಡಿ, ಮಾತನಾಡಿದರು.

ಯಕ್ಷಗಾನ ಕಲೆಗೆ ಮೈಸೂರಿನಲ್ಲಿ ದೊರಕಿರುವಷ್ಟು ಅಭೂತಪೂರ್ವ ಪ್ರೋತ್ಸಾಹ, ಬೆಂಬಲ ಮತ್ತೆಲ್ಲೂ ಸಿಕ್ಕಿಲ್ಲ. ಇದು ನಿರಂತರವಾಗಿರಬೇಕು. ಮುಂದಿನ ಪೀಳಿಗೆ ಕಲಾವಿದರಿಗೂ ಇಲ್ಲಿನ ಕಲಾಸಕ್ತರು ಬೆನ್ನುತಟ್ಟುವ ಮೂಲಕ ಶ್ರೇಷ್ಠ ಕಲೆಯನ್ನು ಬೆಳೆಸಬೇಕು. ನಿರಂತರವಾಗಿ ಯಕ್ಷಗಾನ ಕಾರ್ಯಕ್ರಮಗಳನ್ನು ಮೈಸೂರಿನಲ್ಲಿ ಆಯೋಜಿಸಿಕೊಂಡು ಬರುತ್ತಿರುವ ಕಲಾ ಸಂಸ್ಥೆಯವರು ಯುವ ಸಮುದಾಯವನ್ನು ಒಡಗೂಡಿಸಿಕೊಂಡು ಅವರಿಗೆ ಮಾರ್ಗದರ್ಶನ ನೀಡಬೇಕು. ಇದಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ಮಹಿಳಾ ಕಲಾವಿದರು ಯಕ್ಷಗಾನ ಕಲೆ ಬೆಳೆಸಲು ಶ್ರಮಿಸುತ್ತಿರುವುದು ಹೆಮ್ಮೆಯ ಸಂಗತಿ. ಯಕ್ಷಗಾನವನ್ನೇ ನಂಬಿ ಬದುಕುತ್ತಿರುವ ಕಲಾವಿದರು ಸಾಕಷ್ಟಿದ್ದಾರೆ. ಈ ಮಣ್ಣಿನ ಶ್ರೇಷ್ಠ ಕಲೆಗಳಲ್ಲಿ ಒಂದಾದ ಯಕ್ಷಗಾನ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಸರ್ಕಾರದ ಸಹಾಯ ಅತ್ಯಗತ್ಯ. ಯಕ್ಷಗಾನವನ್ನೇ ಉಸಿರಾಗಿಸಿಕೊಂಡಿರುವ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗಮನಹರಿಸಬೇಕು ಎಂದು ಮನವಿ ಮಾಡಿದರು.



ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಆಯೋಜಿಸಿರುವ ಎರಡು ದಿನಗಳ 'ಮಹಿಳಾ ಯಕ್ಷ ಸಂಭ್ರಮ'ಕ್ಕೆ ಶನಿವಾರ ಸಂಸ್ಕೃತಿ ಪೋಷಕ, ಉದ್ಯಮಿ ಜಿ.ಎಂ.ಹೆಗಡೆ ಚಾಲನೆ ನೀಡಿದರು.

'ಶಿವ ಪಂಚಾಕ್ಷರಿ ಮಹಿಮೆ' ಪ್ರದರ್ಶನ

ಸಭಾ ಕಾರ್ಯಕ್ರಮದ ನಂತರ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ವಿರಚಿತ 'ಶಿವ ಪಂಚಾಕ್ಷರಿ ಮಹಿಮೆ' ಪ್ರಸಂಗವನ್ನು ಯಕ್ಷಗುರು ಶ್ರೀನಿವಾಸ ಸಾಸ್ತಾನ ನಿರ್ದೇಶನದಲ್ಲಿ ಬೆಂಗಳೂರಿನ ಕರ್ನಾಟಕ ಮಹಿಳಾ ಯಕ್ಷಗಾನ ತಂಡದ ಕಲಾವಿದರು ಮನೋಜ್ಞವಾಗಿ ಪ್ರಸ್ತುತಪಡಿಸಿದರು. ಭಾನುವಾರ ಸಂಜೆ 6ಕ್ಕೆ ದೇವದಾಸ ವಿರಚಿತ 'ಚಕ್ರವ್ಯೂಹ' ಪ್ರಸಂಗವನ್ನು ಪ್ರದರ್ಶಿಸಲಿದ್ದಾರೆ.

ಸುದೀರ್ಘ ಪರಂಪರೆ: ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಯಕ್ಷಗಾನ ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮಾತನಾಡಿ, ಯಕ್ಷಗಾನಕ್ಕೆ ಹಲವು ಶತಮಾನಗಳ ಇತಿಹಾಸ, ಪರಂಪರೆ ಇದೆ. ಯಕ್ಷಗಾನ, ನೂರಾರು ವರ್ಷಗಳಲ್ಲಿ ಸಾವಿರಾರು ಕಲಾವಿದರಿಂದ ಸುಧಾರಣೆಯಾಗಿ ಈಗಿನ ರೂಪ ಪಡೆದಿದೆ. ಯಕ್ಷಗಾನವನ್ನು ಒಂದು ಪ್ರದರ್ಶಕ ಕಲೆಯಾಗಿ ಕಾಣಬಾರದು. ಇದೊಂದು ಸಂವಹನ ಕಲೆ, ದೇಶವನ್ನು ಪ್ರತಿನಿಧಿಸುವ, ವಿದೇಶಿಗರಿಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸುವ ಮಾಧ್ಯಮ ಎಂದು ಪರಿಗಣಿಸಬೇಕು ಎಂದು ಆಶಿಸಿದರು.

ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಘೋಷಣೆಯಾದಾಗ ಎಲ್ಲರಂತೆ ನನಗೂ ಆಶ್ಚರ್ಯವಾಯಿತು. ಜೊತೆಗೆ ಸಂಕೀರ್ಣ ಕ್ಷೇತ್ರದಲ್ಲಿ ನನ್ನನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಸಮಾಧಾನ ತಂದಿತು. ಏನಾದರೂ ಯಕ್ಷಗಾನ ಕ್ಷೇತ್ರದಿಂದ ಆಯ್ಕೆ ಮಾಡಿದ್ದರೆ ಖಂಡಿತವಾಗಿ ಮುಜುಗರವಾಗುತ್ತಿತ್ತು. ಏಕೆಂದರೆ ನಾನು ಯಕ್ಷಗಾನ ಸಾಹಿತ್ಯದಲ್ಲಿ ಒಂದಷ್ಟು ಸೇವೆ ಮಾಡಿದ್ದೇನೆ. ಆದರೆ ಯಕ್ಷಗಾನ ಕಲೆಯ ಪರಂಪರೆಯಲ್ಲಿ ಅವಿರತವಾಗಿ ಶ್ರಮಿಸುತ್ತಿರುವವರ ಸಂಖ್ಯೆ ಅಪಾರವಾಗಿದೆ. ಅವರ ನಡುವೆ ನಾನು ಪ್ರಶಸ್ತಿ ಸ್ವೀಕರಿಸುವುದು ಸಮಂಜಸ ಎನ್ನಿಸುತ್ತಿರಲಿಲ್ಲ ಎಂದರು.

ಇನ್ನೊವೇಟಿವ್ ಸಂಸ್ಥೆಯ ಅಧ್ಯಕ್ಷರಾದ ಯಕ್ಷಗಾನ ವಿದ್ವಾಂಸ ಜಿ.ಎಸ್.ಭಟ್ ಮಾತನಾಡಿ, ಸುಮಾರು ಐವತ್ತು ವರ್ಷಗಳಿಂದ ಸ್ನೇಹಿತರೊಂದಿಗೆ ಸೇರಿ ಯಕ್ಷಗಾನ ಆಯೋಜಿಸಿಕೊಂಡು ಬಂದಿದ್ದೇವೆ. ಘಟಾನುಘಟಿ ಕಲಾವಿದರು ಇಲ್ಲಿ ಕಲಾ ಪ್ರದರ್ಶನ ನೀಡಿದ್ದಾರೆ. ಈ ವರ್ಷ ವಿಶೇಷವಾಗಿ ಮಹಿಳಾ ಯಕ್ಷಗಾನ ಆಯೋಜಿಸಿದ್ದೇವೆ. ಮುಂದಿನ ಪೀಳಿಗೆ ಯವರು ಯಕ್ಷಗಾನ ಕಲಾಸೇವೆಯನ್ನು ಮುಂದುವರೆಸಿಕೊಂಡು ಹೋಗಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಕೃತಿ ಪೋಷಕ ಡಾ.ಕೆ.ರಘುರಾಮ್ ವಾಜಪೇಯಿ, ಉದ್ಯಮಿ ಎ.ಪಿ.ನಾಗೇಶ್, ಯಕ್ಷ ಗುರು ಶ್ರೀನಿವಾಸ್ ಸಾಸ್ತಾನ್, ಇನ್ನೊವೇಟಿವ್ ಕೋಶಾಧ್ಯಕ್ಷ ಡಾ.ಎಸ್.ಎನ್.ಹೆಗಡೆ, ಕಾರ್ಯದರ್ಶಿ ಹೇರಂಬ ಭಟ್ಟ ಸಹಕಾರಿ ಜಗದೀಶ್ ಹೆಬ್ಬಾರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರಿದ್ದರು.

6ನೇ ತರಗತಿ ಮಕ್ಕಳಿಗೆ ಪ್ರವೇಶಾತಿಗಾಗಿ ತರಬೇತಿ

ಮೈಸೂರು,ಡಿ.16– ಜವಹಾರ ನವೋದಯ ವಿದ್ಯಾಲಯದಲ್ಲಿ 2024–25ನೇ ಸಾಲಿಗಾಗಿ 6ನೇ ತರಗತಿಗೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸಿದ ಮಕ್ಕಳಿಗಾಗಿ ತರಬೇತಿ ಕಾರ್ಯಕ್ರಮವನ್ನು ಎಲ್ಲ ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಡಿ.18ರಂದು ಬೆಳಗ್ಗೆ 10.30ಕ್ಕೆ ಹುಣಸೂರಿನ ಗುರುಭವನದಲ್ಲಿ, ಮಧ್ಯಾಹ್ನ 2 ಗಂಟೆಗೆ ಪಿರಿಯಾಪಟ್ಟಣ ತಾಲೂಕಿನ ಎಸ್‌ಎಂಎಸ್ ಕಲ್ಯಾಣ ಮಂಟಪ, ಪಂಚವಳ್ಳಿ ರಸ್ತೆ, ಕಂಪಲಾಪುರದಲ್ಲಿ, ಡಿ.19ರಂದು ಬೆಳಗ್ಗೆ 10.30ಕ್ಕೆ ಕೆಆರ್ ನಗರದ ಗುರುಭವನದಲ್ಲಿ ಮಧ್ಯಾಹ್ನ 2 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕಿನ ವಿಶ್ವ ಭಾರತಿ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡಿ.20ರಂದು ಬೆಳಗ್ಗೆ 10.30ಕ್ಕೆ ನಂಜನಗೂಡಿನ ಗುರುಭವನದಲ್ಲಿ ಮಧ್ಯಾಹ್ನ 2 ಗಂಟೆಗೆ ಟಿ.ನರಸೀಪುರದ ಗುರುಭವನದಲ್ಲಿ ಡಿ.26ರಂದು ಬೆಳಗ್ಗೆ 10.30ಕ್ಕೆ ಮೈಸೂರು ಗ್ರಾಮಾಂತರ ಹೂಟಗಳ್ಳಿಯ ಹೆಚ್‌ಪಿಎಸ್‌ನಲ್ಲಿ, ಮಧ್ಯಾಹ್ನ 2 ಗಂಟೆಗೆ ಮೈಸೂರು ಉತ್ತರ ಮತ್ತು ದಕ್ಷಿಣ ವಲಯದಲ್ಲಿ ಕುವೆಂಪುನಗರದ ಜ್ಞಾನಗಂಗಾ ಪ್ರೌಢಶಾಲೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.



ಸಂಸತ್ ಭದ್ರತೆ ಉಲ್ಲಂಘನೆ ಹಿಂದೆ ನಿರುದ್ಯೋಗ, ಬೆಲೆ ಏರಿಕೆ ಕಾರಣ

ನವದೆಹಲಿ: ಸಂಸತ್ ಭವನದ ಭದ್ರತೆ ಉಲ್ಲಂಘನೆ ಘಟನೆಗೆ ನಿರುದ್ಯೋಗ, ಬೆಲೆ ಏರಿಕೆ ಕಾರಣ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ವರದಿಗಾರರೊಂದಿಗೆ ಮಾತನಾಡಿದ ಅವರು, ಯುವಕರಿಗೆ ಉದ್ಯೋಗ ಸಿಗದ ಕಾರಣ ಸಂಸತ್ ಭದ್ರತೆ ಉಲ್ಲಂಘನೆ ಘಟನೆ ನಡೆದಿದೆ. ಪ್ರಧಾನಿ ಮೋದಿ ನೀತಿಗಳಿಂದ ಯುವಕರಿಗೆ ಉದ್ಯೋಗಗಳು ಸಿಗುತ್ತಿಲ್ಲ ಎಂದು ಆರೋಪಿಸಿದ್ದಾರೆ. ದೇಶದೆಲ್ಲೆಡೆ ಕುದಿಯುತ್ತಿರುವ ನಿರುದ್ಯೋಗ ಸಮಸ್ಯೆ ದೇಶದ ಬಹುದೊಡ್ಡ ಸಮಸ್ಯೆಯಾಗಿದೆ. 2001ರ ಸಂಸತ್ತಿನಲ್ಲಿ ನಡೆದ ಭಯೋತ್ಪಾದಕ ದಾಳಿಯ ವಾರ್ಷಿಕ ದಿನದಂದು ನಡೆದ ಪ್ರಮುಖ ಭದ್ರತಾ ಉಲ್ಲಂಘನೆಯಲ್ಲಿ, ಶೂನ್ಯ ವೇಳೆಯಲ್ಲಿ ಇಬ್ಬರು ವ್ಯಕ್ತಿಗಳು ಸಾರ್ವಜನಿಕ ಗ್ಯಾಲರಿಯಿಂದ ಲೋಕಸಭೆಯ ಚೇಂಬರ್‌ಗೆ ಜಿಗಿದರು, ಕಲರ್ ಸ್ಮೋಕ್ ಬಿಡುಗಡೆ ಮಾಡಿ ಘೋಷಣೆಗಳನ್ನು ಕೂಗಿದ್ದರು. ಅದೇ ಸಮಯದಲ್ಲಿ, ಇತರ ಇಬ್ಬರು–ಅಮೋಲ್ ಶಿಂಧೆ ಮತ್ತು ನೀಲಂದೇವಿ–ಸಂಸತ್ತಿನ ಆವರಣದ ಹೊರಗೆ "ತನಾಶಾಹಿ ನಹೀ ಚಲೇಗಿ" ಎಂದು ಕೂಗುತ್ತಾ ಡಬ್ಬಿಗಳಿಂದ ಬಣ್ಣದ ಹೊಗೆಯನ್ನು ಬಿಡುಗಡೆ ಮಾಡಿದರು. ಭದ್ರತಾ ಲೋಪದ ಬಗ್ಗೆ ಪ್ರತಿಪಕ್ಷಗಳು ಸರ್ಕಾರದಿಂದ ಉತ್ತರವನ್ನು ಕೇಳುತ್ತಿವೆ ಮತ್ತು ಈ ವಿಷಯದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಸತ್ತಿನಲ್ಲಿ ಹೇಳಿಕೆ ನೀಡುವಂತೆ ವಿಪಕ್ಷಗಳು ಒತ್ತಾಯಿಸಿವೆ.

ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು!



ನವದೆಹಲಿ, ಡಿ.16– ಮುಂಬರುವ ಲೋಕಸಭಾ ಚುನಾವಣೆಗೆ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವುದಾಗಿ ಘೋಷಿಸಿರುವ ಜೆಡಿಎಸ್ ವರಿಷ್ಠ ಎಚ್‌ಡಿ ದೇವೇಗೌಡರು ಶುಕ್ರವಾರ ನವದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವುದು ತೀವ್ರ ಕುತೂಹಲ ಕೆರಳಿಸಿದೆ.

ಲೋಕಸಭಾ ಚುನಾವಣೆಗೆ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳುವುದಾಗಿ ಆ ಪಕ್ಷದ ಪ್ರಮುಖ ನಾಯಕರು ಈಗಾಗಲೇ ಹೇಳಿದ್ದಾರೆ. ಇದಕ್ಕೆ ಪಕ್ಷದ ಕೆಲವು ನಾಯಕರು ವಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಜೆಡಿಎಸ್ ಅಧ್ಯಕ್ಷರಾಗಿದ್ದ ಸಿಎಂ ಇಬ್ರಾಹಿಂ ಕೂಡ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದ್ದರಿಂದ ಅವರನ್ನು ಪಕ್ಷದಿಂದಲೇ ಉಚ್ಚಾಟಿಸಲಾಗಿದೆ ಈ ಬೆನ್ನಲ್ಲೇ ಎಚ್.ಡಿ.ದೇವೇಗೌಡರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಶುಕ್ರವಾರ ಸಂಸತ್ತಿನ ಸಭಾಂಗಣದಲ್ಲಿ ಭೇಟಿ ಮಾಡಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ.

ಹೆಚ್.ಡಿ.ದೇವೇಗೌಡರು ಹಾಗೂ ಮಲ್ಲಿಕಾರ್ಜುನ ಖರ್ಗೆ, ಭೇಟಿ ವೇಳೆ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ದೇವೇಗೌಡರ ನೇತೃತ್ವದ ಜೆಡಿಎಸ್ ಭಾರತೀಯ ಜನತಾ ಪಾರ್ಟಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ)ಕ್ಕೆ ಸೇರಿದ ನಂತರ ದೇವೇಗೌಡರು ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ಈ ಭೇಟಿ ಮಹತ್ವದ್ದಾಗಿದೆ.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ)ಕ್ಕೆ ಸೇರ್ಪಡೆಯಾದ ಜೆಡಿಎಸ್ ಈ ಸಂಬಂಧ ಚುನಾವಣಾ ಆಯೋಗಕ್ಕೆ ಪತ್ರ ಬರೆಯಬೇಕು. ತಮ್ಮ ಪಕ್ಷದ ಹೆಸರಿನಿಂದ ಜಾತ್ಯತೀತ ಪದವನ್ನು ಕೈಬಿಡಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರರೂ ಆದ ರಾಜ್ಯದ ಐಟಿ–ಬಿಟಿ ಸಚಿವ ಮತ್ತು ಕಾಂಗ್ರೆಸ್ ನಾಯಕ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದ್ದರು. ಕರ್ನಾಟಕ ವಿಧಾನಸಭಾ ಚುನಾವಣೆಯ ನಂತರ ಬಿಜೆಪಿ ಕೇಂದ್ರ ನಾಯಕತ್ವವು, ಪಕ್ಷದ ರಾಜ್ಯ ನಾಯಕತ್ವದ ಮೇಲಿನ ಸಂಪೂರ್ಣ ವಿಶ್ವಾಸವನ್ನು ಕಳೆದುಕೊಂಡಿರುವುದು ಸ್ಪಷ್ಟವಾಗಿದೆ. ಈಗ ಜೆಡಿಎಸ್ ಎನ್‌ಡಿಎ ಜೊತೆ ಸೇರ್ಪಡೆಗೊಳ್ಳುವುದರಲ್ಲಿ ಆಶ್ಚರ್ಯವೇನಿಲ್ಲ ಎಂದು ಅವರು ಹೇಳಿದ್ದರು.

ಕೇಂದ್ರದ ಜನಪರ ಯೋಜನೆಗಳ ಪ್ರಯೋಜನ ಪಡೆಯುವಂತೆ ಜನರಿಗೆ ಶಾಸಕ ಶ್ರೀವತ್ಸ ಮನವಿ

ಮೈಸೂರು, ಡಿ.16–ಕೇಂದ್ರ ಸರ್ಕಾರದ ಜನಪರ ಯೋಜನೆಗಳನ್ನು ಸಾರ್ವಜನಿಕರು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವಂತೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮನವಿ ಮಾಡಿದ್ದಾರೆ.

ಬೆಳಗಾವಿ ಅಧಿವೇಶನ ಮುಗಿಸಿ ಮೈಸೂರಿಗೆ ವಾಪಸ್ಸಾಗುತ್ತಿದ್ದಾಗ ಮಾರ್ಗಮಧ್ಯೆ ತುಮಕೂರು ಜಿಲ್ಲೆ, ಹುಲಿಯೂರು ದುರ್ಗ ಮುಖ್ಯ ರಸ್ತೆಯ ಐ.ಬಿ.ಸರ್ಕಲ್ ಬಳಿ 'ನಮ್ಮ ಸಂಕಲ್ಪ ವಿಕಸಿತ ಭಾರತ' ಪ್ರಚಾರ ವಾಹನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಈ ಬಗ್ಗೆ ಜನರಿಗೆ ಮಾಹಿತಿ ತಲುಪಿಸುವ ನಿಟ್ಟಿನಲ್ಲಿ 'ನಮ್ಮ ಸಂಕಲ್ಪ ವಿಕಸಿತ ಭಾರತ' ಯಾತ್ರೆ ಆರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ಎಲ್ಲಾ ರಾಜ್ಯಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ್ದಾರೆ. ಯೋಜನೆಗಳ ಮಾಹಿತಿ ಕೈಪಿಡಿಯನ್ನು ಸಾರ್ವಜನಿಕರಿಗೆ ತಲುಪಿಸಲಾಗುತ್ತಿದೆ ಎಂದು ತಿಳಿಸಿದರು.



ಕೇಂದ್ರ ಸರ್ಕಾರದ ಜನಹಿತ ಯೋಜನೆಗಳ ಮೂಲಕ ದೇಶಕ್ಕೆ ಗ್ಯಾರಂಟಿ ನೀಡಿದೆ. ನಗರ, ಪಟ್ಟಣ, ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಇದರಿಂದ ರೈತರು, ಕೂಲಿ ಕಾರ್ಮಿಕರು, ಯುವಕರು, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದವರಿಗೂ ಅನುಕೂಲವಾಗಲಿದೆ. ಯೋಜನೆಗಳ ಬಗ್ಗೆ ತಿಳಿದುಕೊಂಡು ಸಮರ್ಪಕವಾಗಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಶಾಸಕರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಕೇಬಲ್ ಮಹೇಶ್, ಜೋಗಿ ಮಂಜು, ನಿಶಾಂತ್ ಮತ್ತಿತರರಿದ್ದರು.

ನೋಂದಣಿಯಾಗದ ಸ್ಕ್ಯಾನಿಂಗ್ ಸೆಂಟರ್‌ಗಳ ಮಾಹಿತಿ ಸಂಗ್ರಹಿಸಿ

● ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ ● ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಸಿಬ್ಬಂದಿ ಹೊರತು ಇತರರಿಗೆ ನಿರ್ಬಂಧ ವಿಧಿಸಿ

ಮೈಸೂರು,ಡಿ.16–ಜಿಲ್ಲೆಯಲ್ಲಿರುವ ವಿವಿಧ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ತಾಲೂಕು ಮತ್ತು ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿಗಳು ಭೇಟಿ ನೀಡಿ ಪಿಸಿಪಿಎನ್‌ಡಿಟಿ ಕಾಯ್ದೆಯಡಿ ಸ್ಕ್ಯಾನಿಂಗ್ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆಯೇ ಎಂದು ಪರಿಶೀಲಿಸಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪಿಸಿ ಮತ್ತು ಪಿಎನ್‌ಡಿಟಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಿಸಿ & ಪಿಎನ್‌ಡಿಟಿ ಕಾಯ್ದೆಯನ್ವಯ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳು ನೋಂದಣಿಯಾಗಿರಬೇಕು. ನೋಂದಣಿಯಾಗದೆ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ನಡೆಸುತ್ತಿದ್ದರೆ ಅಥವಾ ನೋಂದಣಿಯಾದ ಕೇಂದ್ರಗಳಲ್ಲೂ ಅನಧಿಕೃತವಾಗಿ ಲಿಂಗ ಪತ್ತೆ ಚಟುವಟಿಕೆಗಳು ನಡೆಯುತ್ತಿದ್ದರೆ ಅವುಗಳನ್ನು ಗುರುತಿಸಿ, ಗೌಪ್ಯವಾಗಿ ಮಾಹಿತಿ ಸಂಗ್ರಹಿಸಿ ವರದಿ ನೀಡಿ. ಎಲ್ಲಾ ಸ್ಕ್ಯಾನಿಂಗ್ ಕೇಂದ್ರಗಳು ಫಾರ್ಮ್ ಎಫ್ ಅನ್ನು ಕಡ್ಡಾಯವಾಗಿ ನೀಡುವಂತೆ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಿದರು.



ಜಿಲ್ಲೆಯಲ್ಲಿ ಒಟ್ಟು ಪಿಸಿಪಿಎನ್‌ಡಿಟಿ 288 ಕೇಂದ್ರಗಳಿದ್ದು, 232 ಕೇಂದ್ರಗಳಿಗೆ ಈಗಾಗಲೇ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. 80 ಕೇಂದ್ರಗಳು ಫಾರ್ಮ್ ಎಫ್ ಅನ್ನು ಒದಗಿಸದಿಲ್ಲದಿರುವುದರ ಬಗ್ಗೆ ನೋಟಿಸ್ ನೀಡಲಾಗಿದೆ. ಪ್ರತಿ ಸೆಂಟರ್‌ಗಳು ಕಡ್ಡಾಯವಾಗಿ ಎಫ್ ಫಾರಂ ಅನ್ನು ಸಲ್ಲಿಸುವಂತೆ ಮತ್ತು ಸಲ್ಲಿಕೆಯಾದ ಫಾರಂಗಳನ್ನು ಕಾಲಕಾಲಕ್ಕೆ ಪರಿಶೀಲಿಸಬೇಕು. ಜಿಲ್ಲೆಯಾದ್ಯಂತ ಪ್ರಸ್ತುತ 25 ಸೆಂಟರ್‌ಗಳು ಇತರೆ ಕಾರಣಗಳಿಂದ ಕೆಲಸ ನಿಲ್ಲಿಸಿದ್ದು, ಈ ಸೆಂಟರ್‌ಗಳಲ್ಲಿರುವ ಯಂತ್ರಗಳ ದುರ್ಬಳಕೆಯಾಗದಂತೆ ಎಚ್ಚರಿಕೆ ವಹಿಸಿ, ಸೀಲ್ ಮಾಡಬೇಕು. ಈಗಾಗಲೇ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳ ಅನುಪಾತ ಕಡಿಮೆಯಾಗಿದ್ದು, ಈ ನಿಟ್ಟಿನಲ್ಲಿ ಅತ್ಯಂತ ಜಾಗರೂಕತೆಯಿಂದ ಕಟ್ಟುನಿಟ್ಟಾಗಿ ಕಾಯ್ದೆಯನ್ವಯ ಕಾರ್ಯನಿರ್ವಹಿಸಬೇಕು ಎಂದರು.

ಕಾಯ್ದೆಯನ್ವಯ ಸ್ಕ್ಯಾನಿಂಗ್ ಸಂದರ್ಭದಲ್ಲಿ ಆ ಸ್ಥಳದಲ್ಲಿ ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿಗಳನ್ನು ಹೊರತುಪಡಿಸಿ ಯಾರೂ ಪ್ರವೇಶಿಸುವಂತಿಲ್ಲ. ಸ್ಥಳದಲ್ಲಿ ಗಡಿಯಾರವನ್ನು ಹೊರತುಪಡಿಸಿ ಯಾವುದೇ ರೀತಿಯ ಚಿತ್ರಗಳು, ಸಂಕೇತಗಳು ಭಾವಚಿತ್ರಗಳು ಇರುವಂತಿಲ್ಲ. ಪರೋಕ್ಷವಾಗಿ ಮಗುವಿನ ಲಿಂಗವನ್ನು ಸೂಚಿಸುವಂತೆ ಯಾವುದೇ ರೀತಿಯ ಸನ್ನೆ, ಸೂಚನೆಗಳನ್ನು ನೀಡುವಂತಿಲ್ಲ. ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಇಲ್ಲಿ ಲಿಂಗ ಪತ್ತೆ ಮಾಡಲಾಗುವುದಿಲ್ಲ ಎಂದು ಫಲಕಗಳನ್ನು ಅಳವಡಿಸಬೇಕು. ರೇಡಿಯೋಲಜಿಸ್ಟ್‌ಗಳು ಎರಡು ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಮಾತ್ರ ಕಾರ್ಯನಿರ್ವಹಿಸಲು ಕಾಯ್ದೆಯಡಿ ಅವಕಾಶವಿದೆ ಎಂದರು.

> ಪ್ರತಿಯೊಂದು ಆಸ್ಪತ್ರೆ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಕೆಪಿಎಂಇ ಲೈಸೆನ್ಸ್ ನಂಬರ್, ವೈದ್ಯರು ಭೇಟಿ ನೀಡುವ ಸಮಯ, ವೈದ್ಯರ ಹೆಸರು, ಎಂಬಿಬಿಎಸ್ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಪ್ರತಿದಿನವೂ ಆ ವೈದ್ಯರೇ ಭೇಟಿ ನೀಡುತ್ತಿದ್ದಾರಾ ಎಂಬುದನ್ನು ಆಗಾಗ್ಗೆ ಪರಿಶೀಲಿಸಬೇಕು. ಇತ್ತೀಚೆಗೆ ಹೆಚ್ಚಿನ ಆಯುರ್ವೇದ ಕ್ಲಿನಿಕ್‌ಗಳು ಕಾಣಿಸಿಕೊಳ್ಳುತ್ತಿದ್ದು, ತಾಲೂಕು ಹಾಗೂ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿಗಳು ಪರಿಶೀಲಿಸಬೇಕು. ಆಯುರ್ವೇದ ಕ್ಲಿನಿಕ್‌ಗಳಲ್ಲಿ ಆಯುರ್ವೇದ ಔಷಧಿಗಳನ್ನೇ ನೀಡಬೇಕು. ಇದನ್ನು ಹೊರತುಪಡಿಸಿ ಇಂಗ್ಲಿಷ್ ಔಷಧಿ ನೀಡುತ್ತಿರುವುದು ಕಂಡು ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು. ಇತ್ತೀಚೆಗೆ ನಗರದಲ್ಲಿ ನರ ದೌರ್ಬಲ್ಯ ಹಾಗೂ ಲೈಂಗಿಕ ಸಮಸ್ಯೆ ಕುರಿತು ಔಷಧಿ ನೀಡುವ ಟೆಂಟ್ ರೀತಿಯ ಕ್ಲಿನಿಕ್‌ಗಳು ಕಾಣಿಸಿಕೊಳ್ಳುತ್ತಿದ್ದು, ಇವು ನಾಗರಿಕರ ಆರೋಗ್ಯ ಹಾಗೂ ನಗರದ ಸೌಂದರ್ಯವನ್ನು ಹಾಳು ಮಾಡುತ್ತಿವೆ. ಇವುಗಳು ನಿಜವಾಗಿಯೂ ಲೈಸೆನ್ಸ್ ಪಡೆದ ಕ್ಲಿನಿಕ್‌ಗಳೇ ಎಂದು ಪರಿಶೀಲಿಸಿ, ವರದಿ ನೀಡಿ. –ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಪಿಸಿ&ಪಿಎನ್‌ಡಿಟಿ ಕಾಯ್ದೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಪೊಲೀಸ್, ಎನ್‌ಜಿಒ, ರೇಡಿಯೋಲಜಿಸ್ಟ್, ಮೆಡಿಕಲ್ ಆಫೀಸರ್ ಸೇರಿದಂತೆ ಇತರೆ ಅಧಿಕಾರಿಗಳಿದ್ದು, ತಾಲೂಕು ಮಟ್ಟದಲ್ಲಿಯೂ ಸಮಿತಿ ರಚಿಸಿ ಪ್ರತಿ ತಿಂಗಳು ಸಭೆ ನಡೆಸಿ ಎಂದು ತಾಲೂಕು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಡಿಸಿ ಡಾ.ರಾಜೇಂದ್ರ ಸೂಚಿಸಿದರು.

ಸಭೆಯಲ್ಲಿ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ವಿವಿಧ ತಾಲೂಕು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 17 ಡಿಸೆಂಬರ್ 2023

ಮಂಡ್ಯ, ಮೈಸೂರಿನಲ್ಲಿ ನಡೆದಿರುವ ಭ್ರೂಣ ಪತ್ತೆ, ಹತ್ಯೆ ಪ್ರಕರಣದಲ್ಲಿ

ಕನಿಷ್ಠ 2 ರಿಂದ 3 ಸಾವಿರ ಭ್ರೂಣ ಹತ್ಯೆಯಾಗಿದೆ



ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅಸಮಾಧಾನ

ಮಂಡ್ಯ, ಡಿ.16– ಮಂಡ್ಯ ಹಾಗೂ ಮೈಸೂರಿನಲ್ಲಿ ನಡೆದಿರುವ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಕಲೆ ಹಾಕಿರುವ ಮಾಹಿತಿ ಪ್ರಕಾರ ಕಳೆದ 20 ವರ್ಷಗಳಲ್ಲಿ ಕನಿಷ್ಠ 2 ರಿಂದ 3 ಸಾವಿರ ಹೆಣ್ಣು ಭ್ರೂಣಗಳ ಹತ್ಯೆಯಾಗಿದ್ದು, ಒಂದೊಂದು ತಂಡವಾಗಿ ದುಷ್ಕರ್ಮಿಗಳು 800 ರಿಂದ 900 ಭ್ರೂಣಗಳನ್ನು ಹತ್ಯೆ ಮಾಡಿದ್ದಾರೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಹೆಣ್ಣು ತಾಯಿ, ಪತ್ನಿಯಾಗಿ ಬೇಕೆನ್ನುವ ಸಮಾಜ ಮಗಳಾಗಿ ಸ್ವೀಕರಿಸಲು ಏಕೆ ಹಿಂದೇಟು ಹಾಕುತ್ತಿದೆ ಎಂದು ಪ್ರಶ್ನಿಸಿದರಲ್ಲದೆ, ವರದಕ್ಷಿಣೆ ಪಿಡುಗಿನಿಂದ ಇಂತಹ ಭ್ರೂಣ ಹತ್ಯೆಗಳು ನಡೆಯುತ್ತಿರಬಹುದೆಂದು ವಿಷಾದಿಸಿದರು.

ಇಂತಹ ದುಷ್ಕೃತ್ಯ ಎಸಗುವವರ ಎಡೆಮುರಿ ಕಟ್ಟಲು ರಾಜ್ಯ ಸರ್ಕಾರ ವಿಶೇಷ ಕಾನೂನು ಮತ್ತು ಕಾಯ್ದೆಯನ್ನು ಶೀಘ್ರವೇ ಜಾರಿಗೆ ತರಬೇಕು. ಇದಕ್ಕೆ ವಿಪಕ್ಷವಾಗಿ ಬಿಜೆಪಿಯ ಸಂಪೂರ್ಣ ಸಹಕಾರ ಸರ್ಕಾರಕ್ಕೆ ಇರುತ್ತದೆ. ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆಯಂತಹ ಕಾನೂನು ತಂದು ಇವುಗಳನ್ನು ಮಟ್ಟ ಹಾಕಬಹುದೆಂದು ಸಲಹೆ ನೀಡಿದರು.

ಆಲೆಮನೆ ಪಕ್ಕದ ಕೊಠಡಿ ಬೆಲ್ಲದ ಸ್ಟೋರೇಜ್ ಆಗಿದೆ: ದುಷ್ಕೃತ್ಯ ನಡೆಯುತ್ತಿದ್ದ ಆಲೆಮನೆ ಪಕ್ಕದ ಕೊಠಡಿ ಬೆಲ್ಲದ ಸ್ಟೋರೇಜ್ ಆಗಿದೆ. ನಾನು ಭೇಟಿ ನೀಡಿದ ವೇಳೆ ಇಲ್ಲಿ ಏನೂ ಆಗಿಯೇ ಇಲ್ಲವೇನೋ ಎಂಬ ರೀತಿ ಅಚ್ಚುಕಟ್ಟಾಗಿ ಬೆಲ್ಲ ತಯಾರಾಗುತ್ತಿದ್ದು, ಭ್ರೂಣ ಪತ್ತೆ ಮಾಡುತ್ತಿದ್ದ ಕೊಠಡಿ ಬೆಲ್ಲದ ಸ್ಟೋರೇಜ್ ಆಗಿದೆ. ಆಲೆಮನೆ ಮಾಲೀಕರು ಓಡಾಡಿಕೊಂಡು ಆರಾಮಾಗಿದ್ದಾರೆ. ಇವೆಲ್ಲಾವನ್ನು ನೋಡಿದರೆ ಪೊಲೀಸರು, ಆರೋಗ್ಯಾಧಿಕಾರಿಗಳು ಮತ್ತು ತನಿಖೆ ಹೊಣೆ ಹೊತ್ತಿರುವ ಸಿಐಡಿ ಅಧಿಕಾರಿಗಳು ಯಾವ ಕೆಲಸ ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಉದ್ಭವವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೊಠಡಿ ಪರಿಶೀಲಿಸಿದಾಗ ಪೊಲೀಸರು ಏನು ಸಿಗಲಿಲ್ಲ ಎನ್ನುತ್ತಾರೆ. ಭ್ರೂಣ ಪತ್ತೆಗೆ ಬಳಸುವ ಸಲಕರಣೆಗಳು ಎಲ್ಲಿ ಹೋದವು? ಮೆಡಿಸಿನ್, ಬಟ್ಟೆ, ವೈದ್ಯರ ಸಲಕರಣೆಗಳನ್ನು ಏಕೆ ಸೀಜ್ ಮಾಡಿಲ್ಲ ಎಂದು ಪ್ರಶ್ನಿಸಿದ ಅವರು, ಈ ವರ್ತನೆ ನೋಡಿದರೆ ಅಧಿಕಾರಿಗಳು ಶಾಮೀಲಾಗಿದ್ದಾರಾ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅಲ್ಲದೇ ಸರ್ಕಾರ ಈ ಪ್ರಕರಣವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎಂದು ಪ್ರಶ್ನಿಸಿದರು.

ನಾನು 5 ಬಾರಿ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ. ಇಂತಹ ಪ್ರಕರಣ ಎಲ್ಲಿಯೂ ನೋಡಿಲ್ಲ. ಇಂತಹ ದುಷ್ಕೃತ್ಯ ಕೇವಲ ಮಂಡ್ಯ, ಮೈಸೂರು ಮಾತ್ರವಲ್ಲದೇ ಮೊನ್ನೆ ಬೆಂಗಳೂರಿನ ಹೊಸಕೋಟೆಯಲ್ಲೂ ನಡೆದಿದೆ. ರಾಜ್ಯದ ಇತರೆಡೆಯೂ ಸಹ ಇಂತಹ ಘಟನೆ ನಡೆಯುತ್ತಿರುವ ಬಗ್ಗೆ ಶಂಕೆ ಇದ್ದು ಸರ್ಕಾರ ಗಂಭೀರವಾಗಿ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ಭ್ರೂಣ ಲಿಂಗ ಪತ್ತೆ ನಡೆಯುತ್ತಿದ್ದ ಜಾಗದಲ್ಲಿ ಕೋರ್ಟ್‌ಗೆ ಬೇಕಾದ ಎವಿಡೆನ್ಸ್ ಸಹ ಸಿಗದಂತೆ ಸಾಕ್ಷಿ ನಾಶವಾಗಿದ್ದು, ಪೊಲೀಸರು ನಿರ್ಲಕ್ಷ್ಯ ವಹಿಸಿದ್ದಾರೆ. ವೈದ್ಯರು ವರ್ಷಕ್ಕೆ 600–700 ಭ್ರೂಣ ಹತ್ಯೆ ಮಾಡಿದ್ದಾರೆ. ಈ ದಂಧೆಯಿಂದ ಕೋಟಿ ಕೋಟಿ ಹಣ ಸಂಪಾದಿಸಿದ್ದಾರೆ. ವ್ಯವಸ್ಥಿತವಾದ ಜಾಲ ಇದರ ಹಿಂದೆ ಕೆಲಸ ಮಾಡಿದೆ. ಘಟನಾ ಸ್ಥಳಕ್ಕೆ ಅಧಿಕಾರಿಗಳು ನಾನು ಬಂದಿದ್ದೇನೆ ಎಂದು ಬಂದಿದ್ದಾರೆ. ನಮಗೂ ಇದಕ್ಕೂ ಸಂಬಂಧ ಇಲ್ಲ ಎಂಬಂತೆ ಸಿಐಡಿ ತನಿಖೆ ಮಾಡುತ್ತಿದ್ದು, ರಾಜ್ಯಾದ್ಯಂತ ಸುದ್ದಿಯಾದರೂ ಆಲೆಮನೆ ಸೀಜ್ ಆಗಿಲ್ಲ. ಹೀಗಾದರೆ ಜನಗಳಿಗೆ ಹೇಗೆ ನಂಬಿಕೆ ಬರುತ್ತದೆ. ಸಿಐಡಿಗೆ ಘಟನೆ ನಡೆದ ಊರಿನ ಹೆಸರೇ ಗೊತ್ತಿಲ್ಲ. ಆರೋಗ್ಯ ಇಲಾಖೆಯವರು ನಮಗೂ ಇದಕ್ಕೂ ಸಂಬಂಧ ಇಲ್ಲ ಅಂತಾರೆ. ವಿಪಕ್ಷ ನಾಯಕನಾಗಿ ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಕೆಲಸ ಮಾಡುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಅಶೋಕ್ ಜಯರಾಂ, ಸಚ್ಚಿದಾನಂದ, ಎ.ಎಲ್.ಚೇತನ್‌ಗೌಡ, ಎಸ್.ಪಿ.ಸ್ವಾಮಿ, ಈ.ಸಿ.ನಿಂಗರಾಜೇಗೌಡ ಉಪಸ್ಥಿತರಿದ್ದರು.

ಬಿಜೆಪಿ–ಜೆಡಿಎಸ್ ಮೈತ್ರಿ ಬರೀ ಸಂಸತ್‌ಗೆ ಸೀಮಿತವಲ್ಲ

ಮಂಡ್ಯ: ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಕೇವಲ ಲೋಕಸಭಾ ಚುನಾವಣೆಗೆ ಸೀಮಿತವಲ್ಲದೇ, ಎಲ್ಲಾ ಚುನಾವಣೆಯಲ್ಲೂ ಮುಂದುವರೆಯುತ್ತದೆ. ಉಭಯ ಪಕ್ಷಗಳು ಒಗ್ಗಟ್ಟಾಗಿ ಮುಂದಿನ ಎಲ್ಲಾ ಚುನಾವಣೆ ಎದುರಿಸಲಿವೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಮೈತ್ರಿ ನಂತರ ಸಂಸತ್ ಚುನಾವಣೆಗೆ ಸೀಟು ಹಂಚಿಕೆಯಾಗಬೇಕು. ಈ ಬಗ್ಗೆ ದೇವೇಗೌಡರು, ಕುಮಾರಸ್ವಾಮಿ ಹಾಗೂ ಬಿಜೆಪಿ ಹೈಕಮಾಂಡ್ ತೀರ್ಮಾನ ಮಾಡಲಿದ್ದು, ರಾಜ್ಯದಿಂದ ನಾವು ಕೊಡಬೇಕಾದ ಸಲಹೆಗಳನ್ನು ಹೈಕಮಾಂಡ್‌ಗೆ ನೀಡುತ್ತೇವೆ ಎಂದರು.

ಕೇವಲ ಮೈತ್ರಿ ಚುನಾವಣೆಗೆ ಸೀಮಿತವಾಗದೇ ವಿಧಾನಸಭೆ ಒಳಗೆ ಮತ್ತು ಹೊರಗೆ ಹೋರಾಟದಲ್ಲೂ ಇರುತ್ತದೆ. ಇದರಿಂದ ಬಿಜೆಪಿ ಅಥವಾ ಜೆಡಿಎಸ್ ಕಾರ್ಯಕರ್ತರಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ. ಮಂಡ್ಯ ಜಿಲ್ಲೆ ಸೇರಿದಂತೆ ಕೆಲವೆಡೆ ಜೆಡಿಎಸ್ ವಿರುದ್ಧ ಸ್ಪರ್ಧಿಸಿದ್ದ ಪ್ರಮುಖ ಮುಖಂಡರನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಅವರನ್ನು ಪಕ್ಷ ಸೇಫ್ ಮಾಡುತ್ತದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್‌ಗಿಂತ ಬಿಜೆಪಿ ಜೊತೆ ಮೈತ್ರಿಯಾಗಿ ಸಿಎಂ ಆಗಿದ್ದಾಗ ಉತ್ತಮ ಹೆಸರು ಸಂಪಾದಿಸಿದ್ದೆ ಅನ್ನುವ ಅಭಿಪ್ರಾಯ ಕುಮಾರಸ್ವಾಮಿ ಅವರಲ್ಲಿದೆ. ರಾಜ್ಯದಲ್ಲಿ ಜೆಡಿಎಸ್ ಶಕ್ತಿಯುತವಾಗಿದ್ದ ಕಡೆ ಕಾಂಗ್ರೆಸ್ ಪೈಪೋಟಿ ಕೊಡುತ್ತಿತ್ತು. ಮೈತ್ರಿಯಿಂದ ಬಿಜೆಪಿಗೆ ಏನು ಸಮಸ್ಯೆ ಇಲ್ಲ. ಬಿಜೆಪಿ ಹಾಗೂ ಜೆಡಿಎಸ್ ಶಕ್ತಿಶಾಲಿಯಾಗಿರುವ ಕಡೆ ಕಾಂಗ್ರೆಸ್ ನೇರ ಎದುರಾಳಿಯಾಗಿತ್ತು. ಬಿಜೆಪಿ ಹಾಗೂ ಜೆಡಿಎಸ್ ನೇರಾನೇರ ಎದುರಾಳಿಯಾಗಿರುವ ಕ್ಷೇತ್ರಗಳು ಅತಿ ಕಡಿಮೆ ಎಂದರು.

ಹೆಣ್ಣು ಭ್ರೂಣ ಪತ್ತೆ ಸ್ಥಳಕ್ಕೆ ಅಶೋಕ್ ಭೇಟಿ, ಪರಿಶೀಲನೆ

ಬಂದ್ ಆಗದ ಆಲೆಮನೆ ಕಂಡು ಅಧಿಕಾರಿಗಳು, ಪೊಲೀಸರು, ಸಿಐಡಿ ಅಧಿಕಾರಿಗಳಿಗೆ ತರಾಟೆ



ಮಂಡ್ಯ, ಡಿ.16– ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಹೆಣ್ಣು ಭ್ರೂಣ ಪತ್ತೆ ಮಾಡುತ್ತಿದ್ದ ತಾಲೂಕಿನ ಹಾಡ್ಯ ಗ್ರಾಮಕ್ಕೆ ವಿಪಕ್ಷ ನಾಯಕ ಆರ್.ಅಶೋಕ್ ಭೇಟಿ ನೀಡಿ ಶನಿವಾರ ಪರಿಶೀಲನೆ ನಡೆಸಿದರು.

ಆಲೆಮನೆ ಪಕ್ಕದ ಕೊಠಡಿಯೊಂದರಲ್ಲಿ ಭ್ರೂಣಪತ್ತೆ ಮಾಡುತ್ತಿದ್ದ ಸ್ಥಳವನ್ನು ಸೂಕ್ಷ್ಮವಾಗಿ ಗಮನಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಬಳಿಕ ಡಿಹೆಚ್‌ಓ ಮೋಹನ್ ಅವರನ್ನು ತರಾಟೆಗೆ ತೆಗೆದುಕೊಂಡ ಅಶೋಕ್, ಆಲೆಮನೆ ಮಾಲೀಕ ಎಲ್ಲಿ ಎಂದು ಪ್ರಶ್ನಿಸಿದರು. ಇಲ್ಲೇ ಇದ್ದಾನೆ ಎಂದ ಡಿಹೆಚ್‌ಓ ಡಾ. ಮೋಹನ್ ಉತ್ತರ ಕೇಳಿ ಶಾಕ್ ಆದ ಅಶೋಕ್, ಆಲೆಮನೆ ಯಾಕೆ ಸೀಜ್ ಮಾಡಿಲ್ಲ ನೀವು ಶಾಮೀಲಾಗಿದ್ದೀರಾ ಎಂದು ಆರೋಗ್ಯ ಮತ್ತು ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಜನ ಯಾಕೆ ಇನ್ನೂ ಆಲೆಮನೆ ಸೀಜ್ ಮಾಡಿಲ್ಲ ಎಂದು ಕೇಳುತ್ತಿದ್ದಾರೆ. ಎಷ್ಟರ ಮಟ್ಟಿಗೆ ಕೆಲಸ ಮಾಡ್ತಿದ್ದೀರಿ ಎಂದು ನಿಮ್ಮ ಕಾರ್ಯವೈಖರಿ ಇದರಲ್ಲೇ ಗೊತ್ತಾಗುತ್ತದೆ ಎಂದು ಪೊಲೀಸರು, ಆರೋಗ್ಯ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಸ್ಥಳದಲ್ಲೇ ಸಿಐಡಿ ಐಡಿಜಿಪಿ ಡಾ.ಎಂ. ಎಂ.ಸಲೀಂ ಅವರಿಗೆ ಕರೆ ಮಾಡಿದ ಅಶೋಕ್, ಸ್ಥಳಕ್ಕೆ ಭೇಟಿ ಕೊಟ್ಟಿದ್ದೀರಾ? ಇದುವರೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಜನರಿಗೆ ಯಾವ ಮೆಸೇಜ್ ಕೊಡುತ್ತಿದ್ದೀರಾ ಎಂದು ತರಾಟೆಗೆ ತೆಗೆದುಕೊಂಡರು.

ಈ ಸಂದರ್ಭ ತಹಸೀಲ್ದಾರ್ ಶಿವಕುಮಾರ್ ಬಿರಾದಾರ್, ಎಎಸ್ಪಿ ತಿಮ್ಮಯ್ಯ, ಡಿಎಚ್‌ಓ ಮೋಹನ್ ಸೇರಿದಂತೆ ಪೊಲೀಸ್, ಆರೋಗ್ಯ ಇಲಾಖೆಯ ಅಧಿಕಾರಿ ವರ್ಗಗಳು ಉಪಸ್ಥಿತರಿದ್ದರು.

ಡಿಸಿ, ಎಸ್ಪಿ ಜೊತೆ ಸಭೆ ಬಳಿಕ ನಗರದ ಪ್ರವಾಸಿ ಮಂದಿರಕ್ಕೆ ಆಗಮಿಸಿದ ಆರ್. ಅಶೋಕ್, ಡಿಸಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್ ಸೇರಿದಂತೆ ಇನ್ನಿತರ ಪ್ರಮುಖ ಅಧಿಕಾರಿಗಳೊಂದಿಗೆ ಔಪಚಾರಿಕ ಸಭೆ ನಡೆಸಿದರು.

ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವಹಿಸದೇ ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕು. ತಪ್ಪಿತಸ್ಥರ ಪೈಕಿ ಕೆಲವರು ಜಾಮೀನಿನ ಮೇಲೆ ಹೊರಬಂದು ರಾಜಾರೋಷವಾಗಿ ಓಡಾಡುತ್ತಿದ್ದು, ಘಟನೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಆರೋಪಿಗಳಿಗೆ ಕಠಿಣ ಕಾನೂನು ಶಿಕ್ಷೆಯಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಇಂತಹ ಘಟನೆಗಳು ಜಿಲ್ಲೆಯಲ್ಲಿ ಮತ್ತೆ ಮರುಕಳಿಸದಂತೆ ನಿಗಾ ವಹಿಸುವಂತೆಯೂ ಸೂಚನೆ ನೀಡಿದರು.



ಹೆಣ್ಣು ಭ್ರೂಣ ಹತ್ಯೆ ಹಾಗೂ ಬೆಳಗಾವಿಯಲ್ಲಿ ಮಹಿಳೆ ವಿವಸ್ತ್ರ ಪ್ರಕರಣ ವಿರೋಧಿಸಿ ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಜಿಲ್ಲಾ ಬಿಜೆಪಿ ಘಟಕ ಶನಿವಾರ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿತು. ಈ ವೇಳೆ ಸಿ.ಪಿ.ಉಮೇಶ್, ಕೆ.ಎಸ್.ನಂಜುಂಡೇಗೌಡ, ಅಶೋಕ್ ಜಯರಾಂ, ಇಂಡುವಾಳು ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಅರವಿಂದ್ ಕುಮಾರ್ ಇತರರಿದ್ದರು.

ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ನೇಮಕ

ಕೆ.ಆರ್.ಪೇಟೆ: ತಾಲೂಕು ದರಖಾಸ್ತು ಕಮಿಟಿ/ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಅಧ್ಯಕ್ಷರಾಗಿ ಶಾಸಕ ಹೆಚ್.ಟಿ.ಮಂಜು, ಸದಸ್ಯರಾಗಿ ಬಿ.ಎಲ್.ದೇವರಾಜು, ಕೋಮಲ ರಾಯಪ್ಪ, ರಂಗಪ್ಪ, ಸದಸ್ಯ ಕಾರ್ಯದರ್ಶಿಯಾಗಿ ತಹಸೀಲ್ದಾರ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ.

ನೂತನ ದರಖಾಸ್ತು ಕಮಿಟಿ ಸದಸ್ಯರಾಗಿ ನೇಮಕಗೊಂಡಿರುವ ಬಿ.ಎಲ್.ದೇವರಾಜು, ರಂಗಪ್ಪ ಕೋಮಲ ರಾಯಪ್ಪ ಅವರನ್ನು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ಬಿ.ನಾಗೇಂದ್ರಕುಮಾರ್ ಇತರರು ಅಭಿನಂದಿಸಿದ್ದಾರೆ.

ಗ್ರಾಮೀಣ ಮಕ್ಕಳಿಗಾಗಿ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸ್ಥಾಪನೆ

ಶಾಲಾ ವಾರ್ಷಿಕೋತ್ಸವದಲ್ಲಿ ಮಾಜಿ ಸಚಿವ ಸಿಎಸ್‌ಪಿ



ಚಿನಕುರಳಿ, ಡಿ.16– ಆಧುನಿಕ ಜಗತ್ತಿನಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವುದು ಒಂದು ದೊಡ್ಡ ಸವಾಲಾಗಿರುವುದರಿಂದ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಆರಂಭಿಸಲಾಗಿದೆ ಎಂದು ಸಂಸ್ಥೆ ಅಧ್ಯಕ್ಷರೂ ಆದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಇಲ್ಲಿನ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಶುಕ್ರವಾರ ಸಂಜೆ ನಡೆದ 'ಸಂಸ್ಕೃತಿ ವೈಭವ 2023–24'ನೇ ಸಾಲಿನ ಶಾಲಾ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಮ್ಮ ತಂದೆ, ತಾಯಿ ಹೆಸರಿನಲ್ಲಿ ಏಳೆಂಟು ವರ್ಷಗಳ ಹಿಂದೆ ಆರಂಭಗೊಂಡ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಉತ್ತಮ ಶಿಕ್ಷಣ ನೀಡುತ್ತಾ ಬರುತ್ತಿದೆ. ಜೊತೆಗೆ ಅಮೆರಿಕಾದ ಸಾಗಿನಾವ್ ವ್ಯಾಲಿ ಯೂನಿವರ್ಸಿಟಿಯೊಂದಿಗೆ ವಿದ್ಯಾರ್ಥಿ ವಿನಿಮಯ ಒಪ್ಪಂದ ಮಾಡಿಕೊಂಡು ಅಂತರಾಷ್ಟ್ರೀಯ ಮಟ್ಟದ ಶಿಕ್ಷಣವನ್ನು ಗ್ರಾಮೀಣ ಮಕ್ಕಳಿಗೆ ದೊರಕಿಸಿಕೊಡುವ ಕೆಲಸ ಮಾಡುತ್ತಿದೆ ಎಂದರು.

ಪೋಷಕರು ತಮ್ಮ ಮಕ್ಕಳ ಬಗ್ಗೆ ಜಾಗೃತಿ ವಹಿಸಬೇಕು. ಮಕ್ಕಳು ಶಾಲೆ ಮುಗಿಸಿ ಮನೆಗಳಿಗೆ ಬರುವಂತಹ ಸಂದರ್ಭದಲ್ಲಿ ಜೋಪಾನ ಮಾಡಬೇಕು ಎಂದು ಸಲಹೆ ನೀಡಿದರು.

ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ಅಧ್ಯಕ್ಷ ಕಾಡೇನಹಳ್ಳಿ ನಾಗಣ್ಣಗೌಡ ಮಾತನಾಡಿ, ಮಕ್ಕಳೇ ದೇಶದ ಆಸ್ತಿ. ಅವರ ಪ್ರಗತಿಗೆ ಆದ್ಯತೆ ನೀಡಬೇಕು. ಮಕ್ಕಳ ಮೇಲೆ ಒತ್ತಡ ಹೇರದೆ ಮಕ್ಕಳ ಹಕ್ಕು ರಕ್ಷಣೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಮಕ್ಕಳು ಆನ್‌ಲೈನ್ ಗೇಮ್, ಸೈಬರ್ ಕ್ರೈಂಗಳಿಗೆ ಒಳಗಾಗುತ್ತಿದ್ದಾರೆ. ಇವುಗಳಿಂದ ಮಕ್ಕಳನ್ನು ಪೋಷಕರು ಜೋಪಾನ ಮಾಡಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಭಾಗದಲ್ಲಿ ನಿರ್ಮಾಣಗೊಂಡಿರುವ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಮಕ್ಕಳ ಸುರಕ್ಷತೆಗೆ ಬೇಕಾದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಜೊತೆಗೆ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಇಲ್ಲಿನ ಪರಿಸರ, ವಾತಾವರಣ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗುವಂತಿದೆ. ಬೆಂಗಳೂರಿನಲ್ಲಿ ಶಿಕ್ಷಣ ಸಂಸ್ಥೆಗೆ ಲಕ್ಷಗಟ್ಟಲೆ ಹಣ ನೀಡಿದರು ಇಂತಹ ವಾತಾವರಣ ಸಿಗುವುದಿಲ್ಲ ಎಂದರು.

ಇದೇ ವೇಳೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಈ ವೇಳೆ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು, ಜಿಪಂ ಮಾಜಿ ಸದಸ್ಯೆ ನಾಗಮ್ಮ ಪುಟ್ಟರಾಜು, ಆಡಳಿತಾಧಿಕಾರಿ ನಿವೇದಿತ ನಾಗೇಶ್, ಪ್ರಾಂಶುಪಾಲೆ ಮಾಚಮ್ಮ, ಶಾಲಾ ಶಿಕ್ಷಕರ ವೃಂದ ಇದ್ದರು.

ಕೇಂದ್ರ ಸರ್ಕಾರದ ಯೋಜನೆಗಳ ಅರ್ಹರಿಗೆ ತಲುಪಿಸುವ

ವಿಕಸಿತ ಭಾರತ ಸಂಕಲ್ಪ ಯಾತ್ರೆಗೆ ಚಾಲನೆ



ಮೈಸೂರು,ಡಿ.16(ಪಿಎಂ)–ಮೈಸೂರು ನಗರದಲ್ಲಿ ಜನತೆಗೆ ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿ ಒದಗಿಸಲು ಹಾಗೂ ಅರ್ಹರಿಗೆ ಯೋಜನೆಗಳನ್ನು ತಲುಪಿಸುವ 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಗೆ ಶನಿವಾರ ಚಾಲನೆ ನೀಡಲಾಯಿತು.

ಮೈಸೂರು ರೈಲ್ವೆ ನಿಲ್ದಾಣದ ಎದುರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಯೋಜನೆಗಳನ್ನು ಕಟ್ಟಕಡೆಯ ವ್ಯಕ್ತಿಗೂ ತಲುಪಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ರೂಪಿಸಲಾಗಿದೆ. ಇದರಿಂದ ಜನತೆಗೆ ಕೇಂದ್ರ ಸರ್ಕಾರದ ಯೋಜನೆಗಳ ಪ್ರಯೋಜನ ಪಡೆಯುವುದು ಸುಲಭ ಸಾಧ್ಯವಾಗಲಿದೆ. ಅರ್ಹರು ಕೇಂದ್ರ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಯೋಜನೆಯ ಫಲಾನುಭವಿ ಸಲೀಂ ಮಾತನಾಡಿ, ಪ್ರಧಾನ ಮಂತ್ರಿಗಳು ನೀಡುವ ಸಾಲದ ಯೋಜನೆಯಲ್ಲಿ ಸಾಲ ಪಡೆದು ಹೊಸ ಆಟೋ ಖರೀದಿಸಿ, ಆರ್ಥಿಕತೆ ವೃದ್ಧಿಸಿಕೊಂಡಿದ್ದೇನೆ. ಈ ಮೊದಲು ಹೊಂದಿದ್ದ ಬಾಡಿಗೆ ಆಟೋದಲ್ಲಿ ಹಣ ಉಳಿಸಲು ಸಾಧ್ಯವಾಗುತ್ತಿರಲಿಲ್ಲ. ಇದೀಗ ಸ್ವಂತ ಆಟೋದಲ್ಲಿ ಹೆಚ್ಚಿನ ದುಡಿಮೆ ಮಾಡಿ, ಜೀವನ ಸಾಗಿಸಲು ಅನುಕೂಲವಾಗಿದೆ ಎಂದು ಇದೇ ವೇಳೆ ಹರ್ಷ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಪಿಎಂಐಜಿಪಿ ಯೋಜನೆ ಅಡಿ ನೀಡುವ ಸಾಲದಲ್ಲಿ 10 ಲಕ್ಷ ರೂ. ಸಾಲ ಪಡೆದು ಮರದ ಕೆಲಸದಲ್ಲಿ ಪ್ರಗತಿ ಕಂಡಿದ್ದೇನೆ. ಈ ಸಾಲದಿಂದ 10 ಮಂದಿಗೆ ಉದ್ಯೋಗ ನೀಡಿದ್ದು, ಆ ಮೂಲಕ ನಿರುದ್ಯೋಗ ಸಮಸ್ಯೆ ನೀಗಿಸಲು ಸಹಕಾರಿಯಾದ ಸಂತಸ ಹೊಂದಿದ್ದೇನೆ ಎಂದು ಮತ್ತೊಬ್ಬ ಫಲಾನುಭವಿ ನವೀನ್ ಕುಮಾರ್ ತಮ್ಮ ಅನುಭವ ಹಂಚಿಕೊಂಡರು.

15 ದಿನ ಯಾತ್ರೆಯ ವಾಹನ ಸಂಚಾರ: ಎಸ್‌ಬಿಐ ಬ್ಯಾಂಕ್ ಕೇಂದ್ರ ಕಚೇರಿ ವ್ಯವಸ್ಥಾಪಕಿ ಜಯಂತಿ ಮಾತನಾಡಿ, ಗ್ರಾಮಾಂತರ ಪ್ರದೇಶದ ಜನರಿಗೆ ವಿಕಸಿತ ಸಂಕಲ್ಪ ಯಾತ್ರೆ ಮೂಲಕ ಅರ್ಹರಿಗೆ ಕೇಂದ್ರದ ಯೋಜನೆಗಳ ಮಾಹಿತಿ ನೀಡಿ, ಸ್ಥಳದಲ್ಲೇ ಬ್ಯಾಂಕ್ ಖಾತೆ ಆರಂಭದ ಜೊತೆಗೆ ಸಾಲ ನೀಡುವ ಕಾರ್ಯವನ್ನು ಮಾಡಲಾಗುತ್ತಿದೆ. ಪೂರ್ಣ ಪ್ರಮಾಣದ ದಾಖಲೆ ಒದಗಿಸುತ್ತಿದ್ದಂತೆ ಸ್ಥಳದಲ್ಲೇ ಉಜ್ವಲ ಯೋಜನೆ ಗ್ಯಾಸ್ ಸಿಲಿಂಡರ್ ಹಾಗೂ ಸ್ಟವ್ ಅನ್ನು ಉಚಿತವಾಗಿ ನೀಡಲಾಗುತ್ತಿದೆ. ಮೈಸೂರು ನಗರದಲ್ಲಿ ಇಂದಿನಿಂದ 15 ದಿನಗಳ ಕಾಲ ಸಂಕಲ್ಪ ಯಾತ್ರೆಯ ವಾಹನ ಸಂಚರಿಸಲಿದೆ ಎಂದರು.

ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ವಿ.ಎನ್.ನಾಗೇಶ್, ಎಸ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕರಾದ ಪ್ರಭಾಕರ್ ಮಲ್ಯ, ಪಿವಿಎಸ್ ರಂಗನಾಥ್, ಎಜಿಎಂ ವಿಶ್ವನಾಥ್, ಎಸ್‌ಬಿಐ ಅಶೋಕ ರಸ್ತೆ ಶಾಖೆ ವ್ಯವಸ್ಥಾಪಕ ಸುಂದರೇಶ್ ಇತರಿದ್ದರು.

ಪತ್ನಿಯನ್ನೇ ಕಳುಹಿಸಿ ಹನಿಟ್ರ್ಯಾಪ್: ದಂಪತಿ ಸೇರಿ ನಾಲ್ವರ ಬಂಧನ

ಬೆಂಗಳೂರು: ಉದ್ಯಮಿಯೊಬ್ಬರನ್ನು ಹನಿಟ್ರ್ಯಾಪ್ ಮಾಡಿದ ಆರೋಪದ ಮೇಲೆ ಸೆಂಟ್ರಲ್ ಸಿಟಿ ಕ್ರೈಂ ಬ್ರಾಂಚ್ (ಸಿಸಿಬಿ) ವಿಶೇಷ ವಿಭಾಗವು ವಿವಾಹಿತ ದಂಪತಿ ಸೇರಿದಂತೆ ನಾಲ್ವರನ್ನು ಬಂಧಿಸಿದೆ. ತನ್ನ ಪತ್ನಿಯನ್ನು ವಿಧವೆಯಂತೆ ಬಿಂಬಿಸಿದ ಪತಿಯೊಬ್ಬ ಆಕೆಯನ್ನು ಕೈಗಾರಿಕೋದ್ಯಮಿಯೊಂದಿಗೆ ಕಳುಹಿಸಿ ಆತನನ್ನು ಬಲೆಗೆ ಬೀಳಿಸಿ ಹಣ ವಸೂಲಿ ಮಾಡಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಬಂಧಿತ ವ್ಯಕ್ತಿಗಳನ್ನು ಖಲೀಮ್, ಸಭಾ, ಓಬೇದ್ ರಕೀಮ್ ಮತ್ತು ಅತೀಕ್ ಎಂದು ಗುರುತಿಸಲಾಗಿದೆ. ಖಲೀಮ್ ಮತ್ತು ಸಭಾ ವಿವಾಹಿತ ದಂಪತಿ, ಕೈಗಾರಿಕೋದ್ಯಮಿ ಅತಿಯುಲ್ಲಾ ಅವರನ್ನು ಬಲೆಗೆ ಬೀಳಿಸಲು ಪ್ರಯತ್ನಿಸಿ ಸಿಕ್ಕಿಬಿದ್ದಿದ್ದಾರೆ.

ಈ ಗ್ಯಾಂಗ್ ಅತೀವುಲ್ಲಾನನ್ನು ಹನಿಟ್ರ್ಯಾಪ್ ಮಾಡಿ ಹಣ ಪೀಕಲು ಯತ್ನಿಸಿದ್ದು, ಆರೋಪಿ ಖಲೀಮ್ ತನ್ನ ಪತ್ನಿ ಸಭಾಳನ್ನು ವಿಧವೆ ಎಂದು ಹೇಳಿ ನೋಡಿಕೊಳ್ಳುವಂತೆ ಉದ್ಯಮಿ ಅತೀವುಲ್ಲಾ ಜೊತೆ ಬಿಟ್ಟು ಹನಿಟ್ರ್ಯಾಪ್ ನಡೆಸಿದ್ದಾನೆ.

ಆರ್‌ಆರ್ ನಗರ ಪ್ರದೇಶದಲ್ಲಿ ಹೋಟೆಲ್ ರೂಂ ಬುಕ್ ಮಾಡಲು ಆಧಾರ್ ಕಾರ್ಡ್‌ನೊಂದಿಗೆ ತನ್ನೊಂದಿಗೆ ಬರುವಂತೆ ಹೇಳಿದ್ದಾಳೆ. ಅತೀವುಲ್ಲಾ ಹೋಟೆಲ್ ಕೋಣೆಗೆ ಪ್ರವೇಶಿಸಿದಾಗ, ಆರೋಪಿಗಳು ಒಳನುಗ್ಗಿ ಈ ಸಂಬಂಧವನ್ನು ಕುಟುಂಬದಿಂದ ಗೌಪ್ಯವಾಗಿಡಲು 6 ಲಕ್ಷ ರೂ. ನೀಡುವಂತೆ ಒತ್ತಾಯಿಸಿದ್ದಾರೆ.

ಈ ವೇಳೆ ಅತೀವುಲ್ಲಾ ಅಲ್ಲೇ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಈ ವೇಳೆ ಹೋಟೆಲ್‌ಗೆ ದಾಳಿ ಮಾಡಿದ ಸಿಸಿಬಿ ಪೊಲೀಸರು, ರೆಡ್‌ಹ್ಯಾಂಡ್ ಆಗಿ ಹನಿಟ್ರ್ಯಾಪ್ ಮಾಡಿ ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳು ಸರಣಿ ಹನಿಟ್ರ್ಯಾಪಿಂಗ್ ಮತ್ತು ಸುಲಿಗೆ ಪ್ರಕರಣಗಳಲ್ಲಿ ಭಾಗಿಯಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಆರ್‌ಆರ್ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಇಂದು ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ ಪುಣ್ಯಾರಾಧನೆ

ಮೈಸೂರು, ಡಿ.16– ಡಾ.ಶ್ರೀ ಶಿವರಾತ್ರಿ



ರಾಜೇಂದ್ರ ಮಹಾಸ್ವಾಮಿಗಳ 37ನೆಯ ಪುಣ್ಯಾರಾಧನೆಯನ್ನು ಡಿ.17 ಭಾನುವಾರದಂದು ಸುತ್ತೂರು ಕ್ಷೇತ್ರದಲ್ಲಿ ಏರ್ಪಡಿಸಲಾಗಿದೆ.

ಬೆಳಗ್ಗೆ 9 ಗಂಟೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ, ಮಠಾಧೀಶರುಗಳ ಸಮ್ಮುಖದಲ್ಲಿ ಹಾಗೂ ಗಣ್ಯರ ಉಪಸ್ಥಿತಿಯಲ್ಲಿ ನೆರವೇರುವ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾ ವಿದ್ಯಾಪೀಠದ 2024ನೇ ಇಸವಿಯ ಕನ್ನಡ ಮತ್ತು ಇಂಗ್ಲಿಷ್ ಗೋಡೆ ಕ್ಯಾಲೆಂಡರ್‌ಗಳು ಹಾಗೂ ಪಾಕೆಟ್ ಕ್ಯಾಲೆಂಡರ್‌ಗಳನ್ನು ಬಿಡುಗಡೆಗೊಳಿಸಲಾಗುವುದು.

15ನೇ ಭಾರತೀಯ ರಾಷ್ಟ್ರೀಯ ಸೂಪರ್‌ಕ್ರಾಸ್ ಚಾಂಪಿಯನ್‌ಶಿಪ್ ಆಗಿ ಖುಗ್ವೇದ್ ಬರ್ಗುಜೆ

ಮೈಸೂರು, ಡಿ.16– ನಾಲ್ಕು ದಶಕಗಳ ರೇಸಿಂಗ್ ಪರಂಪರೆ ಹೊಂದಿರುವ ಪೆಟ್ರೊನಾಸ್ ಟಿವಿಎಸ್ ರೇಸಿಂಗ್ ತಂಡವು, 15ನೇ ಭಾರತೀಯ ರಾಷ್ಟ್ರೀಯ ಸೂಪರ್ ಕ್ರಾಸ್ ಚಾಂಪಿಯನ್‌ಶಿಪ್ (ಐಎನ್‌ಎಸ್‌ಸಿ) 2023ರಲ್ಲಿ ಅಪ್ರತಿಮ ಪ್ರದರ್ಶನ ನೀಡಿ ಮೇಲುಗೈ ಸಾಧಿಸಿದೆ. ಮೊದಲ ಸ್ಥಾನ ಗಳಿಸಿದ ತಂಡವು, ಅಂತಿಮ ರೇಸ್‌ನ ಎಲ್ಲಾ ಮೂರು ವರ್ಗಗಳಲ್ಲಿ ಗೆಲುವು ಸಾಧಿಸಿದೆ.

ಮೈಸೂರಿನ ಆರ್‌ಟಿ ನಗರದಲ್ಲಿರುವ ಯುಎಸ್‌ಎ ಫಾರ್ಮ್‌ನಲ್ಲಿ ನಡೆದ ಎಂಆರ್‌ಎಫ್ ಸೂಪರ್‌ಕ್ರಾಸ್ ನ್ಯಾಷನಲ್ ಚಾಂಪಿಯನ್‌ಶಿಪ್‌ನ ಅಂತಿಮ ಸುತ್ತಿನಲ್ಲಿ ಪೆಟ್ರೊನಾಸ್ ಟಿವಿಎಸ್ ರೇಸಿಂಗ್ ತಂಡವು ಅಸಾಮಾನ್ಯ ಪ್ರದರ್ಶನ ನೀಡಿ, 4 ರೇಸ್‌ಗಳ ಪೈಕಿ 2ರಲ್ಲಿ ಗೆಲುವು ಸಾಧಿಸಿದೆ.

ಈ ವೇಳೆ ಟಿವಿಎಸ್ ಮೋಟಾರ್ ಕಂಪನಿಯ ಬಿಸಿನೆಸ್ ಪ್ರೀಮಿಯಂನ ಮುಖ್ಯಸ್ಥ ವಿಮಲ್ ಸುಂಬ್ಳಿ ಮಾತನಾಡಿ, ಐಎನ್‌ಎಸ್‌ಸಿ 2023ರಲ್ಲಿನ ಪೆಟ್ರೊನಾಸ್ ಟಿವಿಎಸ್ ರೇಸಿಂಗ್ ತಂಡದ ಗೆಲುವು, ಮೋಟಾರ್‌ಸ್ಪೋರ್ಟ್ಸ್ ಕ್ಷೇತ್ರದಲ್ಲಿನ ಅವರ ಅಚಲ ಶ್ರದ್ಧೆ ಮತ್ತು ಗಮನಾರ್ಹ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ತಂಡದ ಮಹೋನ್ನತ ಸಾಧನೆಯು ಶ್ರೇಷ್ಠತೆ ಬಗೆಗಿನ ನಮ್ಮ ನಿರಂತರ ಬದ್ಧತೆಗೆ ಸಾಕ್ಷಿಯಾಗಿರುವುದರ ಜೊತೆಗೆ ಉದ್ಯಮದಲ್ಲಿ ಹೊಸ ಮಾನದಂಡವನ್ನೂ ನಿಗದಿಪಡಿಸಿದೆ ಎಂದು ಹೇಳಿದ್ದಾರೆ.

ಹೈಕಮಾಂಡ್‌ನೊಂದಿಗೆ ಚರ್ಚಿಸಿ ಮುಂದಿನ ರಾಜಕೀಯ ತೀರ್ಮಾನ

● ಮಾಜಿ ಸಚಿವ ವಿ.ಸೋಮಣ್ಣ ಪ್ರತಿಕ್ರಿಯೆ ● ನನ್ನ ಸೋಲಿಗೆ ಯಾರು ಕಾರಣ ಅಂತಾ ಎಲ್ಲರಿಗೂ ಗೊತ್ತಿದೆ



ಮೈಸೂರು,ಡಿ.16–ಮೂರ್‍ನಾಲ್ಕು ದಿನಗಳಲ್ಲಿ ಹೈಕಮಾಂಡ್ ಜೊತೆ ಚರ್ಚಿಸಿದ ನಂತರ ಮುಂದಿನ ತೀರ್ಮಾನ ಕೈಗೊಳ್ಳುವೆ ಎಂದು ಮಾಜಿ ಸಚಿವ ವಿ.ಸೋಮಣ್ಣ ಪುನರುಚ್ಚರಿಸಿದ್ದಾರೆ.

ಮೈಸೂರಿನಲ್ಲಿ ಶನಿವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಕಾರ್ತಿಕ ಮಾಸ ಮುಗಿದು ಇಂದಿನಿಂದ ಧನುರ್ಮಾಸ ಆರಂಭವಾಗುತ್ತಿದೆ. ಮುಂದಿನ ಮೂರ್‍ನಾಲ್ಕು ದಿನಗಳಲ್ಲಿ ದೆಹಲಿಗೆ ತೆರಳಿ, ಹೈಕಮಾಂಡ್ ಜೊತೆ ಮಾತುಕತೆ ನಡೆಸಿ, ವಿಧಾನಸಭಾ ಚುನಾವಣೆಯಲ್ಲಿ ಏನೆಲ್ಲಾ ಬೆಳವಣಿಗೆ ಆಯಿತು ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತೇನೆ. ಆ ಬಳಿಕ ನನ್ನ ಮುಂದಿನ ನಿರ್ಧಾರ ತಿಳಿಸುತ್ತೇನೆ ಎಂದರು.

ನಿಮ್ಮ ಸೋಲಿಗೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅವರ ಪುತ್ರ ವಿಜಯೇಂದ್ರ ಕಾರಣರಾದರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಸೋಲಿಗೆ ಯಾರು ಕಾರಣ ಅನ್ನೋದು ಎಲ್ಲರಿಗೂ ಗೊತ್ತಿದೆ. ಹಾಗಾಗಿ ಪದೇ ಪದೆ ಆ ವಿಚಾರವನ್ನು ಪ್ರಸ್ತಾಪ ಮಾಡುವುದು ಬೇಡ ಎಂದರು.

ಲೋಕಸಭೆಗೆ ಆಕಾಂಕ್ಷಿಯಲ್ಲ: ನಾನು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿ ಅಲ್ಲ. ಪಕ್ಷ ಯಾವ ಜವಾಬ್ದಾರಿ ನೀಡುತ್ತದೋ ಅದನ್ನು ನಿಭಾಯಿಸುವೆ ಎಂದಷ್ಟೇ ಹೇಳಿದರು. ಕಾಂಗ್ರೆಸ್ ಶಾಸಕರ ಔತಣಕೂಟದಲ್ಲಿ ಬಿಜೆಪಿ ಶಾಸಕರು ಭಾಗವಹಿಸಿದ್ದ ವಿಚಾರಕ್ಕೆ ಪ್ರತಿಕ್ರಿಯಿಸಿ, ಎಸ್.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್ ಅವರಿಗೆ ಕಾಂಗ್ರೆಸ್ ಪಕ್ಷದ ಮುಖಂಡರು ಔತಣಕೂಟಕ್ಕೆ ಆಹ್ವಾನ ನೀಡಿದ್ದರಿಂದ ಹೋಗಿದ್ದಾರೆ. ಈ ಮೊದಲು ಅವರಿಬ್ಬರೂ ಕಾಂಗ್ರೆಸ್‌ನಲ್ಲೇ ಇದ್ದವರು. ಔತಣಕೂಟಕ್ಕೆ ಹೋದ ತಕ್ಷಣ ಮತ್ತೆ ಕಾಂಗ್ರೆಸ್‌ಗೆ ಹೋಗುತ್ತಾರೆ ಎಂಬುದರಲ್ಲಿ ಅರ್ಥವಿಲ್ಲ ಎಂದರು. ನೀವು ಬಿಜೆಪಿ ಬಿಡುತ್ತೀರಾ? ಎಂದು ಕೇಳಿದ್ದಕ್ಕೆ ಎಲ್ಲದಕ್ಕೂ ಕಾಲ ಕೂಡಿ ಬರಬೇಕು. ಸೂಕ್ತ ಕಾಲದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇನೆ ಎಂದು ನುಣುಚಿಕೊಂಡರು.

ಕನಕದಾಸರ ಜಯಂತಿ; ಸಾಧಕರಿಗೆ ಸನ್ಮಾನ



ಮೈಸೂರು, ಡಿ.16(ಎಸ್‌ಪಿಎನ್)– 16ನೇ ಶತಮಾನದಲ್ಲಿ ನಮ್ಮ ಸಮಾಜದಲ್ಲಿನ ಸಾಮಾಜಿಕ ಸಮಸ್ಯೆಗಳ ಕುರಿತು ಭಕ್ತ ಕನಕದಾಸರು ಶೋಷಿತರ ಪರವಾಗಿ ದನಿಯಾಗಿದ್ದರು ಎಂದು ಕಾಂಗ್ರೆಸ್ ವಕ್ತಾರ ಸೂರಜ್ ಹೆಗ್ಗಡೆ ಅಭಿಪ್ರಾಯಪಟ್ಟರು.

ಮೈಸೂರು ತೊಣಚಿಕೊಪ್ಪಲು ಜನತಾ ನಗರದಲ್ಲಿ ಮಹಾದಾಸ ಶ್ರೀ ಭಕ್ತ ಕನಕದಾಸ ಸೇವಾ ಸಮಿತಿ ಮತ್ತು ಕನಕ ಯುವ ಸೇನೆ, ಅಖಿಲ ಕರ್ನಾಟಕ ಕನಕ ಮತ್ತು ರಾಯಣ್ಣ ಸಾಂಸ್ಕೃತಿಕ ಟ್ರಸ್ಟ್, ಅಖಿಲ ಕರ್ನಾಟಕ ಕನಕ ಮತ್ತು ರಾಯಣ್ಣ ನೌಕರರ ಒಕ್ಕೂಟದ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 536ನೇ ಕನಕ ಜಯಂತಿ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಕ್ತಕನಕದಾಸರ ಮಹಿಮೆಯನ್ನು ತಿಳಿಯಲು ಉಡುಪಿ ಶ್ರೀಕೃಷ್ಣ ಮಠಕ್ಕೆ ಹೋದರೆ ಇಂದಿನ ಪೀಳಿಗೆಗೆ ಎಲ್ಲಾ ಮಾಹಿತಿ ದೊರೆಯುತ್ತದೆ. ತಮ್ಮ ಭಕ್ತಿಯ ಮೂಲಕವೇ ಶ್ರೀಕೃಷ್ಣನನ್ನು ಒಲಿಸಿಕೊಂಡಿದ್ದರು. ಅಲ್ಲದೆ, ಅವರು ರಚಿಸಿರುವ ಪದ್ಯಗಳು ಇಂದಿಗೂ ಪ್ರಸ್ತುತ ಎಂದ ಅವರು, ಇಂದಿನ ಪೀಳಿಗೆ ಕನಕದಾಸರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಮಾತನಾಡಿ, 16ನೇ ಶತಮಾನದಲ್ಲಿ ಕನಕದಾಸರು ಈ ಸಮಾಜದಲ್ಲಿನ ಅಸಮಾನತೆ ತೊಲಗಬೇಕು ಎಂದಿದ್ದರು. ಅಲ್ಲದೆ ಪ್ರಸ್ತುತ ಸಮಾಜದಲ್ಲಿ ತಂತ್ರಜ್ಞಾನ ಬೆಳೆದಿದ್ದರೂ ಜಾತಿ ವ್ಯವಸ್ಥೆ ಗಟ್ಟಿಗೊಳ್ಳುತ್ತಿರುವುದು ಬೇಸರದ ಸಂಗತಿ ಎಂದರು.

'ಕನಕ ಮಾರ್ಗ' ಪ್ರಶಸ್ತಿ: ಈ ವೇಳೆ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಹಿರಿಯ ವೈದ್ಯ ಡಾ.ಅಬ್ದುಲ್ ಖಾದರ್, ಹಿರಿಯ ಸಾಹಿತಿ ಡಾ.ಲಿಂಗದಳ್ಳಿ ಹಾಲಪ್ಪ, ಡಾ.ಕೆ.ಇ.ಗೋವಿಂದ ಗೌಡ, ಸಮಾಜ ಸೇವಕ ಆರ್.ಮಹದೇವ್ ಅವರಿಗೆ 'ಕನಕ ಮಾರ್ಗ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಈ ವೇಳೆ ಮಾಜಿ ಮೇಯರ್ ಟಿ.ಬಿ. ಚಿಕ್ಕಣ್ಣ, ಮಹಾದಾಸ ಶ್ರೀ ಭಕ್ತಕನಕದಾಸ ಸೇವಾಸಮಿತಿ ಅಧ್ಯಕ್ಷ ಬೀರೇಗೌಡ, ಮಹದೇವ ಲಕ್ಷ್ಮೀಗೌಡ, ರಾಜು, ಬಿ.ಬಸವರಾಜು, ರಮೇಶ, ಎಸ್.ಸ್ವಾಮಿ, ಶಂಕರೇಗೌಡ, ಮಹದೇವ, ಮಾದೇಗೌಡ, ಸಿ.ಶ್ರೀನಿವಾಸ, ಮೊಳ್ಳಯ್ಯ, ನಿವೃತ್ತ ರೈಲ್ವೆ ನೌಕರ ಎಸ್.ಮಹದೇವ(ಹಾಡ್ಯ), ಮಹೇಶ್ ಸೇರಿದಂತೆ ಇತರರಿದ್ದರು.

ಸಾವಿತ್ರಮ್ಮ ನಿಧನ



ಕೆ.ಆರ್.ಪೇಟೆ, ಡಿ.16– ತಾಲೂಕಿನ ಬೂಕನಕೆರೆ ಹೋಬಳಿ, ಬಲ್ಲೇನಹಳ್ಳಿ ನಿವಾಸಿ ಸಣ್ಣರಾಮೇಗೌಡ ಅವರ ಪತ್ನಿ, ಸಾವಿತ್ರಮ್ಮ(68) ಶನಿವಾರ ರಾತ್ರಿ ನಿಧನರಾದರು.

ಇವರಿಗೆ ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ಉಮೇಶ್ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ. ಅಂತ್ಯಕ್ರಿಯೆ ಬಲ್ಲೇನಹಳ್ಳಿಯಲ್ಲಿ ಭಾನುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರುಣ ಕ್ಷೇತ್ರಕ್ಕೆ ಹೆಚ್ಚುವರಿ 2 ಸಾವಿರ ಮನೆ ಮಂಜೂರಿಗೆ ಸರ್ಕಾರಕ್ಕೆ ಡಾ.ಯತೀಂದ್ರ ಒತ್ತಾಯ



ಸುತ್ತೂರು, ಡಿ.16– ಈ ಬಾರಿ ವರುಣ ಕ್ಷೇತ್ರಕ್ಕೆ ಆಶ್ರಯ ಯೋಜನೆಯಡಿ ಹೆಚ್ಚುವರಿ ಮನೆಗಳ ಅವಶ್ಯಕತೆ ಇರುವುದರಿಂದ ಇನ್ನು 2 ಸಾವಿರ ಮನೆಗಳನ್ನು ನೀಡುವಂತೆ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಎಂದು ಆಶ್ರಯ ಸಮಿತಿ ಅಧ್ಯಕ್ಷರಾದ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಅವರು ವರುಣ ಕ್ಷೇತ್ರಕ್ಕೆ ಸೇರಿರುವ ವರಕೋಡು ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಾ, ವರುಣ ಕ್ಷೇತ್ರದಲ್ಲಿ ಹಾಲಿ ಇರುವ ಮನೆಗಳ ಜೊತೆಗೆ ಹೆಚ್ಚುವರಿಯಾಗಿ ಇನ್ನು 2 ಸಾವಿರ ಮನೆಗಳನ್ನು ಮಂಜೂರು ಮಾಡಿಸಲು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಎಂದು ತಿಳಿಸಿದರಲ್ಲದೇ ನಮ್ಮ ಕ್ಷೇತ್ರದಲ್ಲಿ ಮಂಜೂರಾಗಿರುವ ಅಭಿವೃದ್ಧಿ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಇನ್ನುಳಿದ ಕೆಲವೇ ಕಾಮಗಾರಿಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಇದೇ ವೇಳೆ ಗ್ರಾಮದ ಬೀರಪ್ಪ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ವರಕೋಡು ಉಮೇಶ್, ಈರುಳ್ಳಿ ಕುಮಾರ್, ತಾ.ಪಂ ಮಾಜಿ ಸದಸ್ಯ ಮುದ್ದರಾಮೇಗೌಡ, ಎ.ಪಿ.ಎಂ.ಸಿ ಸದಸ್ಯ ಸಿದ್ದರಾಮನಹುಂಡಿ ಬಸವರಾಜು, ಗ್ರಾ.ಪಂ ಅಧ್ಯಕ್ಷ ಬಸವರಾಜು, ಗ್ರಾ.ಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ರವಿಕುಮಾರ್, ಮೆಲ್ಲಹಳ್ಳಿ ರಾಜೇಶ್ ಸಿದ್ದಯ್ಯ, ಬೀರಪ್ಪ, ಉಪ ತಹಶೀಲ್ದಾರ್ ಲತ, ಆರ್‌ಐ ಶಂಕರ್, ಇಓ ಗಿರಿಧರ್, ಬೀರಪ್ಪ ದೇವಸ್ಥಾನ ಸಮಿತಿಯ ಎಲ್ಲಾ ಸದಸ್ಯರು, ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ದೆಹಲಿ, ಪಂಜಾಬ್ ಮಾದರಿ ಕರ್ನಾಟಕದಲ್ಲೂ ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ

ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ವಿಶ್ವಾಸ

ಆಲೂಗೆಡ್ಡೆ ಬೆಳೆದು ನಾಯಕರು 100 ಕೋಟಿ ಆಸ್ತಿ ಮಾಡಿದ್ದಾರಾ...!



ಮೈಸೂರು, ಡಿ.16(ಬಿಎಲ್‌ಯು)– ದೆಹಲಿ ಹಾಗೂ ಪಂಜಾಬ್ ಮಾದರಿಯಲ್ಲಿ ಪಕ್ಷ ಸಂಘಟನೆ ಮಾಡಿ ಆಮ್ ಆದ್ಮಿ ಪಕ್ಷವನ್ನು ಅಧಿಕಾರಕ್ಕೆ ತರುವುದು ನಮ್ಮ ಗುರಿ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ನಡೆದ ಆಮ್ ಆದ್ಮಿ ಪಕ್ಷದ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೂ ಮುನ್ನ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು ಸೇರಿದಂತೆ ಕರ್ನಾಟಕದ 31 ಜಿಲ್ಲೆಗಳಲ್ಲಿ ಬಲಿಷ್ಠವಾಗಿ ಪಕ್ಷ ಸಂಘಟನೆ ಮಾಡಲಾಗುವುದು ಎಂದು ಹೇಳಿದರು.

ಆಡಳಿತರೂಢ ಸರ್ಕಾರದ ಭ್ರಷ್ಟಾಚಾರ, ಜನ ವಿರೋಧಿ ನೀತಿಯನ್ನು ಜನರಿಗೆ ಮನದಟ್ಟು ಮಾಡಿಕೊಟ್ಟು, ಬೇರು ಮಟ್ಟದಿಂದ ಪಕ್ಷ ಸಂಘಟನೆ ಮಾಡಿದ ಕಾರಣ ದೆಹಲಿ ಮತ್ತು ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ ಬಂದಿತು ಎಂದರು.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಹಾಗೂ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿರುವ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಹಾಗೂ ಜನವಿರೋಧಿ ನೀತಿಗಳನ್ನು ಜನರಿಗೆ ತಿಳಿಸಲಾಗುವುದು. ಇದೇ ವೇಳೆ ಜಿಲ್ಲಾ ಮಟ್ಟದಿಂದ ಗ್ರಾಮ ಮಟ್ಟದ ತನಕ ಪಕ್ಷವನ್ನು ಸಂಘಟನೆ ಮಾಡಲಾಗುವುದು. ಈ ಮೂಲಕ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಗುರಿ ಹೊಂದಲಾಗಿದೆ ಎಂದು ಮುಖ್ಯಮಂತ್ರಿ ಚಂದ್ರು ತಿಳಿಸಿದರು.

ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರ, ಜೆಡಿಎಸ್ ಪಕ್ಷದ ಕುಟುಂಬ ರಾಜಕಾರಣವನ್ನು ಜನರಿಗೆ ಮನವರಿಕೆ ಮಾಡಲಾಗುವುದು. ಇದ್ಯಾವುದೇ ಆಪಾದನೆ ಇಲ್ಲದ ಆಮ್ ಆದ್ಮಿ ಪಕ್ಷ ಬೆಂಬಲಿಸುವಂತೆ ಈ ಮೂಲಕ ಕೋರಲಾಗುವುದು ಎಂದು ಹೇಳಿದರು.

ಆಲೂಗೆಡ್ಡೆ ಬೆಳೆದು 100 ಕೋಟಿ ಆಸ್ತಿ ಮಾಡಿದ್ರಾ...!: ಶಿಕ್ಷಣ, ಆರೋಗ್ಯ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಯಾವುದೇ ಇಲಾಖೆ ನೋಡಿದರೂ 40 ಪರ್ಸೆಂಟ್ ಕಮಿಷನ್ ದಂಧೆ ನಡೆಯುತ್ತಿದೆ. ಒಬ್ಬೊಬ್ಬ ರಾಜಕಾರಣಿ 100 ಕೋಟಿ ರೂಪಾಯಿ ಆಸ್ತಿ ಒಡೆಯನಾಗಿದ್ದಾನೆ. ಇವರೆಲ್ಲಾ ಆಲೂಗೆಡ್ಡೆ ಬೆಳೆದು ಇಷ್ಟು ಹಣ ಸಂಪಾದನೆ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದ ಮುಖ್ಯಮಂತ್ರಿ ಚಂದ್ರು, ಜನರಿಗೆ ಮೂಲ ಸೌಕರ್ಯ ಕಲ್ಪಿಸುವ ಹೆಸರಿನಲ್ಲಿ ಕೂಡ ಲೂಟಿ ಮಾಡುತ್ತಿದ್ದಾರೆ. ಇಂತಹ ಸರ್ಕಾರಗಳಿಂದ ಜನರು ರೋಸಿ ಹೋಗಿದ್ದಾರೆ ಎಂದು ಆರೋಪಿಸಿದರು.

ಆದರೆ ದೆಹಲಿಯಲ್ಲಿ ಅಧಿಕಾರದಲ್ಲಿರುವ ಆಮ್ ಆದ್ಮಿ ಪಕ್ಷ ಭ್ರಷ್ಟಾಚಾರದ ಕಳಂಕವಿಲ್ಲದೆ ಉಚಿತ ಶಿಕ್ಷಣ, ಆರೋಗ್ಯ ಸೇವೆ ನೀಡುವ ಯೋಜನೆ ಕಾರ್ಯರೂಪಕ್ಕೆ ತಂದಿದೆ. ದೇಶದಲ್ಲಿ ಅಸ್ತಿತ್ವದಲ್ಲಿರುವ ಇತರೆ ಪಕ್ಷಗಳ ಸರ್ಕಾರ ಇಂತಹ ವಿಶಿಷ್ಟ ಯೋಜನೆ ಅನುಷ್ಠಾನ ಮಾಡಲು ಸಾಧ್ಯವಾಗಿಲ್ಲ ಎಂದು ಮುಖ್ಯಮಂತ್ರಿ ಚಂದ್ರು ಅಭಿಪ್ರಾಯಪಟ್ಟರು.

ನಮ್ಮ ಪಕ್ಷ ಟಾರ್ಗೆಟ್: ಆಮ್ ಆದ್ಮಿ ಪಕ್ಷದ ಸಚಿವರು ಭ್ರಷ್ಟಾಚಾರ ಆರೋಪದಲ್ಲಿ ಜೈಲಿನಲ್ಲಿದ್ದಾರಲ್ಲ ಎಂಬ ಪ್ರಶ್ನೆಗೆ, ಕೇಂದ್ರ ಸರ್ಕಾರ ಬಿಜೆಪಿಯ ಯಾವ ನಾಯಕನ ಮನೆ ಮೇಲೂ ಐಟಿ, ಇಡಿ, ಸಿಬಿಐ ದಾಳಿ ನಡೆಸಿಲ್ಲ. ಆದರೆ ಸತ್ಯ ಸಂದೇಶ ಸಾರುವ ಆಮ್ ಆದ್ಮಿ ಪಕ್ಷವನ್ನು ಟಾರ್ಗೆಟ್ ಮಾಡಿ ನಿರಂತರ ದಾಳಿ ಮಾಡಿದ್ದಾರೆ. ಆದರೆ ನಮ್ಮ ಪಕ್ಷದ ಯಾವ ನಾಯಕನ ಮನೆಯಲ್ಲಿ ನಯಾ ಪೈಸೆ ಹಣ ಸಿಕ್ಕಿಲ್ಲ. ನಮ್ಮ ಪಕ್ಷಕ್ಕೆ ಕೆಟ್ಟ ಹೆಸರು ತರಲು ಕೇಂದ್ರ ಸರ್ಕಾರ ತನ್ನ ಏಜೆನ್ಸಿಗಳನ್ನು ಸ್ವಾರ್ಥಕ್ಕೆ ಬಳಸಿಕೊಂಡು ದಾಳಿ ನಡೆಸಿರುವುದು ಇದರಿಂದ ಸ್ಪಷ್ಟವಾಗಿದೆ ಎಂದು ಆಪಾದಿಸಿದರು. 40 ಪರ್ಸೆಂಟ್ ಕಮಿಷನ್ ನೀಡಲಾಗದ ಗುತ್ತಿಗೆದಾರನೊಬ್ಬ ಸಾಲದ ಹೊರೆಯಿಂದ ಕೆ.ಎಸ್.ಈಶ್ವರಪ್ಪ ಹೆಸರನ್ನು ಡೆತ್ ನೋಟ್ ನಲ್ಲಿ ಬರೆದಿಟ್ಟು ಆತ್ಮಹತ್ಯೆಗೆ ಶರಣಾದ, ಮಾಡಾಳು ವಿರುಪಾಕ್ಷಪ್ಪ ಮನೆಯಲ್ಲಿ ಕೋಟಿ ಕೋಟಿ ಹಣ ಪತ್ತೆಯಾಯಿತು. ಆದರೆ ಇಂತಹ ಯಾವುದೇ ಸೂಕ್ತ ಆಧಾರ ಹಾಗೂ ದಾಖಲಾತಿ ಇಲ್ಲದಿದ್ದರೂ ಆಮ್ ಆದ್ಮಿ ಪಕ್ಷದ ನಾಯಕರ ಮನೆ ಮೇಲೆ ಕೇಂದ್ರ ಸರ್ಕಾರ ದಾಳಿ ಮಾಡಿದೆ ಎಂದು ದೂರಿದರು.

ಈ ಹಿನ್ನೆಲೆ ಬಿಜೆಪಿ ಸರ್ಕಾರ ಕಿತ್ತೊಗೆಯಲು ಇಂಡಿಯಾ ಮೈತ್ರಿ ಕೂಟ ರಚನೆ ಮಾಡಲಾಗಿದೆ. ಏನೇ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇದ್ದರೂ ಅದನ್ನೆಲ್ಲಾ ಮರೆತು ಬಿಜೆಪಿ ಸರ್ಕಾರ ಮುಕ್ತ ವ್ಯವಸ್ಥೆ ತರಲು ಎಲ್ಲರೂ ಕೈ ಜೋಡಿಸುತ್ತೇವೆ ಎಂದು ತಿಳಿಸಿದರು.

ಆಮ್ ಆದ್ಮಿ ಪಕ್ಷದ ರಾಜ್ಯ ಉಪಾಧ್ಯಕ್ಷ ಬಿ.ಟಿ.ನಾಗಣ್ಣ, ನಂಜಪ್ಪ, ಕಾಳೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ಕುಶಾಲ ಸ್ವಾಮಿ, ಯುವ ಘಟಕದ ಅಧ್ಯಕ್ಷ ಲೋಹಿತ್, ರಾಜ್ಯ ಕಾರ್ಯದರ್ಶಿ ಮಾಲವಿಕ ಗುಬ್ಬಿವಾಣಿ, ಸೋಸಲೆ ಸಿದ್ದರಾಜು ಸೇರಿದಂತೆ ಹಲವರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕನ್ನಡ–ಹಿಂದಿ ಚಿತ್ರಗೀತೆ ಸಮ್ಮಿಲನ; ಗಾನ ಧಾರೆಯಲ್ಲಿ ಮಿಂದೆದ್ದ ಶ್ರೋತೃಗಳು

'ಸ್ವರಧಾರಾ' ಸಂಗೀತ ಸಂಜೆಯಲ್ಲಿ ಹಾಡಿನ ದೃಶ್ಯಾವಳಿಯ ಸೊಗಸು



ಸ್ವರಧಾರಾ ಸಂಗೀತ ಸಂಜೆ ಕಾರ್ಯಕ್ರಮವನ್ನು ವೆಂಗೀಪುರದ ನಂಬಿಮಠದ ಶ್ರೀ ಇಳೈಆಳ್ವಾರ್ ಸ್ವಾಮೀಜಿ ಉದ್ಘಾಟಿಸಿದರು.



ನಿತ್ಯಾನಂದ ಕಾಮತ್ ಮತ್ತು ಕವಿತಾ ಕಾಮತ್



ಅನ್ನು ಮೂರ್ನಾಡ್ ಮತ್ತು ಡಾ.ಭರತ್‌ರಾಜ್

ಮೈಸೂರು,ಡಿ.16(ಪಿಎಂ)–ಕನ್ನಡ ಹಾಗೂ ಹಿಂದಿ ಚಿತ್ರಗೀತೆಗಳ ಗಾನ ಮಾಧುರ್ಯಕ್ಕೆ ನೆರೆದಿದ್ದ ಶ್ರೋತೃಗಳು ಮನಸೋತರು. ಗಾಯಕರು ಸಾದರಪಡಿಸಿದ ಗಾಯನ ಮೋಡಿಗೆ ಸಭಿಕರು ತಲೆದೂಗಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಶನಿವಾರ ಸಂಗೀತದ ಸುಧೆ ಹರಿಸಿದ ಗಾಯಕರು, ಕೇಳುಗರು ಮೈಮರೆಯುವಂತೆ ಮಾಡಿದರು. ಕವಿತಾ ಕಾಮತ್ ನೇತೃತ್ವದಲ್ಲಿ ಗೀತ್ ಸಂಗಮ್ ತಂಡದವರಿಂದ 'ಸ್ವರಧಾರಾ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಕನ್ನಡ ಮತ್ತು ಹಿಂದಿ ಚಲನಚಿತ್ರ ಗೀತೆಗಳ ಸಂಗೀತ ರಸ ಸಂಜೆ ಕಾರ್ಯಕ್ರಮದಲ್ಲಿ ಇಂತಹ ಗಾನಧಾರೆ ಧುಮ್ಮಿಕ್ಕಿ ಹರಿಯಿತು.

ಗಾಯಕರ ಗಾನ ಮೋಡಿಯ ಜೊತೆಗೆ ವೇದಿಕೆಯ ಹಿಂಬದಿಯ ಎಲ್‌ಇಡಿ ಪರದೆಯಲ್ಲಿ ಸಾದರಪಡಿಸಿದ ಆಯಾಯ ಗೀತೆಗಳ ವೀಡಿಯೋ ಪ್ರಸಾರ ಮಾಡಿ, ಸಭಿಕರ ಕಣ್ಮನವನ್ನೂ ತಣಿಸಲಾಯಿತು. ವೈದ್ಯರು, ಶಿಕ್ಷಕರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಹವ್ಯಾಸಿ ಗಾಯಕರು, ತಮ್ಮ ಕಂಠಸಿರಿಯಲ್ಲಿ ನಾದಲೋಕ ಸೃಷ್ಟಿಸಿದರು.

ಮೊದಲಿಗೆ ಡಾ.ವಿಷ್ಣುವರ್ಧನ್ ಅಭಿಯನದ 'ಕೋಟಿಗೊಬ್ಬ' ಚಿತ್ರದ 'ಕಾವೇರಿಗೆ ಕಾಲುಂಗುರ ತೊಡಿಸಿ' ಗೀತೆಯನ್ನು ಗಾಯಕ ಚಂದ್ರು ಸುಶ್ರಾವ್ಯವಾಗಿ ಹಾಡಿ ಸಭಿಕರ ಮನಕ್ಕೆ ಲಗ್ಗೆಯಿಟ್ಟರು. ಇಂಪು–ಕಂಪಿನ ಈ ಹಾಡು ಪೂರ್ಣಗೊಳ್ಳುತ್ತಿದ್ದಂತೆ ವೇದಿಕೆಯೇರಿದ ಡಾ.ಭರತ್ ರಾಜ್ ಮತ್ತು ಅನ್ನು ಮೂರ್ನಾಡ್ 'ನೀ ಬರೆದ ಕಾದಂಬರಿ' ಚಿತ್ರದ 'ನೀ ಮೀಟಿದ ನೆನಪೆಲ್ಲವು ಎದೆ ತುಂಬಿ ಹಾಡಾಗಿದೆ...' ಗೀತೆ ಪ್ರಸ್ತುತಪಡಿಸಿ, ಸಭಿಕರ ಮನಸೂರೆಗೊಂಡರು. ಬಳಿಕ 'ಹೊಸ ಬೆಳಕು' ಚಿತ್ರದ 'ಹೊಸಬೆಳಕು ಮೂಡುತಿದೆ... ಬಂಗಾರದ ರಥವೇರುತ... ಆಕಾಶದಿ ಓಡಾಡುತ...' ಗೀತೆಯನ್ನು ಹಾಡಿದ ಡಾ.ಕೆ.ಎ.ಕೆ.ಸುರೇಂದ್ರನ್, ಲಘು ನೃತ್ಯವನ್ನೂ ಮಾಡಿ ಸಭಿಕರ ಎದೆಗೆ ಲಗ್ಗೆ ಇಟ್ಟು ಚಪ್ಪಾಳೆ ಗಿಟ್ಟಿಸಿದರು. ಕೆಆರ್ ಆಸ್ಪತ್ರೆ ವೈದ್ಯರಾದ ಇವರು ಪ್ರವೃತ್ತಿಯಲ್ಲಿ ಗಾಯಕರು.

ನಂತರ 'ಮನಮೆಚ್ಚಿದ ಮಡದಿ' ಚಿತ್ರದ ಗೀತೆಗೆ ವೇದಿಕೆ ತೆರೆದುಕೊಂಡಿತು. ಈ ಚಿತ್ರದ 'ತುಟಿಯ ಮೇಲೆ ತುಂಟ ಕಿರುನಗೆ... ಕೆನ್ನೆ ತುಂಬ ಕೆಂಡ ಸಂಪಿಗೆ...' ಹಾಡನ್ನು ನಿತ್ಯಾನಂದ ಕಾಮತ್ ಮತ್ತು ಗೀತಾ ರಾವ್ ಸಾದರಪಡಿಸಿದರು. ಈ ಚಿತ್ರದಲ್ಲಿ ಡಾ.ರಾಜ್‌ಕುಮಾರ್ ಮತ್ತು ಲೀಲಾವತಿ ಜೋಡಿಯ ಅಭಿನಯವಿದ್ದು, ಈ ಗೀತೆ ಪ್ರಸ್ತುತಪಡಿಸುವಾಗ, ಇತ್ತೀಚೆಗೆ ನಿಧನರಾದ ಲೀಲಾವತಿ ಅವರೊಂದಿಗೆ ಡಾ.ರಾಜ್‌ಕುಮಾರ್ ಅವರನ್ನೂ ಸಭಿಕರು ಸ್ಮರಿಸುವಂತಾಯಿತು.

ಇದಾದ ಕೆಲವೇ ಕ್ಷಣಗಳಲ್ಲಿ 'ಪ್ರೀತಿ ಮಾಡು ತಮಾಷೆ ನೋಡು' ಚಿತ್ರದ 'ನಮ್ಮೂರು ಮೈಸೂರು... ನಿಮ್ಮೂರು ಯಾವೂರು...' ಗೀತೆಯನ್ನು ಹೆಡತಲೆ ನಾರಾಯಣ್ ಮತ್ತು ಜಯಲಕ್ಷ್ಮಿ ನಾಯ್ಡು ಸಾದರಪಡಿಸಿ ಶ್ರೋತೃ ವರ್ಗವನ್ನು ಗಾನಸುಧೆಯಲ್ಲಿ ತೇಲಿಸಿದರು. 'ಅಗರ್ ತುಮ್ ನಾ ಹೋಥೇ' ಹಿಂದಿ ಚಿತ್ರದ 'ಹಮೇ ಔರ್ ಜೀನೆ ಕೀ ಚಾಹತ್ ನಾ ಹೋಥಿ...' ಹಾಡನ್ನು ಕವಿತಾ ಕಾಮತ್ ಪ್ರಸ್ತುತಪಡಿಸಿದರು. 1983ರಲ್ಲಿ ತೆರೆ ಕಂಡ ಈ ಚಿತ್ರದ ಸದರಿ ಹಾಡನ್ನು ಹಾಡುವ ಮೂಲಕ ಅವರು ಸಭಿಕರಲ್ಲಿ ಸಂಗೀತದ ಸಿಂಚನ ಉಂಟು ಮಾಡಿದರು. 'ತಂದೆ ಮಕ್ಕಳು' ಚಿತ್ರದ 'ರಾಧಿಕೆ ನಿನ್ನ ಸರಸ ಇದೇ...ನೇ... ಮುರಳಿಯ ಮರೆಸಿ ನಗುತಿಹ ಸರಸಿ...' ಗೀತೆಯ ಮೂಲಕ ಗಾಯಕ ಬಿ.ಎನ್.ಕುಮಾರಸ್ವಾಮಿ ಶ್ರೋತೃಗಳು ಮೈ ಮರೆಯುವಂತೆ ಮಾಡಿದರು.

'ಕಳ್ಳ ಕುಳ್ಳ' ಚಿತ್ರದ 'ನಾ ಹಾಡಲೂ ನೀವು ಆಡಬೇಕು...' ಗೀತೆಯನ್ನು ವೈದ್ಯ ಡಾ.ರವೀಂದ್ರ ಕುಮಾರ್ ಹಾಡುವ ಮೂಲಕ ಸಭಿಕರಲ್ಲಿ ಮೋಡಿಯಿಟ್ಟರು. 'ರಥಸಪ್ತಮಿ' ಚಿತ್ರದ ಜೊತೆಯಾಗಿ ಹಿತವಾಗಿ... ಹಾಡನ್ನು ಚಂದ್ರು ಮತ್ತು ಜಯಲಕ್ಷ್ಮಿ ನಾಯ್ಡು, 'ಗಿರಿಕನ್ಯೆ' ಚಿತ್ರದ 'ಏನೆಂದು ನಾ ಹೇಳಲಿ ಮಾನವನ ಆಸೆಗೆ ಕೊನೆಯಲ್ಲಿ...' ಗೀತೆಯನ್ನು ಹೆಡೆತಲೆ ನಾರಾಯಣ್, 'ಚೋರಿ ಚೋರಿ' ಹಿಂದಿ ಸಿನಿಮಾದ 'ಆಜಾ ಸನಮ್...' ಗೀತೆಯನ್ನು ನಿತ್ಯಾನಂದ ಕಾಮತ್ ಮತ್ತು ಗೀತಾ ರಾವ್, 'ಒಲವಿನ ಉಡುಗೊರೆ' ಚಿತ್ರದ 'ಒಲವಿನ ಉಡುಗೊರೆ ಕೊಡ ಲೇನು...' ಹಾಡನ್ನು ಅನ್ನು ಮೂರ್ನಾಡ್, 'ಬಯಲು ದಾರಿ' ಚಿತ್ರದ 'ಎಲ್ಲಿರುವೆ ಮನವ ಕಾಡುವ ರೂಪಸಿಯೇ...' ಹಾಡನ್ನು ಡಾ. ಭರತ್‌ರಾಜ್ ಸಾದರಪಡಿಸಿ, ಸಂಗೀತದ ಅಲೆಯಲ್ಲಿ ಶ್ರೋತೃಗಳು ತೇಲಾಡುವಂತೆ ಮಾಡಿದರು. ಅಲ್ಲದೆ, ಈ ಎಲ್ಲಾ 11 ಮಂದಿ ಗಾಯಕರು 30ಕ್ಕೂ ಹೆಚ್ಚು ಗೀತೆಗಳನ್ನು ಹಾಡುವ ಮೂಲಕ ಸಿನಿಮಾ ಗೀತೆಗಳ ನಾದಲೋಕದಲ್ಲಿ ಸಭಿಕರು ಮಿಂದೇಳುವಂತೆ ಮಾಡಿದರು.

ಇದಕ್ಕೂ ಮುನ್ನ ಮೇಲುಕೋಟೆಯ ವೆಂಗೀಪುರದ ನಂಬಿಮಠದ ಶ್ರೀ ಇಳೈಆಳ್ವಾರ್ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ನರೇಂದ್ರ ಅವರು ಕಾರ್ಯಕ್ರಮಕ್ಕೆ ತಾಂತ್ರಿಕ ಸಹಕಾರ ನೀಡುವ ಮೂಲಕ ಹಾಡುಗಳ ದೃಶ್ಯಾವಳಿ ಎಲ್‌ಇಡಿ ಪರದೆಯಲ್ಲಿ ಮೂಡುವಂತೆ ಮಾಡಿದರು. ನಿವೃತ್ತ ಪ್ರಾಧ್ಯಾಪಕ ಡಾ.ಆರ್.ಎಲ್. ಜಗದೀಶ್ ಮತ್ತು ಎಂ.ಆರ್.ಅನಿತಾ ಕಾರ್ಯಕ್ರಮ ನಿರೂಪಿಸಿ, ಚಿತ್ರ ಹಾಗೂ ಗೀತೆಗಳ ಸ್ವಾರಸ್ಯಕರ ಸಂಗತಿಗಳನ್ನು ಸಭಿಕರಿಗೆ ತಿಳಿಸಿಕೊಟ್ಟರು. ಸಭಾಂಗಣ ಸಭಿಕರಿಂದ ಕಿಕ್ಕಿರಿದು ತುಂಬಿತ್ತು. ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು.

ಇಂದು ಪಿಂಚಣಿದಾರರ ದಿನಾಚರಣೆ

ಮೈಸೂರು, ಡಿ.16– ಕವಿಪ್ರನಿನಿ ಎಸ್ಕಾಂಗಳ ಪಿಂಚಣಿದಾರರ ಮತ್ತು ಕುಟುಂಬ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಾಳೆ (ಡಿ.17) ಬೆಳಗ್ಗೆ 10 ಗಂಟೆಗೆ ಪಿಂಚಣಿದಾರರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ನಗರದ ಎಫ್‌ಟಿಎಸ್ ಆವರಣದಲ್ಲಿರುವ ಕೇಂದ್ರ ಕಚೇರಿಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪಿಂಚಣಿ ಮತ್ತು ಕುಟುಂಬ ಪಿಂಚಣಿದಾರರು ಭಾಗವಹಿಸುವಂತೆ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಲ್.ಕೃಷ್ಣಮೂರ್ತಿ ಪ್ರತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಅಪರಾಧ ತಡೆ ಮಾಸಾಚರಣೆ

ಮೈಸೂರು, ಡಿ. 16– ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಅಪರಾಧ ತಡೆ ಮಾಸ ಆಚರಿಸಲಾಯಿತು. ಸರಸ್ವತಿಪುರಂ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಲತಾ ಎಸ್. ಎಸ್. ಹಾಗೂ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಸೋಮಶೇಖರ್, ಸಿಬ್ಬಂದಿ ವರ್ಗದವರು ಹಾಜರಿದ್ದು, ಅಪರಾಧಿಕ ಕೃತ್ಯಗಳು ಹಾಗೂ ಅವುಗಳ ಕುರಿತು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ನೀಡಿದರು. ಮನೆಯಿಂದ ಹೊರಗೆ ಹೊರಡುವಾಗ, ವಾಹನಗಳನ್ನು ನಿಲ್ಲಿಸುವಾಗ, ಆಭರಣಗಳನ್ನು ಧರಿಸುವಾಗ ಮತ್ತು ಆನ್‌ಲೈನ್ ವ್ಯವಹಾರ ನಡೆಸುವಾಗ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯ ಮಹದೇವಪ್ಪ ವಹಿಸಿದ್ದರು. ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಇದರ ಪ್ರಯೋಜನ ಪಡೆದುಕೊಂಡರು.

ಹಸಿರು ನಮ್ಮ ಉಸಿರು

4 ಗ್ಯಾರಂಟಿಯಡಿ 4.30 ಕೋಟಿ ಫಲಾನುಭವಿಗಳು

ಸಧ್ಯದಲ್ಲೇ ಐದನೇ ಗ್ಯಾರಂಟಿ 'ಯುವ ನಿಧಿ' ಯೋಜನೆ ಪ್ರಾರಂಭ



ಬೆಂಗಳೂರು, ಡಿ.16–ರಾಜ್ಯ ಸರ್ಕಾರದ ನಾಲ್ಕು ಗ್ಯಾರಂಟಿ ಯೋಜನೆ ಗಳಿಂದ ರಾಜ್ಯದ 4.30 ಕೋಟಿ ಫಲಾನುಭವಿಗಳು ಪ್ರಯೋಜನ ಪಡೆದಿದ್ದು, ಡಿಸೆಂಬರ್ ಕೊನೆಯಲ್ಲಿ ಐದನೇ ಗ್ಯಾರಂಟಿಯಾದ 'ಯುವ ನಿಧಿ' ಯೋಜನೆಯ ಗೌರವ ಧನ ಪಡೆಯಲು ನಿರುದ್ಯೋಗಿ ಪದವೀಧರರು ಮತ್ತು ಐಟಿಐ ಪದವಿ ಪಡೆದವರ ನೋಂದಣಿ ಆರಂಭವಾಗಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳೂ ಆದ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸರ್ಕಾರ ನೀಡಿದ್ದ ಭರವಸೆಯಂತೆ ಐದನೇ ಗ್ಯಾರಂಟಿಯನ್ನೂ ಜಾರಿಗೊಳಿಸಲಿದೆ ಎಂದಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮೊದಲ ಸಂಪುಟದಲ್ಲೇ ಐದರಲ್ಲಿ ನಾಲ್ಕು ಗ್ಯಾರಂಟಿಗಳನ್ನು ಜಾರಿಗೊಳಿಸುವ ನಿರ್ಧಾರ ಕೈಗೊಂಡು ಅಧಿಸೂಚನೆ ಹೊರಡಿಸಲಾಯಿತು.

114.54 ಕೋಟಿ ಮಹಿಳೆಯರಿಗೆ 'ಶಕ್ತಿ': ಶಕ್ತಿ ಯೋಜನೆಯಡಿ ರಾಜ್ಯದ ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರತಿ ದಿನ ಸುಮಾರು 60 ರಿಂದ 62 ಲಕ್ಷ ಮಂದಿ ಪ್ರಯಾಣಿಸುವ ಅವಕಾಶ ದೊರಕಿದೆ. ಇದು ವರೆಗೆ 114.54 ಕೋಟಿ ಮಹಿಳೆ ಯರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದು, ಅದರ ವೆಚ್ಚ 2700 ಕೋಟಿ ರೂ.ಗಳಾಗಿವೆ.

ಗೃಹ ಜ್ಯೋತಿಗೆ ಮಾಸಿಕ 800 ಕೋಟಿ: ಮಾಸಿಕ 200 ಯೂನಿಟ್‌ವರೆಗೆ ವಿದ್ಯುತ್ ಉಪಯೋಗಿಸಿದ ರಾಜ್ಯದ 1 ಕೋಟಿ 60 ಲಕ್ಷ ಕುಟುಂಬಗಳ ಗ್ರಾಹಕರು ಗೃಹ ಜ್ಯೋತಿ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಇದರಿಂದ ತಿಂಗಳಿಗೆ ಸುಮಾರು 800 ಕೋಟಿ ರೂ. ಖರ್ಚಾಗುತ್ತಿದೆ.

ಗೃಹ ಲಕ್ಷ್ಮಿಯರಿಗೆ 2300 ಕೋಟಿ: ಗೃಹ ಲಕ್ಷ್ಮಿ ಯೋಜನೆಯಡಿ ಕುಟುಂಬದ ಯಜಮಾನಿಯ ಖಾತೆಗೆ ಪ್ರತಿ ತಿಂಗಳು 2 ಸಾವಿರ ರೂ. ಜಮಾ ಮಾಡಲಾಗುತ್ತಿದ್ದು, 1 ಕೋಟಿ 16 ಲಕ್ಷ ಮಹಿಳೆಯರ ಖಾತೆಗಳಿಗೆ ಡಿಬಿಟಿ ಮೂಲಕ 2300 ಕೋಟಿ ರೂ. ನೇರವಾಗಿ ಜಮಾ ಆಗುತ್ತಿದೆ.

ಅನ್ನ ಭಾಗ್ಯದಡಿ 656 ಕೋಟಿ: ಅನ್ನ ಭಾಗ್ಯ ಯೋಜನೆಯಲ್ಲಿ ಪ್ರತಿ ತಿಂಗಳು 5 ಕೆಜಿ ಅಕ್ಕಿಯ ಬದಲಾಗಿ, ಪ್ರತಿ ಕೆಜಿಗೆ 34 ರೂ.ನಂತೆ ತಲಾ 170 ರೂ.ಗಳನ್ನು ಜಮಾ ಮಾಡಲಾಗುತ್ತಿದ್ದು, ಇದುವರೆಗೆ 3 ಕೋಟಿ 97 ಲಕ್ಷ ಕುಟುಂಬದ ಸದಸ್ಯರ ಖಾತೆಗಳಿಗೆ ಡಿಬಿಟಿ ಮೂಲಕ ಪ್ರತಿ ತಿಂಗಳು 656 ಕೋಟಿ ಹಣ ಜಮಾ ಆಗುತ್ತಿದೆ.

4 ಗ್ಯಾರಂಟಿ ಯೋಜನೆಗಳಿಂದ 4.30 ಕೋಟಿ ಫಲಾನುಭವಿಗಳಿಗೆ ಪ್ರಸ್ತುತ ವರ್ಷದಲ್ಲಿ ನಮ್ಮ ಎಲ್ಲ 5 ಗ್ಯಾರಂಟಿ ಯೋಜನೆಗಳಿಗೆ ಬೇಕಾದ 38 ಸಾವಿರ ಕೋಟಿ ರೂಪಾಯಿಯನ್ನು ರಾಜ್ಯ ಸರ್ಕಾರ ಕಾಯ್ದಿರಿಸಿದೆ. ಮುಖ್ಯವಾಗಿ ಈ ನಾಲ್ಕೂ ಪ್ರಮುಖ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ 4 ಕೋಟಿ 30 ಲಕ್ಷ ಫಲಾನುಭವಿಗಳು ಪ್ರಯೋಜನವನ್ನು ಪಡೆದುಕೊಂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ರಾಮಕೃಷ್ಣ ವಿದ್ಯಾಶಾಲಾ ಆವರಣದಲ್ಲಿ ಸುಳಿದಾಡಿದ ಚಿರತೆ ಸುಳಿವೇ ಇಲ್ಲ


ಆದರೆ ಶೋಧ ಕಾರ್ಯ ಮುಂದುವರಿಕೆ

ಮೈಸೂರು, ಡಿ.16– ಮೈಸೂರಿನ ಯಾದವಗಿರಿಯಲ್ಲಿ ಐದಾರು ದಿನಗಳ ಹಿಂದೆ ಕಾಣಿಸಿಕೊಂಡಿದ್ದ ಚಿರತೆ ಇನ್ನೂ ಪತ್ತೆಯಾಗಿಲ್ಲ. ಯಾದವಗಿರಿಯ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದ ತೋಟದಲ್ಲಿ ಡಿ.11ರ ರಾತ್ರಿ ಹೊಂಚು ಹಾಕಿದ್ದ ಚಿರತೆ ಅಲ್ಲಿನ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ವಿಷಯ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಕೂಂಬಿಂಗ್ ನಡೆಸಿ, ಚಿರತೆ ಪತ್ತೆಯಾಗದ ಕಾರಣ ಬೋನ್ ಇಟ್ಟಿದ್ದರು. ಆ ದಿನದಿಂದ ಅರಣ್ಯ ಇಲಾಖೆ ಸಿಬ್ಬಂದಿ ನಿಗಾ ವಹಿಸಿದ್ದಾರೆ. ಆದರೆ ಈವರೆಗೆ ಚಿರತೆ ಮತ್ತೆ ಕಾಣಿಸಿಕೊಂಡಿಲ್ಲ. ಚಿರತೆ ವಿದ್ಯಾಶಾಲಾ ಆವರಣದಿಂದ ಹೊರಹೋಗಿರಬಹುದು ಎನ್ನಲಾಗುತ್ತಿದ್ದು, ಸುತ್ತಮುತ್ತಲ ನಿರ್ಜನ ಪ್ರದೇಶದಲ್ಲಿ ಹುಡುಕಾಟ ನಡೆಸಲು ಕ್ರಮ ವಹಿಸಲಾಗಿದೆ ಎಂದು ತಿಳಿದುಬಂದಿದೆ. ಕೆಆರ್‌ಎಸ್ ರಸ್ತೆಯಲ್ಲಿ ಮಂಜುನಾಥಪುರಕ್ಕೆ ಹೊಂದಿಕೊಂಡಂತಿರುವ ಪೆಟ್ರೋಲ್ ಬಂಕ್ ಪಕ್ಕ ಹಾಗೂ ಅದರ ಎದುರು ಬದಿಯ ಖಾಲಿ ಜಾಗದಲ್ಲಿ ಆಳೆತ್ತರಕ್ಕೆ ಗಿಡಗಂಟಿಗಳು, ಹುಲ್ಲುಗಾವಲು ಆವರಿಸಿದೆ. ಇತ್ತ ರೈಲ್ವೆ ಇಲಾಖೆ ಕ್ವಾಟ್ರರ್ಸ್ ಪಕ್ಕದಲ್ಲೂ ಖಾಲಿ ಪ್ರದೇಶವಿದೆ. ಹೀಗೆ ಆಸುಪಾಸಿನಲ್ಲಿ ಪರಿಶೀಲನೆ ನಡೆಸಬೇಕೆಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಸಮಾಧಾನದ ಸಂಗತಿಯೆಂದರೆ ಚಿರತೆ ಈವರೆಗೆ ಜನ–ಜಾನುವಾರುಗಳ ಮೇಲೆ ದಾಳಿ ಮಾಡಿಲ್ಲ. ಸಾಕಿರುವ ಅಥವಾ ಬೀದಿ ನಾಯಿಗಳನ್ನು ಹೊತ್ತೊಯ್ದಿರುವ ಬಗ್ಗೆಯೂ ಮಾಹಿತಿ ಇಲ್ಲ. ವರ್ಷದ ಹಿಂದೆ ಸಿಎಫ್‌ಟಿಆರ್‌ಐ ಆವರಣದಲ್ಲಿ ಕಾಣಿಸಿಕೊಂಡಿದ್ದ ಚಿರತೆಯೇ ಈ ಭಾಗದಲ್ಲಿ ಕಾಣಿಸಿಕೊಂಡಿದೆ. ನಗರ ವಾಸಿ ಚಿರತೆ(ಅರ್ಬನ್ ಲೆಪರ್ಡ್)ಯಂತೆ ಸಂಚರಿಸುತ್ತಿದೆ ಎನ್ನಲಾಗಿದೆ.

ಮೂರು ರಾಜ್ಯಗಳಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರೇರಣೆ

ತಮಿಳುನಾಡು, ಹರ್ಯಾಣ, ಪಂಜಾಬ್‌ನಲ್ಲಿ ಸ್ವಸಹಾಯ ಸಂಘಗಳ ರಚನೆ; ಚಾಮುಂಡಿಬೆಟ್ಟ ವಲಯ ಒಕ್ಕೂಟದ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ಡಿ. 16–ಡಾ. ಡಿ.ವೀರೇಂದ್ರ ಹೆಗ್ಗಡೆ, ಡಾ.ಹೇಮಾವತಿ ವಿ. ಹೆಗ್ಗಡೆ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇತರೆ ಮೂರು ರಾಜ್ಯಗಳಲ್ಲೂ ಸ್ವಸಹಾಯ ಸಂಘಗಳ ರಚನೆಗೆ ಪ್ರೇರಣೆಯಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ಹಿರಿಯ ನಿರ್ದೇಶಕ ವಿಜಯಕುಮಾರ್ ನಾಗನಾಳ್ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಕುವೆಂಪುನಗರ, ಚಾಮುಂಡಿಬೆಟ್ಟ ವಲಯ ವತಿಯಿಂದ ಹೊಸಹುಂಡಿಯ ಭಾಗ್ಯಮ್ಮ ನರಸೇಗೌಡ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಪ್ರಗತಿಬಂಧು ಸ್ವಸಹಾಯ ಸಂಘಗಳ ವಲಯ ಒಕ್ಕೂಟದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಯೋಜನೆಯ ಯಶೋಗಾಥೆ ತಿಳಿದು ತಮಿಳುನಾಡು, ಹರ್ಯಾಣ ಹಾಗೂ ಪಂಜಾಬ್ ರಾಜ್ಯಗಳಲ್ಲೂ ಈ ರೀತಿಯ ಯೋಜನೆ ನಡೆಸಿ ಎಂದು ಕೋರಿದ್ದರು. ಆದರೆ ನಾವು ಕರ್ನಾಟಕಕ್ಕೆ ಸೀಮಿತವಾಗಿ ಕೆಲಸ ಮಾಡುತ್ತಿದ್ದೇವೆ. ನೀವು ಬೇಕಾದರೆ ಈ ಮಾದರಿಯನ್ನು ಅಲ್ಲಿ ಜಾರಿ ಮಾಡಿ ಎಂದು ಡಾ. ವೀರೇಂದ್ರ ಹೆಗ್ಗಡೆ ತಿಳಿಸಿದರು. ಅದರಂತೆ ಆ ಮೂರು ರಾಜ್ಯಗಳಲ್ಲೂ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ 6.50 ಲಕ್ಷ ಸ್ವಸಹಾಯ ಸಂಘಗಳಿದ್ದು, 55 ಲಕ್ಷ ಸದಸ್ಯರಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ 22 ರಿಂದ 25 ಸಾವಿರ ಕೋಟಿ ರೂ. ಸಾಲಸೌಲಭ್ಯ ಪಡೆದಿದ್ದಾರೆ. ಮೈಸೂರು, ನಂಜನಗೂಡು, ಟಿ.ನರಸೀಪುರ, ಎಚ್.ಡಿ.ಕೋಟೆ ತಾಲೂಕುಗಳಲ್ಲಿ 20 ಸಾವಿರ ಸ್ವಸಹಾಯ ಸಂಘಗಳಿದ್ದು, 2.10 ಲಕ್ಷ ಸದಸ್ಯರಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ 120 ಕೋಟಿ ರೂ. ಉಳಿತಾಯ ಮಾಡಿದ್ದಾರೆ. ಚಾಮುಂಡಿ ವಲಯದ 12 ಒಕ್ಕೂಟಗಳಿಂದ 12 ಕೋಟಿ ಉಳಿತಾಯ ಮಾತ್ರವಲ್ಲದೇ 900–1000 ಕೋಟಿ ರು. ಸಾಲ ಪಡೆದಿದ್ದಾರೆ, ಈ ಹಣವನ್ನು ಮಕ್ಕಳ ಶಿಕ್ಷಣ, ಮನೆ ನಿರ್ಮಾಣ, ಕೃಷಿ ಮತ್ತಿತರ ಚಟುವಟಿಕೆಗಳಿಗೆ ಬಳಸಿಕೊಂಡಿದ್ದಾರೆ. ಅದೇ ರೀತಿ ಮರುಪಾವತಿ ಪ್ರಮಾಣ ಕೂಡ ಉತ್ತಮವಾಗಿದೆ ಎಂದು ಅವರು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ತಾ. ಜನಜಾಗೃತಿ ಸಮಿತಿ ಸದಸ್ಯ ಆರ್.ರವಿ ಮಾತನಾಡಿ, ಮಹಿಳೆಯರು ಮುಖ್ಯವಾಹಿನಿಗೆ ಬಂದು ಆರ್ಥಿಕವಾಗಿ ಸಬಲೀಕರಣವಾಗಬೇಕು ಎಂಬ ಉದ್ದೇಶದಿಂದ ಸ್ವಸಹಾಯ ಸಂಘಗಳನ್ನು ಸ್ಥಾಪಿಸಲಾಗಿದೆ. ಇದರ ಸದುಪಯೋಗ ಪಡೆಯುವಂತೆ ಕರೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಆರ್ಥಿಕವಾಗಿ ಮುಂದೆ ಬರುತ್ತಿದ್ದು, ಉತ್ತಮವಾಗಿ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ ಎಂದರು.

ಭಾನವಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಕೆ. ನರಸೇಗೌಡ, ಗುಡುಮಾದನಹಳ್ಳಿ ಗ್ರಾಪಂ ಮಾಜಿ ಸದಸ್ಯ ಲೋಕೇಶ್, ಹೊಸಹುಂಡಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಮಂಜುಗೌಡ, ಸೋಮೇಶ್ವರಪುರ ಗ್ರಾಪಂ ಅಧ್ಯಕ್ಷೆ ರಾಜಮ್ಮ ಮಹದೇವ್, ಕುವೆಂಪುನಗರ ಕ್ಷೇತ್ರ ಯೋಜನಾಧಿಕಾರಿ ಶಕುಂತಲಾ, ಕಲಾವತಿ ಉಪಸ್ಥಿತರಿದ್ದರು.

ಐನ್‌ಮನೆ ಕೊಡವರ ಜೀವನಾದರ್ಶ, ಸಂಸ್ಕೃತಿಯ ಪ್ರತೀಕ

'ಸಾಂಸ್ಕೃತಿಕ ಪಿಂಞ ಧಾರ್ಮಿಕ ಹಿನ್ನಲೆಲ್ ಕೊಡವಡ ಐನ್‌ಮನೆ' ಕೃತಿ ಬಿಡುಗಡೆ

ಮಡಿಕೇರಿ,ಡಿ.16– ಸುಸಂಸ್ಕೃತ ಕೊಡವ ಜನಾಂಗಕ್ಕೆ ಜೀವನಾದರ್ಶ ಮತ್ತು ಸಂಸ್ಕೃತಿಯ ಪ್ರತೀಕವಾಗಿರುವ ಐನ್‌ಮನೆಯೇ ಆಧಾರ ಸ್ತಂಭವಾಗಿದೆ. ಕೊಡಗಿನ ಐನ್ ಮನೆಗಳು ಚೇತರಿಸಿಕೊಳ್ಳುವ ಅಗತ್ಯವಿದೆ ಎಂದು ಹಿರಿಯ ಸಾಹಿತಿ ಬಾಚರಣಿಯಂಡ ಪಿ.ಅಪ್ಪಣ್ಣ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟ ಪ್ರಕಟಿಸಿದ 77ನೇ ಪುಸ್ತಕ ಹಾಗೂ ಲೇಖಕಿ ಐಚಂಡ ರಶ್ಮಿ ಮೇದಪ್ಪ ಅವರು ಬರೆದಿರುವ 2ನೇ ಪುಸ್ತಕ 'ಸಾಂಸ್ಕೃತಿಕ ಪಿಂಞ ಧಾರ್ಮಿಕ ಹಿನ್ನಲೆಲ್ ಕೊಡವಡ ಐನ್‌ಮನೆ'ಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಐನ್‌ಮನೆಗಳು ಕೊಡವರ ಜೀವನಾದರ್ಶ, ಸಂಸ್ಕೃತಿ, ಸಭ್ಯತೆಗಳ ಪ್ರತೀಕವಾಗಿದ್ದು, ವಂಶದ ಮೂಲ ಕಾರಣ ಪುರುಷರನ್ನು ಇಲ್ಲಿ ನೆಲೆಗೊಳಿಸಿ ಪೂಜಿಸುವುದರಿಂದ ಈ ಮನೆಗೆ ಪೂಜನೀಯ ಸ್ಥಾನಮಾನವಿದೆ. ಕೊಡವ ಜನಾಂಗದ ಸಂಸ್ಕೃತಿಗೆ ಜೀವ ತುಂಬಿರುವ ಐನ್‌ಮನೆಯ ಕುರಿತು ಪುಸ್ತಕ ರಚಿಸಿರುವುದು ಶ್ಲಾಘನೀಯವೆಂದರು.

ಐನ್‌ಮನೆಯಲ್ಲಿ ಕಲಾತ್ಮಕತೆ ಇದೆ. ಕೊಡವ ಸಂಸ್ಕೃತಿಯ ಜೀವವಿದೆ. ಕೊಡವ ಜನಾಂಗದ ಜೀವಮಾನ ಅಡಗಿದೆ. ಈ ಪೂಜನೀಯ ಮತ್ತು ಭಾವನೀಯ ಐನ್‌ಮನೆಯನ್ನು ಉಳಿಸಿಕೊಂಡು ಹೋಗುವ ದೊಡ್ಡ ಜವಾಬ್ದಾರಿ ಎಲ್ಲರ ಮೇಲಿದೆ. ರಶ್ಮಿ ಮೇದಪ್ಪ ಅವರು ಐನ್‌ಮನೆ ಕುರಿತು ಬರೆದಿರುವ ಪುಸ್ತಕ ಅಧ್ಯಯನಶೀಲವಾಗಿದ್ದು, ಪ್ರತಿಯೊಬ್ಬ ಕೊಡವರ ಮನೆಯಲ್ಲಿ ಸಂಗ್ರಹಕ್ಕೆ ಯೋಗ್ಯವಾಗಿದೆ. ಕೊಡವ ಸಂಸ್ಕೃತಿ ಹೇಗೆ ಲೋಕ ಪ್ರಸಿದ್ಧವಾಯಿತು ಎಂಬುವುದನ್ನು ಲೇಖಕಿ ಆಳವಾಗಿ ಅಧ್ಯಯನ ಮಾಡಿದ್ದಾರೆ.

ಬಹಳ ಉತ್ತಮವಾದ ಬರವಣಿಗೆ, ಭಾಷಾ ಕೌಶಲ್ಯ ಮತ್ತು ಕುಟುಂಬಗಳ ಪೂರ್ವ ಇತಿಹಾಸ, ಸಂಸ್ಕೃತಿ ಇದರಲ್ಲಿ ಅಡಕವಾಗಿದ್ದು, ಯುಗ ಯುಗಾಂತರ ಕೊಂಡೊಯ್ಯುವ ಪುಸ್ತಕ ಇದಾಗಿದೆ ಎಂದು ವಿವರಿಸಿದರು.



ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ಮಾತನಾಡಿ, ಇಂದಿನ ಮಹಿಳೆಯರು ಸಂಸಾರವನ್ನು ಸರಿದೂಗಿಸಿಕೊಂಡು ಹೋಗುವುದರೊಂದಿಗೆ ಸಾಹಿತ್ಯ ಕ್ಷೇತ್ರದ ಬಗ್ಗೆಯೂ ಆಸಕ್ತಿ ತೋರಿ ಪುಸ್ತಕಗಳನ್ನು ರಚಿಸುತ್ತಿರುವುದು ಹೆಮ್ಮೆಯ ವಿಚಾರವೆಂದರು. ಕೊಡವ ಜನಾಂಗಕ್ಕೆ ಉತ್ತಮ ಸ್ಥಾನಮಾನವನ್ನು ದೊರಕಿಸಿಕೊಟ್ಟಿರುವುದು ಐನ್‌ಮನೆಗಳು. ಬಹಳ ಹಿಂದಿನಿಂದಲೂ ಕೊಡವ ಜನಾಂಗದ ಯಾವುದೇ ಶುಭ ಸಮಾರಂಭಗಳನ್ನು ಐನ್‌ಮನೆಯಲ್ಲಿ ಆಚರಿಸುವ ಪದ್ಧತಿ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಐನ್‌ಮನೆಯಲ್ಲಿ ಯಾರೂ ವಾಸವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಕೊಡವ ಸಂಸ್ಕೃತಿ, ಆಚಾರ ವಿಚಾರವನ್ನು ಜನಾಂಗ ಬಾಂಧವರು ಉಳಿಸಿ, ಬೆಳೆಸಿಕೊಂಡು ಹೋಗುವುದರ ಜೊತೆಗೆ ಮುಂದಿನ ಪೀಳಿಗೆಗೂ ಪರಿಚಯಯಿಸುವ ಕಾರ್ಯ ಆಗಬೇಕು ಎಂದರು. ಮಡಿಕೇರಿ ಕೊಡವ ಸಮಾಜದಲ್ಲಿ ಗ್ರಂಥಾಲಯವನ್ನು ರೂಪಿಸಿ ಪುಸ್ತಕವನ್ನು ಇಡುವ ಗುರಿ ಹೊಂದಲಾಗಿದೆ. ಜನಾಂಗ ಬಾಂಧವರು ಬರೆದು ಬಿಡುಗಡೆಗೊಳಿಸಿದ 128 ಪುಸ್ತಕಗಳನ್ನು ಈಗಾಗಲೇ ಸಂಗ್ರಹಿಸಿಡಲಾಗಿದ್ದು, ಹೊಸ ಬರಹಗಾರರಿಗೆ ಪ್ರೋತ್ಸಾಹ ನೀಡುವ ಕೆಲಸ ಮಾಡಲಾಗುತ್ತಿದೆ ಎಂದು ಮುತ್ತಪ್ಪ ಹೇಳಿದರು.

ಸುಬ್ರಹ್ಮಣ್ಯ ಕೇರಿ ಅಧ್ಯಕ್ಷ ನಾಳೆಯಂಡ ನಾಣಯ್ಯ ಮಾತನಾಡಿ, ಐನ್‌ಮನೆ ಕೊಡವ ಕುಟುಂಬದ ದೈವ ನೆಲೆಯಾಗಿದ್ದು, ಅದನ್ನು ದೇವಾಲಯದಂತೆ ಪೂಜಿಸಲಾಗುತ್ತದೆ. ಜನಾಂಗ ಬಾಂಧವರು ಕೊಡವಾಮೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದು ಕರೆ ನೀಡಿದರು. ಓದುಗರು ಹೆಚ್ಚು ಹೆಚ್ಚು ಪುಸ್ತಕಗಳನ್ನು ಕೊಂಡುಕೊಳ್ಳುವ ಮೂಲಕ ಬರಹಗಾರರನ್ನು ಪ್ರೋತ್ಸಾಹಿಸಬೇಕು ಎಂದ ಅವರು, ಕೊಡವರ ಆಚಾರ, ವಿಚಾರ, ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಲ್ಲಿ ಕೊಡವ ಮಕ್ಕಡ ಕೂಟದ ಕಾರ್ಯ ಪ್ರಶಂಸನೀಯ ಎಂದರು.

'ಸಾಂಸ್ಕೃತಿಕ ಪಿಂಞ ಧಾರ್ಮಿಕ ಹಿನ್ನಲೆಲ್ ಕೊಡವಡ ಐನ್‌ಮನೆ' ಪುಸ್ತಕ ಬರಹಗಾರ್ತಿ ಐಚಂಡ ರಶ್ಮಿ ಮೇದಪ್ಪ ಮಾತನಾಡಿ, ಈ ಪುಸ್ತಕ ತಾನು ಬರೆದಿರುವ ಎರಡನೆಯ ಪುಸ್ತಕವಾಗಿದ್ದು, ಇದು ಎಂ.ಎ ಕೊಡವ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಧ್ಯಯನದ ಪ್ರಬಂಧ ಪುಸ್ತಕವಾಗಿದೆ. ಮಾರ್ಗದರ್ಶಕರಾದ ಬಾಚರಣಿಯಂಡ ಅಪ್ಪಣ್ಣ ಅವರ ಅಭಿಪ್ರಾಯದಂತೆ ಕೊಡವ ಮಕ್ಕಡ ಕೂಟದ ಸಹಕಾರದೊಂದಿಗೆ ಪುಸ್ತಕ ರೂಪದಲ್ಲಿ ಹೊರತರಲಾಗಿದೆ ಎಂದು ತಿಳಿಸಿದರು.

ಐನ್‌ಮನೆಯಲ್ಲಿ ವಾಸವಿದ್ದ ಕೊಡವ ಕೂಡು ಕುಟುಂಬದ ಇತಿಹಾಸ, ಐನ್‌ಮನೆಯ ಪರಿಕಲ್ಪನೆ, ಅರ್ಥ, ವ್ಯಾಖ್ಯಾನ, ಐನ್ ಮನೆಯೊಂದಿಗಿನ ಕೊಡವರ ಸಂಬಂಧ, ಹಬ್ಬ ಹರಿದಿನಗಳಲ್ಲಿ ಐನ್‌ಮನೆಯ ಪಾತ್ರ ಮತ್ತು ವಿದ್ಯಾಭ್ಯಾಸದ ಮೊದಲು ಐನ್‌ಮನೆಗಳು ಹೇಗೆ ಕಲಿಕೆಯ ಕೇಂದ್ರವಾಗಿದ್ದವು ಹಾಗೂ ಅದರ ಒಂದು ಭಾಗವಾದ ಕೈಮಡದ ಬಗ್ಗೆಯೂ ವಿವರಣೆ ನೀಡಲಾಗಿದೆ. ಕೆಲವು ಕುಟುಂಬದ ಕಾರೋಣ ಕಥೆಗಳು, ಕುಟುಂಬಗಳಿಗೆ ಹೆಸರು ಬಂದ ವಿವರಣೆ ಸೇರಿದಂತೆ ಹಲವು ವಿಚಾರಗಳನ್ನು ಚಿತ್ರಗಳ ಸಹಿತ ವಿವರಿಸಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೊಡವ ಮಕ್ಕಡ ಕೂಟದ ಸ್ಥಾಪಕ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ, ಕೊಡವ ಮಕ್ಕಡ ಕೂಟ ಪ್ರಕಟಿಸಿರುವ 76 ಪುಸ್ತಕಗಳಲ್ಲಿ ಐದು ಪುಸ್ತಗಳಿಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು, ಚಿಗುರೆಲೆಗಳು ಪುಸ್ತಕಕ್ಕೆ ರಾಜ್ಯ ಪ್ರಶಸ್ತಿ, ಅಗ್ನಿಯಾತ್ರೆ ಪುಸ್ತಕಕ್ಕೆ 'ಗೌರಮ್ಮ ದತ್ತಿ ನಿಧಿ' ಪ್ರಶಸ್ತಿ ಲಭಿಸಿದೆ. ನಾಲ್ಕು ಪುಸ್ತಕಗಳು ಕೊಡವ ಸಿನಿಮಾವಾಗಿದೆ. 1965ರ ಯುದ್ಧ ಹಾಗೂ ಕೊಡಗಿನ ಮಹಾವೀರ ಸ್ಕ್ವಾಲೀ ಅಜ್ಜಮಾಡ ದೇವಯ್ಯ ಅವರ ಜೀವನಾಧಾರಿತ ಪುಸ್ತಕ ಬಾಲಿವುಡ್ ಸಿನಿಮಾವಾಗಿ ತೆರೆ ಮೇಲೆ ಬರಲು ಸಿದ್ಧತೆ ನಡೆಸಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕಿ ಐಚುಡ ಶಾಂತಿ ಪೂಣಚ್ಚ ಉಪಸ್ಥಿತರಿದ್ದರು.

ಸಿದ್ದಾಪುರ ಬಳಿ ಕಾಫಿ ತೋಟದಲ್ಲಿ ಗಜ ಗಾತ್ರದ ನಿಂಬೆಹಣ್ಣು

ಸಾಮಾನ್ಯ ಗಿಡದಲ್ಲಿ ಅಚ್ಚರಿ ಮೂಡಿಸಿದ ಐದು ಕೆಜಿ ತೂಕವುಳ್ಳ ನಿಂಬೆ



ಸಿದ್ದಾಪುರ: ಸಾಮಾನ್ಯವಾಗಿ ನಿಂಬೆಹಣ್ಣುಗಳ ಗಾತ್ರ ಸಣ್ಣದಾಗಿರುತ್ತದೆ. ಆದರೆ ಪಾಲಿಬೆಟ್ಟದ ಕಾಫಿ ತೋಟವೊಂದರ ಗಿಡದಲ್ಲಿ ಬೆಳೆದ ನಿಂಬೆಹಣ್ಣು ಬರೋಬ್ಬರಿ 5 ಕೆಜಿ ಗಾತ್ರದ್ದಾಗಿದ್ದು, ವಿಸ್ಮಯ ಮೂಡಿಸಿದೆ.

ಜಿಪಂ ಮಾಜಿ ಸದಸ್ಯ ಹಾಗೂ ಸಮಾಜ ಸೇವಕ ಮೂಕೊಂಡ ವಿಜು ಸುಬ್ರಮಣಿ ಅವರ ಕಾಫಿ ತೋಟದಲ್ಲಿ ನಿಂಬೆಹಣ್ಣು ಕಂಡುಬಂದಿದ್ದು ಅಂದಾಜು 6 ಅಡಿ ಎತ್ತರದ ಗಿಡಗಳಲ್ಲಿ ಸಣ್ಣ ಗಾತ್ರದಿಂದ ಬರೋಬ್ಬರಿ 5 ಕೆಜಿ ತೂಕದ ನಿಂಬೆಹಣ್ಣುಗಳು ಬೆಳೆದಿವೆ.

ನಾಲ್ಕು ವರ್ಷಗಳ ಹಿಂದೆ ವಿಜು ಸುಬ್ರಮಣಿ ಅವರು ಮೈಸೂರು ಮಾರುಕಟ್ಟೆಯಲ್ಲಿ ಸಿಟ್ರಸ್ ಹಣ್ಣು ಖರೀದಿ ಮಾಡಿ ತಂದಿದ್ದರು. ಉಪಯೋಗಕ್ಕೆ ಬಾರದ ಒಂದು ಹಣ್ಣನ್ನು ಮನೆಯ ಹಿಂಬದಿಯ ತೋಟದಲ್ಲಿ ಎಸೆದಿದ್ದರು. ಕೆಲ ದಿನಗಳ ನಂತರ ಸಣ್ಣ ಎರಡು ಗಿಡಗಳು ಬೆಳೆಯಿತು. ನಂತರ ಗಿಡವನ್ನು ಕಿತ್ತು ತೋಟದ ಬದಿಯಲ್ಲಿ ನೆಟ್ಟು ಆರ್ಗ್ಯಾನಿಕ್ ಗೊಬ್ಬರವನ್ನು ಕೊಡಲಾಗಿತ್ತು.

ಮೂರು ವರ್ಷಗಳ ಕಾಲ ಗಿಡ ಮಾತ್ರ ಬೆಳೆಯಲಾರಂಭಿಸಿತ್ತಾದರೂ ಗಿಡದಲ್ಲಿ ಹೂವು ಕಾಯಿಗಳು ಯಾವುದು ಕಂಡು ಬಂದಿರಲಿಲ್ಲ. ಇದು ಯಾವ ಗಿಡ ಎಂದು ವಿಜು ಸುಬ್ರಮಣಿ ಚಿಂತಿತರಾಗಿದ್ದರು. 4 ವರ್ಷಗಳ ನಂತರ ಇತ್ತೀಚೆಗೆ ಗಿಡದಲ್ಲಿ ಮಲ್ಲಿಗೆ ಹೂವಿನ ಆಕಾರದ ದೊಡ್ಡ ಹೂವುಗಳೊಂದಿಗೆ ಸಣ್ಣ ಕಾಯಿಗಳು ಕಾಣಿಸಿಕೊಂಡವು. ನಂತರ ಕಾಯಿಗಳು ದೊಡ್ಡದಾಗುತ್ತಾ ಹಣ್ಣುಗಳು ಬೆಳೆದವು. ವಿಜು ಸುಬ್ರಮಣಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಂತರ ಇದು ಗಜ ಗಾತ್ರದ ನಿಂಬೆಹಣ್ಣು ಎಂದು ಹೇಳಿದ್ದಾರೆ. ಇಟಲಿ, ಯೂರೋಪ್ ದೇಶಗಳಲ್ಲಿ ಕಂಡು ಬರುವ ಈ ಗಾತ್ರದ ನಿಂಬೆ ಹಣ್ಣು ಇಲ್ಲಿ ಬೆಳೆದಿದೆ. ಹಲವು ತಳಿಯ ಹಣ್ಣು-ಹಂಪಲು ಗಿಡಗಳನ್ನು ಬೆಳೆದಿದ್ದಾರೆ. ಅವಶ್ಯಕತೆ ಇರುವುದನ್ನು ಮಾತ್ರ ಕೊಯ್ದು ಬಾಕಿ ಹಣ್ಣುಗಳನ್ನು ಪಕ್ಷಿಗಳಿಗೆ ಆಹಾರವಾಗಲು ಬಿಡುತ್ತಾರೆ. ವಿಜು ಸುಬ್ರಮಣಿ ಪರಿಸರ ಕಾಳಜಿ ಸಮಾಜ ಸೇವೆಗಾಗಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಸುವರ್ಣ ಕರ್ನಾಟಕ ರಾಜ್ಯ ಪ್ರಶಸ್ತಿ ಸ್ವೀಕರಿಸಿದ್ದಾರೆ.

ಬೆಳಗಾವಿ ಬಳಿ ಮಹಿಳೆ ವಿವಸ್ತ್ರಗೊಳಿಸಿದ ಪ್ರಕರಣ ಖಂಡಿಸಿ

ಮಡಿಕೇರಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ



ಮಡಿಕೇರಿ,ಡಿ.16– ಬೆಳಗಾವಿ ಜಿಲ್ಲೆಯ ವಂಟಮೂರಿ ಗ್ರಾಮದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಮನೆಗೆ ಹಾನಿ ಮಾಡಿದ ಪ್ರಕರಣವನ್ನು ಖಂಡಿಸಿ ಮತ್ತು ರಾಜ್ಯ ಸರಕಾರದ ವಿರುದ್ಧ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾವಣೆಯಾದ ಮಹಿಳಾ ಮೋರ್ಚಾ ಪ್ರಮುಖರು ಹಾಗೂ ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಗೆಡವಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಂದ ಬಳಿಕ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಅದರಲ್ಲೂ ಮಹಿಳೆಯರಿಗೆ ಸುರಕ್ಷತೆ ಇಲ್ಲದಂತಾಗಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಪ್ರಕರಣದಲ್ಲಿ ಶಾಮೀಲಾದ ಎಲ್ಲಾ ಆರೋಪಿಗಳನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ಇದೀಗ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರಕಾರದಿಂದಾಗಿ ರಾಜ್ಯದ ಜನತೆಗೆ ರಕ್ಷಣೆ ಇಲ್ಲದಾಗಿದೆ. ಸರಕಾರ ಮಹಿಳೆಯರ ರಕ್ಷಣೆ ಮತ್ತು ಸುರಕ್ಷತೆಗೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಬೆಳಗಾವಿಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಿ ವಿಕೃತವನ್ನು ಮೆರೆದಿರುವುದಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆ ಎಂದು ಆರೋಪಿಸಿದರು.

ಈ ಸಂದರ್ಭ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಸದಸ್ಯರಾದ ಸಬಿತಾ, ಅರುಣ್ ಶೆಟ್ಟಿ, ಚಂದ್ರಶೇಖರ್, ಮಹಿಳಾ ಮೋರ್ಚಾದ ಪ್ರಮುಖರಾದ ಕನ್ನಿಕೆ ಸವಿತಾ ಸಂತೋಷ್, ಉಮಾ ಪ್ರಭು, ಬಿಜೆಪಿ ಜಿಲ್ಲಾ ವಕ್ತಾರ ಮಹೇಶ್ ಜೈನಿ, ನಗರಾಧ್ಯಕ್ಷ ಮನು ಮಂಜುನಾಥ್, ಬಿ.ಕೆ.ಜಗದೀಶ್, ಅರುಣ್ ಕುಮಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.


ನಾಳೆ ಶ್ರೀ ಸುಬ್ರಹ್ಮಣ್ಯ ಷಷ್ಠಿ

ಮಡಿಕೇರಿ: ನಗರದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಡಿ.18 ರಂದು ಶ್ರೀ ಸುಬ್ರಹ್ಮಣ್ಯ ಷಷ್ಠಿ ಹಬ್ಬದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಗಳು ನಡೆಯಲಿವೆ ಎಂದು ಶ್ರೀ ಓಂಕಾರೇಶ್ವರ ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ ದೇವರಾಜು ಅವರು ತಿಳಿಸಿದ್ದಾರೆ.

ಆಹಾರದ ಕೊರತೆಯಿಂದ ದೃಷ್ಟಿ ದೋಷವುಳ್ಳ ಹೆಣ್ಣಾನೆ ಸಾವು

ಮಡಿಕೇರಿ: ಕಳೆದ ಒಂದೂವರೆ ತಿಂಗಳಿನಿಂದ ಆಹಾರಕ್ಕಾಗಿ ಪರದಾಡುತ್ತ ಹಾರಂಗಿ ಹಿನ್ನೀರಿನ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ದೃಷ್ಟಿ ದೋಷದ ಹೆಣ್ಣು ಕಾಡಾನೆ ಮೃತಪಟ್ಟಿದೆ.

ಸೋಮವಾರಪೇಟೆ ಸಮೀಪದ ಸಜ್ಜಳ್ಳಿ ಗ್ರಾಮದ ಹಾರಂಗಿ ಹಿನ್ನೀರು ಪ್ರದೇಶದಲ್ಲಿ ನಿತ್ರಾಣಗೊಂಡು ಬಿದ್ದಿದ್ದ 35 ವರ್ಷದ ಹೆಣ್ಣು ಕಾಡಾನೆಗೆ ಚಿಕಿತ್ಸೆ ನೀಡಲಾಗಿತ್ತು. ಆದರೆ ಚೇತರಿಸಿಕೊಳ್ಳದ ಕಾಡಾನೆ ಸಾವನ್ನಪ್ಪಿದೆ. ಆಹಾರವಿಲ್ಲದೆ ಅಸ್ವಸ್ಥಗೊಂಡಿದ್ದ ಹೆಣ್ಣಾನೆಗೆ ಪಶು ವೈದ್ಯಾಧಿಕಾರಿಗಳು ಚಿಕಿತ್ಸೆ ನೀಡಿದರು. ಒಂದು ಕಣ್ಣು ಸಂಪೂರ್ಣವಾಗಿ ಕುರುಡಾಗಿತ್ತು, ಮತ್ತೊಂದು ಕಣ್ಣು ಮಂದವಾಗಿತ್ತು. ಈ ಕಾರಣದಿಂದ ತನಗೆ ಬೇಕಾದ ಆಹಾರವನ್ನು ಪಡೆದುಕೊಳ್ಳಲು ಸಾಧ್ಯವಾಗದ ಕಾಡಾನೆ ನಿತ್ರಾಣಗೊಂಡಿತ್ತು. ಕುಡಿಯುವ ನೀರಿಗಾಗಿ ಹಾರಂಗಿ ಹಿನ್ನೀರಿಗೆ ಬಂದು ಕುಸಿದು ಬಿದ್ದಿತ್ತು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.



ಅರಣ್ಯ ಪ್ರವಾಸೋದ್ಯಮಕ್ಕೆ ಅವಕಾಶ ನೀಡದಂತೆ ಕೊಡಗು ರೈತಸಂಘ ಆಗ್ರಹ

ಮಡಿಕೇರಿ,ಡಿ.16– ವನ್ಯಜೀವಿಗಳ ಸ್ವಚ್ಛಂದ ಬದುಕಿಗೆ ತೊಡಕಾಗಬಲ್ಲ ಅರಣ್ಯ ಪ್ರವಾಸೋದ್ಯಮಕ್ಕೆ ಅವಕಾಶ ನೀಡ ಬಾರದೆಂದು ರೈತಸಂಘದ ಕೊಡಗು ಜಿಲ್ಲಾ ಘಟಕ ಒತ್ತಾಯಿಸಿದೆ.

ತಿತಿಮತಿಯ ಅರಣ್ಯ ಇಲಾಖೆಯ ಅತಿಥಿ ಗೃಹದಲ್ಲಿ ನಾಗರಹೊಳೆ ವನ್ಯಜೀವಿ ವಿಭಾಗ, ಕೊಡಗು ಮತ್ತು ಹುಣಸೂರು ವನ್ಯಜೀವಿ ವಿಭಾಗದ ಅಧಿಕಾರಿಗಳೊಂದಿಗೆ ರೈತ ಸಂಘದ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ರೈತ ಸಂಘದ ಜಿಲ್ಲಾಧ್ಯಕ್ಷ ಮನು ಸೋಮಯ್ಯ, ಮತ್ತಿಗೋಡು ಸಾಕಾನೆ ಶಿಬಿರದ ಪ್ರವಾಸೋದ್ಯಮ ಚಟುವಟಿಕೆಯನ್ನು ತಕ್ಷಣ ನಿಲ್ಲಿಸುವಂತೆ ಒತ್ತಾಯಿಸಿದರು. ತಿತಿಮತಿ-ಹುಣಸೂರು ಹೆದ್ದಾರಿಯಲ್ಲಿ ವಾಹನದಟ್ಟಣೆ ಹೆಚ್ಚಾಗಿ ತೊಂದರೆಯಾಗುತ್ತಿದೆ. ಅರಣ್ಯ ಪ್ರದೇಶದಲ್ಲಿ ಹೊಸ ಪ್ರವಾಸೋದ್ಯಮ ಚಟುವಟಿಕೆಗೆ ಅವಕಾಶ ನೀಡಬಾರದು. ಅರಣ್ಯ ಪ್ರವಾಸೋದ್ಯಮದಿಂದ ಮಾನವ ಮತ್ತು ಪ್ರಾಣಿಗಳ ನಡುವಿನ ಸಂಘರ್ಷ ಹೆಚ್ಚಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಕಾಡಾನೆ, ಹುಲಿ ಮತ್ತು ಚಿರತೆಗಳಿಂದ ಗ್ರಾಮೀಣ ಪ್ರದೇಶದಲ್ಲಿ ಆಗುತ್ತಿರುವ ದಾಳಿ ಹಾಗೂ ಕೃಷಿಕರು ಅನುಭವಿಸುತ್ತಿರುವ ನಷ್ಟದ ಕುರಿತು ವಿವರಿಸಿದ ರೈತ ಸಂಘದ ಪದಾಧಿಕಾರಿಗಳು ಸಮಸ್ಯೆಗೆ ಶಾಶ್ವತ ಪರಿಹಾರ ಸೂಚಿಸುವಂತೆ ಒತ್ತಾಯಿಸಿದರು. ಹಿರಿಯ ಅರಣ್ಯ ಅಧಿಕಾರಿಗಳು ಹಾಗೂ ರೈತ ಸಂಘದ ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು.

ಕೈಗಾರಿಕಾ ಕ್ಷೇತ್ರದ ಬೆಳವಣಿಗೆ ನಿರುದ್ಯೋಗಿಗಳಿಗೆ ಆಶಾಕಿರಣ

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅಭಿಪ್ರಾಯ

ಚಾಮರಾಜನಗರ, ಡಿ.16– ಕೈಗಾರಿಕಾ ಕ್ಷೇತ್ರದ ಬೆಳವಣಿಗೆ ಜಿಲ್ಲೆಯ ನಿರುದ್ಯೋಗಿ ಯುವಕ, ಯುವತಿಯರ ಪಾಲಿಗೆ ಅಭಿವೃದ್ಧಿಯ ಆಶಾಕಿರಣವಾಗಿ ಪರಿಣಮಿಸಿದೆ ಎಂದು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅಭಿಪ್ರಾಯಪಟ್ಟರು.

ನಗರದ ನಿಜಗುಣ ರೆಸಾರ್ಟ್‌ನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಸಿಡ್ಬಿ ಹಾಗೂ ಕಾಸಿಯಾ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸವಲತ್ತುಗಳು, ಹಣಕಾಸಿನ ನೆರವು ಮತ್ತು ರಫ್ತು ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಚಾಮರಾಜನಗರ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಶೇ.52ರಷ್ಟು ಅರಣ್ಯ ಪ್ರದೇಶ ಹೊಂದಿದೆ. ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಸಲುವಾಗಿ ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ 25 ಎಕರೆ ಭೂಮಿ ಗುರುತಿಸಿ ಕೈಗಾರಿಕಾ ವಸಾಹತು ನಿರ್ಮಾಣಕ್ಕೆ ಅನುವು ಮಾಡಿಕೊಡಲಾಗಿದೆ. ಇದರಿಂದ ಸಾಕಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಜಿಲ್ಲೆಯ ನಿರುದ್ಯೋಗಿ ಯುವಕ, ಯುವತಿಯರು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ನೆರವಾಗಲಿದೆ ಎಂದರು.

ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಎಲ್ಲಾ ವರ್ಗದ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಸಣ್ಣ ಪ್ರಮಾಣದ ಕೈಗಾರಿಕಾ ನಿವೇಶನಗಳನ್ನು ಒದಗಿಸಲಾಗಿದೆ. 140 ಎಕರೆ ಪ್ರದೇಶವನ್ನು ಈಗಾಗಲೇ ಕೈಗಾರಿಕೆಗಳ ನಿರ್ಮಾಣಕ್ಕಾಗಿ ಹಂಚಿಕೆ ಮಾಡಲಾಗಿದೆ. ಈ ಪೈಕಿ 93 ಎಕರೆಯ ವಿವಿಧ ನಿವೇಶನಗಳನ್ನು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಜೂರು ಮಾಡಲಾಗಿದ್ದು, ನಿವೇಶನ ಹಂಚಿಕೆಯಲ್ಲಿ ಪಾರದರ್ಶಕತೆ ತರುವ ಉದ್ದೇಶವನ್ನು ಜಿಲ್ಲಾಡಳಿತ ಹೊಂದಿದೆ ಎಂದರು.



ಜಿಲ್ಲೆಯಲ್ಲಿ ಉದ್ಯಮ ನೋಂದಣಿ ಪ್ರಕ್ರಿಯೆಯಡಿ ನೋಂದಣಿಯಾಗಿರುವ ಅತಿ ಸಣ್ಣ ಹಾಗೂ ಸಣ್ಣ ಕೈಗಾರಿಕೆಗಳ 18,697 ಘಟಕಗಳಿದ್ದು, 99,254 ಉದ್ಯೋಗ ಸೃಷ್ಟಿಯಾಗಿದೆ. ಮಧ್ಯಮ ಕೈಗಾರಿಕೆಗೆ ಸಂಬಂಧಿಸಿದಂತೆ 4 ಘಟಕಗಳಿಗೆ 1114 ಕೋಟಿ ಬಂಡವಾಳ ಹೂಡಿಕೆಯಾಗಿದೆ. ಅಲ್ಲದೆ 6 ಬೃಹತ್ ಕೈಗಾರಿಕೆಗಳು 1,893 ಕೋಟಿ ಬಂಡವಾಳ ಹೂಡಿದ್ದು, ಇದರಿಂದ 2,487 ಉದ್ಯೋಗ ಸೃಷ್ಟಿಯಾಗಿರುತ್ತದೆ. ಇವೆಲ್ಲವೂ ಜಿಲ್ಲೆಯ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಆಶಾದಾಯಕವಾಗಿದೆ ಎಂದರು.

ಪ್ರಧಾನ ಮಂತ್ರಿ ಉದ್ಯೋಗ ಸೃಜನೆ ಯೋಜನೆಯನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಖಾದಿ ಗ್ರಾಮೋದ್ಯೋಗ ಆಯೋಗ, ರಾಜ್ಯ ಖಾದಿ ಮತ್ತು ಗ್ರಾಮದ್ಯೋಗ ಮಂಡಳಿ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಮತ್ತು ನಗರ ಪ್ರದೇಶದ ನಿರುದ್ಯೋಗಿ ಯುವಕ, ಯುವತಿಯರು, ಕುಶಲಕರ್ಮಿಗಳು ಹಾಗೂ ಉದ್ದಿಮೆದಾರರಿಗೆ ಬ್ಯಾಂಕ್ ಮೂಲಕ ಹಣಕಾಸಿನ ನೆರವು ಒದಗಿಸಿ ಉದ್ಯೋಗ ಸೃಷ್ಟಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಒಟ್ಟಿನಲ್ಲಿ ನಿರುದ್ಯೋಗಿಗಳಿಗೆ, ಸ್ಥಳೀಯರಿಗೆ ಉದ್ಯೋಗ ನೀಡುವ ಸಾಮಾಜಿಕ ಜವಾಬ್ದಾರಿ ಉದ್ದಿಮೆದಾರರಿಗೆ ಇರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಸಿಯಾ ಸಂಸ್ಥೆಯ ಸಿ.ಎ.ಶಶಿಧರ ಶೆಟ್ಟಿ ಮಾತನಾಡಿ, ಸರ್ಕಾರದ ವಿವಿಧ ಪ್ರೋತ್ಸಾಹ ಸಬ್ಸಿಡಿ ಯೋಜನೆಗಳು, ಸಿಡ್ಬಿ, ಜೆಡ್ಇಡಿ ಪ್ರಮಾಣೀಕರಣ, ಉದ್ಯಮ್ ನೋಂದಣಿ ಸಹಾಯ ವೇದಿಕೆ, ಡಿಜಿಟಲ್ ಉಪಕ್ರಮಗಳು, ಟ್ರೆಡ್ಸ್ ಪ್ಲಾಟ್‌ಫಾರ್ಮ್, ರಫ್ತು ಉತ್ತೇಜನಾ ಕಾರ್ಯಕ್ರಮಗಳ ಕುರಿತು ಆಸಕ್ತಯುವ ಉದ್ಯಮಿಗಳಿಗೆ ಈಗಾಗಲೇ ಅರಿವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿದೆ. ಇದರ ಅಂಗವಾಗಿ ಇಂದು ಚಾಮರಾಜನಗರ ಜಿಲ್ಲೆಯಲ್ಲಿಯೂ ಕಾರ್ಯಕ್ರಮ ಆಯೋಜಿಸಲಾಗಿದೆ. ಜಿಲ್ಲೆಯ ಕೈಗಾರಿಕೋದ್ಯಮಿಗಳು ಈ ವಿನೂತನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹೆಚ್ಚಿನ ಅರಿವನ್ನು ಹೊಂದಬೇಕೆನ್ನುವುದು ಇದರ ಸದುದ್ದೇಶವಾಗಿದೆ ಎಂದರು.

ಚಾಮರಾಜನಗರ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಜಯಸಿಂಹ ಮಾತನಾಡಿ, ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸವಲತ್ತುಗಳು, ಹಣಕಾಸಿನ ನೆರವು ಮತ್ತು ರಫ್ತು ಕುರಿತು ಅರಿವಿನ ಪ್ರಾಮುಖ್ಯತೆ ವಿವರಿಸಿದರು.

ಮೈಸೂರಿನ ಸಿಡ್ಬಿ ಸಂಸ್ಥೆ ಸಹಾಯಕ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥ್, ವಿಟಿಪಿಸಿ ಉಪನಿರ್ದೇಶಕ ಮನ್ಸೂರ್, ಕಾಸಿಯಾ ಉಪಾಧ್ಯಕ್ಷ ಎಂ.ಜಿ.ರಾಜಗೋಪಾಲ್, ಗೌರವ ಪ್ರಧಾನ ಕಾರ್ಯದರ್ಶಿ ಎಸ್.ನಾಗರಾಜು, ನಗರ ಜಂಟಿ ಕಾರ್ಯದರ್ಶಿ ಶ್ರೇಯಾನ್ಸ್ ಕುಮಾರ್ ಜೈನ್, ಗ್ರಾಮೀಣ ಜಂಟಿ ಕಾರ್ಯದರ್ಶಿ ಎನ್.ಅರುಣ್ ಪಡಿಯಾರ್, ಖಜಾಂಚಿ ಮಲ್ಲೇಶ್ ಗೌಡ, ಚಾಮರಾಜನಗರ ಜಿಲ್ಲಾಭಿವೃದ್ಧಿಯ ಕಾಸಿಯಾ ಉಪ ಸಮಿತಿ ಅಧ್ಯಕ್ಷ ಸುಬ್ರಮಣಿಯನ್, ಸಹ ಕಾರ್ಯದರ್ಶಿ ರಂಜಿತ್, ಕೆನರಾ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ನಂಜುಂಡಸ್ವಾಮಿ ಇತರರಿದ್ದರು.

ತೊಂಡವಾಡಿ ಗೇಟ್ ಬಳಿ ಸರಣಿ ಅಪಘಾತ



ಬೇಗೂರು, ಡಿ.16– ಇಲ್ಲಿಗೆ ಸಮೀಪದ ತೊಂಡವಾಡಿ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ವಾಹನಗಳ ನಡುವೆ ಸರಣಿ ಅಪಘಾತ ಸಂಭವಿಸಿದೆ.

ಮೈಸೂರು ಕಡೆಯಿಂದ ಬಂದ ಕೇರಳದ ಹ್ಯೂಂಡಾಯ್ ಕಾರಿನ ಚಾಲಕ ಕುಡಿದ ಮತ್ತಿನಲ್ಲಿ ಮುಂದೆ ಶಬರಿಮಲೆಗೆ ತೆರಳುತ್ತಿದ್ದ ಹಾಸನದ ಇನ್ನೋವಾ ಕಾರಿಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾನೆ. ಬಳಿಕ ಎದುರಿನಿಂದ ಬಂದ ಐಷರ್ ವಾಹನಕ್ಕೂ ಡಿಕ್ಕಿ ಹೊಡೆದಿದ್ದು, ಎಲ್ಲಾ ವಾಹನಗಳು ಜಖಂಗೊಂಡಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಕಾರು ಚಾಲಕನನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮವಾಗಿ ಗಾಂಜಾ ಬೆಳೆದಿದ್ದ ಆರೋಪಿ ಬಂಧನ



ಹನೂರು, ಡಿ.16– ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದ ಆರೋಪಿ ಬಂಧಿಸುವಲ್ಲಿ ರಾಮಾಪುರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ಮಂಚಾಪುರ ಗ್ರಾಮದ ನಿವಾಸಿ ವೀರಸ್ವಾಮಿ(55) ಬಂಧಿತ ಆರೋಪಿ. ಈತ ತನ್ನ ಜಮೀನಿನಲ್ಲಿ ಅರಿಶಿನ ಬೆಳೆ ಮಧ್ಯ ಅಕ್ರಮವಾಗಿ ಗಾಂಜಾ ಬೆಳೆದಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಕೊಳ್ಳೇಗಾಲ ಉಪವಿಭಾಗದ ಡಿವೈಎಸ್ಪಿ ಸೋಮೇಗೌಡ, ರಾಮಾಪುರ ಪೊಲೀಸ್ ಠಾಣೆ ಸಿಪಿಐ ಸಂತೋಷ್ ಕಶ್ಯಪ್ ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಎಸ್‌ಐ ಲೋಕೇಶ್ ನೇತೃತ್ವದ ಸಿಬ್ಬಂದಿ ದಾಳಿ ನಡೆಸಿ ಜಮೀನಿನಲ್ಲಿ ಬೆಳೆದಿದ್ದ 3 ಕೆಜಿ 400 ಗ್ರಾಂ ತೂಕದ ಗಾಂಜಾ ಗಿಡವನ್ನು ವಶಕ್ಕೆ ಪಡೆದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಮುಖ್ಯಪೇದೆ ಸಿದ್ದೇಶ್, ಗಿರೀಶ್, ದಿನೇಶ್, ಲಿಯಾಕತ್ ಆಲಿಖಾನ್, ಬಿರಾದರ್, ಮಹೇಂದ್ರ ಸೇರಿದಂತೆ ಇನ್ನಿತರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.16– ಚಾಮರಾಜನಗರ ಉಪವಿಭಾಗ ವ್ಯಾಪ್ತಿಯ ದೊಡ್ಡರಾಯಪೇಟೆ ಉಪ ಕೇಂದ್ರದಿಂದ ಹೊರಹೊಮ್ಮುವ ಚಾಮರಾಜನಗರ ಫೀಡರ್‌ನಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಡಿ.17ರಂದು ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ಚಾಮರಾಜನಗರ ಪಟ್ಟಣ, ಭ್ರಮರಾಂಬ ಬಡಾವಣೆ, ರಥದ ಬೀದಿ, ಡಾ.ಬಿ.ಆರ್.ಅಂಬೇಡ್ಕರ್ ಬಡಾವಣೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ನಾಯಕರ ಬಡಾವಣೆ, ಬಿ.ರಾಚಯ್ಯ ಜೋಡಿ ರಸ್ತೆ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ, ಡಿ.16– ಮೌಲಾನಾ ಆಜಾದ್ ಮಾದರಿ ಶಾಲೆಯಲ್ಲಿ 2023-24ನೇ ಶೈಕ್ಷಣಿಕ ಸಾಲಿಗೆ ಖಾಲಿ ಇರುವ ಹಿಂದಿ ಭಾಷಾ ಶಿಕ್ಷಕರ ಹುದ್ದೆಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಆಯ್ಕೆಯಾದ ಅತಿಥಿ ಶಿಕ್ಷಕರಿಗೆ ಮಾಹೆಗೆ 10,500 ರೂ. ಗೌರವಧನ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ನಗರದ ಮೌಲಾನಾ ಆಜಾದ್ ಮಾದರಿ ಶಾಲೆ ಮುಖ್ಯೋಪಾಧ್ಯಾಯರನ್ನು (ಮೊ.9632139767) ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಬೇಗೂರಿನ ಪೊಲೀಸ್ ಠಾಣೆ ವತಿಯಿಂದ ಗ್ರಾಮದ ಬಸ್ ನಿಲ್ದಾಣದ ಬಳಿ ಅಪರಾಧ ತಡೆ ಮಾಸಾಚರಣೆ ನಡೆಸಲಾಯಿತು. ಈ ಸಂದರ್ಭದಲ್ಲಿ ಎಸ್‌ಐ ಚರಣ್‌ಗೌಡ ಮತ್ತು ಸಿಬ್ಬಂದಿ ಹಾಜರಿದ್ದರು.

ಡಿ.21, ಮಾದಿಗ ಮುನ್ನಡೆ ಆತ್ಮಗೌರವ ಸಮಾವೇಶ



ಚಾಮರಾಜನಗರ, ಡಿ.16– ಒಳ ಮೀಸಲಾತಿ ಕುರಿತು ಜನರಿಗೆ ಅರಿವು ಮೂಡಿಸಲು ಡಿ.21ರಂದು ನಗರದಲ್ಲಿ ಮಾದಿಗ ಮುನ್ನಡೆ ಆತ್ಮಗೌರವ ಜಿಲ್ಲಾ ಮಟ್ಟದ ಸಮಾವೇಶ ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ನಡೆಯುವ ಸಮಾವೇಶದಲ್ಲಿ ಶ್ರೀಮಾದಾರ ಚೆನ್ನಯ್ಯ ಸ್ವಾಮೀಜಿ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮಾಜಿ ಎಂಎಲ್‌ಸಿ ಸಿ.ರಮೇಶ್, ಅನಿಲ್ ಕುಮಾರ್, ನಿವೃತ್ತ ಅಧಿಕಾರಿಗಳು ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ನ.28ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಮಾದಿಗರ ಮುನ್ನಡೆ ಸಭೆಯಲ್ಲಿ ತೀರ್ಮಾನಿಸಿದಂತೆ ಎಲ್ಲಾ ಜಿಲ್ಲೆಗಳಲ್ಲೂ ಮಾದಿಗರ ಮುನ್ನಡೆ ಸಭೆ ಆಯೋಜಿಸಲಾಗಿದೆ. ಅದರಂತೆ ಚಾಮರಾಜನಗರದಲ್ಲೂ ಡಿ.21ರಂದು ಮಾದಿಗ ಮುನ್ನಡೆ ಆತ್ಮಗೌರವ ಜಿಲ್ಲಾ ಮಟ್ಟದ ಸಮಾವೇಶ ಆಯೋಜಿಸಲಾಗಿದ್ದು, ಒಳ ಮೀಸಲಾತಿ ಬಗ್ಗೆ ಸಮುದಾಯದ ಜನರಿಗೆ ಅರಿವು ಮೂಡಿಸುವುದೇ ಈ ಸಮಾವೇಶದ ಉದ್ದೇಶವಾಗಿದೆ. ಇದು ಮಾದಿಗರ ಒಳ ಮೀಸಲಾತಿಯ ಆತ್ಮಗೌರವ ಸಮಾವೇಶವಾಗಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದ ಬಂಧುಗಳು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ರಾಜಶೇಖರ್, ಮುಖಂಡರಾದ ಬಸವರಾಜು, ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಎಂ.ಶಿವಕುಮಾರ್, ಮರಪ್ಪ, ಮೈಸೂರು ವಿಭಾಗೀಯ ಉಸ್ತುವಾರಿ ಎಂ.ರಾಜು, ಪುರಸಭಾ ಮಾಜಿ ಸದಸ್ಯ ಸಿದ್ದಯ್ಯ ಹಾಜರಿದ್ದರು.

ಜಿಲ್ಲಾ ಮಟ್ಟದ ಕ್ರೀಡಾಕೂಟ

ಚಾಮರಾಜನಗರ, ಡಿ.16– ಶಾಲಾ ಶಿಕ್ಷಣ ಇಲಾಖೆಯಿಂದ 14ರಿಂದ 17ರ ವಯೋಮಾನದ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿಶೇಷಚೇತನ ಮಕ್ಕಳಿಗೆ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಡಿ.21ರಂದು ಬೆಳಗ್ಗೆ 10 ಗಂಟೆಗೆ ನಗರದ ಡಾ. ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗ ನೋಂದಣಿ

ಚಾಮರಾಜನಗರ: ನಿಜಗುಣ ಗ್ರೂಪ್ ಆಫ್ ಹೋಟೆಲ್ಸ್ ಆಂಡ್ ರೆಸಾರ್ಟ್‌ನಲ್ಲಿ ಖಾಲಿ ಇರುವ ಹುದ್ದೆಗಳನ್ನು ಉದ್ಯೋಗ ವಿನಿಮಯ ಕಚೇರಿ ಮೂಲಕ ಭರ್ತಿ ಮಾಡಲು ನಿರುದ್ಯೋಗಿ ಪುರುಷ ಮತ್ತು ಮಹಿಳೆಯರ ನೋಂದಣಿ ಹಮ್ಮಿಕೊಂಡಿದ್ದು, ಆಸಕ್ತ ಅಭ್ಯರ್ಥಿಗಳು ಹೆಸರು ನೋಂದಾಯಿಸಬಹುದಾಗಿದೆ.

ಸೇಲ್ಸ್ ಎಕ್ಸಿಕ್ಯೂಟಿವ್ ಹುದ್ದೆಗೆ ಪಿಯುಸಿ, ಪದವಿ ಹಾಗೂ ವೇಟರ್, ಸ್ಟೀವರ್ಡ್, ಹೋಸ್ಟ್ ಹುದ್ದೆಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಫುಡ್ ಅಂಡ್ ಬೆವರೇಜ್ ಎಕ್ಸಿಕ್ಯೂಟಿವ್ ಹುದ್ದೆಗೆ ಪದವಿ ವಿದ್ಯಾರ್ಹತೆ ಹೊಂದಿರುವ ಪುರುಷರು ಮಾತ್ರ ಹೆಸರು ನೋಂದಾಯಿಸಬಹುದು. ಹೌಸ್ ಕೀಪಿಂಗ್ ಹುದ್ದೆಗೆ ಎಸ್‌ಎಸ್‌ಎಲ್‌ಸಿ ಹಾಗೂ ಹೋಟೆಲ್ ರಿಸೆಪ್ಷನಿಸ್ಟ್ ಹುದ್ದೆಗೆ ಪಿಯುಸಿ, ಪದವಿ ವಿದ್ಯಾರ್ಹತೆ ಹೊಂದಿರುವ ಮಹಿಳೆ ಮತ್ತು ಪುರುಷರು ಹೆಸರು ನೋಂದಾಯಿಸಬಹುದು. ಅಭ್ಯರ್ಥಿಗಳು 25 ರಿಂದ 35ರ ವಯೋಮಿತಿಯಲ್ಲಿರಬೇಕು. ಅಭ್ಯರ್ಥಿಗಳು ನಗರದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಡಿ.20 ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗಾಧಿಕಾರಿಗಳು ಅಥವಾ ದೂ.08226-224430 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಮೈಸೂರಿನ ವಿವಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಆಗಿ ನೇಮಕಗೊಂಡ ವಿವೇಕಾನಂದ ಅವರನ್ನು ಕರವೇ ಜಿಲ್ಲಾಧ್ಯಕ್ಷ ಹಾಗೂ ಮುಡಾ ಮಾಜಿ ಸದಸ್ಯ ಕೆ. ಮಾದೇಶ್ ಅಭಿನಂದಿಸಿದರು. ಈ ವೇಳೆ ನಾರಾಯಣ, ಚೆಲುವಣ್ಣ, ಚಂದ್ರು, ಸ್ವಾಮಿ ಉಪಸ್ಥಿತರಿದ್ದರು.

ಮೂರನೇ ಪುಟದಿಂದ

'ಡ್ರೋನ್ ಸರ್ವೆ'

ನಿರ್ಮಿಸಲಾಗಿದೆ. ಈ ಹಿನ್ನೆಲೆಯಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ವ್ಯವಸ್ಥಿತವಾಗಿ ಹಾಗೂ ಕಾನೂನುಬದ್ಧವಾಗಿ ನಡೆಸುವುದಕ್ಕೆ ಜಿಲ್ಲಾ ಡಳಿತ ಸಿದ್ಧತೆ ಮಾಡಿಕೊಳ್ಳುತ್ತಿದೆ.

1921ರ ನಕ್ಷೆಯಲ್ಲಿ ನಾಲೆಯ ಸ್ಪಷ್ಟ ಚಿತ್ರಣ: ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ, ಸರ್ವೆ ಇಲಾಖೆ ಹಾಗೂ ಕಂದಾಯ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಪೂರ್ಣಯ್ಯ ನಾಲೆಯ ಡ್ರೋನ್ ಸರ್ವೆ ನಡೆಸಲಾಗುತ್ತಿದ್ದು, ಇದಕ್ಕೆ ಬೆಂಗಳೂರಿನ ಸಂಸ್ಥೆಯೊಂದರ ಸಹಕಾರ ಪಡೆಯಲಾಗಿದೆ. ನಾಲೆ ಹಾದು ಹೋಗಿರುವ ಸ್ಪಷ್ಟ ಚಿತ್ರಣಕ್ಕಾಗಿ 1921ರಲ್ಲಿ ತಯಾರಿಸಲಾಗಿರುವ ನಕ್ಷೆಯಲ್ಲಿ ಪೂರ್ಣಯ್ಯ ನಾಲೆ ಹಾದು ಹೋಗಿರುವ ಚಿತ್ರಣವಿದೆ. ಅಲ್ಲದೆ, ಬೇರೆ ಬೇರೆ ಸಂದರ್ಭದಲ್ಲಿ ರಚಿಸಿರುವ ನಕ್ಷೆಯಲ್ಲೂ ಪೂರ್ಣಯ್ಯ ನಾಲೆಯ ಚಿತ್ರವಿದೆ. ಈ ನಕ್ಷೆ ಆಧಾರದಲ್ಲಿ ಡ್ರೋನ್ ಸರ್ವೆ ಆರಂಭಿಸಲಾಗಿದೆ. ಸೋಮವಾರದೊಳಗೆ ಡ್ರೋನ್ ಸರ್ವೆ ಕಾರ್ಯ ಪೂರ್ಣಗೊಳ್ಳಲಿದ್ದು, ಸರ್ವೆಯಲ್ಲಿ ದಾಖಲಾದ ಎಲ್ಲಾ ದಾಖಲೆಗಳನ್ನು ಜಿಲ್ಲಾಡಳಿತದ ವಶಕ್ಕೆ ನೀಡಲಾಗುತ್ತದೆ.

ಒತ್ತುವರಿಯಲ್ಲಿ ವಿಭಜನೆ: ಪೂರ್ಣಯ್ಯ ನಾಲೆಯ ಡ್ರೋನ್ ಸರ್ವೆ ಮುಗಿದ ಬಳಿಕ ಒತ್ತುವರಿ ನಿಖರ ಮಾಹಿತಿ ಕಲೆ ಹಾಕಲಾಗುತ್ತದೆ. ಈ ಒತ್ತುವರಿಯಲ್ಲಿ ಖಾಸಗಿ ವ್ಯಕ್ತಿ, ಸಂಸ್ಥೆಗಳಿಂದ ಆಗಿರುವ ಅನಧಿಕೃತ ಒತ್ತುವರಿ ಹಾಗೂ ವಿವಿಧ ಉದ್ದೇಶಕ್ಕಾಗಿ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ನಾಲೆ ಜಾಗದ ಒತ್ತುವರಿಯನ್ನು ವಿಂಗಡಣೆ ಮಾಡುವ ಪ್ರಕ್ರಿಯೆ ನಡೆಸಲಾಗುತ್ತದೆ. ಆ ನಂತರ ಕಾರ್ಯಾಚರಣೆಯ ರೂಪುರೇಷೆ ಸಿದ್ಧಪಡಿಸಲಾಗುತ್ತದೆ.

ಒತ್ತುವರಿದಾರರ ಪಟ್ಟಿ ಬಿಡುಗಡೆ: ಸರ್ವೆ ಕಾರ್ಯ ಪೂರ್ಣಗೊಂಡ ಬಳಿಕ ಪೂರ್ಣಯ್ಯ ನಾಲೆಯ ಸ್ಥಳ ಒತ್ತುವರಿ ಮಾಡಿಕೊಂಡಿರುವವರ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಕಾರ್ಯಾಚರಣೆಗೂ ಮುನ್ನ ಒತ್ತುವರಿದಾರರಿಗೆ ನೋಟಿಸ್ ನೀಡಲಾಗುತ್ತದೆ. ಅನಧಿಕೃತ ಒತ್ತುವರಿ ತೆರವಿಗೆ ಕಾರ್ಯಾಚರಣೆ ನಡೆಸಲು ಉದ್ದೇಶಿಸಲಾಗಿದ್ದು, ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ಅಧಿಕೃತ ಒತ್ತುವರಿದಾರರಿಗೆ ಪರ್ಯಾಯ ವ್ಯವಸ್ಥೆ ಮಾಡಿ, ತೆರವುಗೊಳಿಸಬಹುದೇ? ಎಂಬ ಬಗ್ಗೆ ಜಿಲ್ಲಾಡಳಿತ ಚಿಂತನೆ ನಡೆಸಿದೆ.

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧವೂ ಕ್ರಮ: ನಾಲೆ ಜಾಗದಲ್ಲಿ ಖಾಸಗಿ ಬಡಾವಣೆ, ಖಾಸಗಿ ಮಳಿಗೆ ನಿರ್ಮಾಣಕ್ಕೆ ಅನುಮತಿ ನೀಡಿರುವ ಅಧಿಕಾರಿಗಳನ್ನು ಪತ್ತೆ ಮಾಡಲು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪೂರ್ಣಯ್ಯ ನಾಲೆಯ ಜಾಗವನ್ನು ಖಾಸಗಿ ವ್ಯಕ್ತಿಗಳಿಗೆ ಯಾರಾದರೂ ದಾಖಲೆ ಮಾಡಿಕೊಟ್ಟಿದ್ದರೆ, ಅಂತಹವರನ್ನು ಪತ್ತೆಹಚ್ಚಲು ದಾಖಲೆ ಪರಿಶೀಲಿಸುವಂತೆ ಸೂಚಿಸಲಾಗಿದೆ. ಸರ್ವೆಯಲ್ಲಿ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ತಹಶೀಲ್ದಾರ್ ಗಿರೀಶ್, ನಗರ ಸರ್ವೆ ಇಲಾಖೆಯ ಯೋಜನಾಧಿಕಾರಿ ಸೀಮಂಥಿನಿ, ಪಾಲಿಕೆಯ ಅಭಿವೃದ್ಧಿ ವಿಭಾಗದ ಉಪ ಆಯುಕ್ತೆ ಸಿಂಧು, ಎಡಿಎಲ್‌ಆರ್ ಮಂಜುನಾಥ್, ಜಂಟಿ ಆಯುಕ್ತ ಕೃಷ್ಣನಾಯಕ್, ಸಹಾಯಕ ನಿರ್ದೇಶಕಿ ಸಹನ, ವಲಯ ಕಚೇರಿ 4ರ ಅಭಿವೃದ್ಧಿ ಅಧಿಕಾರಿ ಸೇರಿದಂತೆ ಇನ್ನಿತರರಿದ್ದರು.

ಪೂರ್ಣಯ್ಯ ನಾಲೆಯ ಒತ್ತುವರಿ ಸ್ಪಷ್ಟ ಚಿತ್ರಣಕ್ಕಾಗಿ ಡ್ರೋನ್ ಬಳಕೆ

ಪೂರ್ಣಯ್ಯ ನಾಲೆಗೆ ಸೇರಿದ ಜಾಗ ಒತ್ತುವರಿಯಾಗಿರುವುದನ್ನು ತೆರವುಗೊಳಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಡ್ರೋನ್ ಸರ್ವೆ ಮಾಡಿಸಲಾಗುತ್ತಿದೆ. ಒಟ್ಟು 21 ಕಿ.ಮೀ. ವ್ಯಾಪ್ತಿಯ ನಾಲೆಯ ಜಾಗವನ್ನು ಡ್ರೋನ್ ಮೂಲಕ ಸರ್ವೆ ಮಾಡಿಸಿ ದಾಖಲಿಸಲಾಗುತ್ತದೆ. ಮೈಸೂರು ನಗರ ವ್ಯಾಪ್ತಿಯೊಳಗೆ ಪೂರ್ಣಯ್ಯ ನಾಲೆ 15ರಿಂದ 17 ಕಿ.ಮಿ ವಿಸ್ತೀರ್ಣವಿದೆ. ಕೆಲವೆಡೆ ಅನಧಿಕೃತ ಒತ್ತುವರಿಯಾಗಿದ್ದರೆ, ಮತ್ತೆ ಕೆಲವೆಡೆ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ಅಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ. ಸರ್ವೆ ಮುಗಿದ ನಂತರ ಒತ್ತುವರಿದಾರರ ಪಟ್ಟಿ ತಯಾರಿಸಲಾಗುತ್ತದೆ. ಆ ನಂತರ ಅನಧಿಕೃತ ಒತ್ತುವರಿ ತೆರವುಗಳಿಸಿದರೆ, ಅಧಿಕೃತ ಒತ್ತುವರಿದಾರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ, ತೆರವುಗೊಳಿಸಬಹುದೇ? ಎಂದು ಚಿಂತಿಸಲಾಗುತ್ತದೆ. ಡ್ರೋನ್ ಸರ್ವೆಯಿಂದ ನಾಲೆಯ ಒತ್ತುವರಿ ಚಿತ್ರಣ ಸ್ಪಷ್ಟವಾಗಿ ತಿಳಿಯಲಿದೆ.

– ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಹಲವು ಸದಸ್ಯರಿಗೆ ವರಿಷ್ಠರ ಬುಲಾವ್!

ಸಚಿವರುಗಳಾದ ಡಾ.ಜಿ.ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆ.ಎಚ್.ಮುನಿಯಪ್ಪ, ಜಮೀರ್ ಅಹಮದ್ ಖಾನ್, ಎಂ.ಬಿ. ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಕೆ.ಜೆ.ಜಾರ್ಜ್ ಸೇರಿದಂತೆ ಹಿರಿಯ ಸಚಿವರು ದೆಹಲಿಗೆ ತೆರಳುತ್ತಿದ್ದಾರೆ. ಪಂಚ ರಾಜ್ಯಗಳ ಚುನಾವಣಾ ವೈಫಲ್ಯದ ನಂತರ ಲೋಕಸಭಾ ಚುನಾವಣೆಯಲ್ಲಿ ಇದು ಪುನರಾವರ್ತನೆ ಆಗದಂತೆ ನೋಡಿಕೊಳ್ಳಲು ಅದರಲ್ಲೂ ಎಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಬೆಂಬಲ ಇದೆಯೋ ಅಂತಹ ಕಡೆ ಮುಂಜಾಗ್ರತಾ ಕ್ರಮ ಹಾಗೂ ಅಭ್ಯರ್ಥಿಗಳ ಆಯ್ಕೆ ಕಸರತ್ತನ್ನು ಎಐಸಿಸಿ ಆರಂಭಿಸಿದೆ. ಕರ್ನಾಟಕದಿಂದ 28 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳ ಗೆಲುವಿನ ಗುರಿ ಇಟ್ಟಿರುವ ವರಿಷ್ಠರು ಎಲ್ಲ ರೀತಿಯ ತಂತ್ರಗಳನ್ನು ರೂಪಿಸುತ್ತಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲಿ ಅವಕಾಶ ದೊರೆಯದೆ ಅಸಮಾಧಾನಗೊಂಡಿರುವ ಹಿರಿಯ ಸದಸ್ಯರಿಗೆ ನಿಗಮ–ಮಂಡಳಿಗಳಲ್ಲಿ ಅವಕಾಶ ಕಲ್ಪಿಸುವುದು ಅದರಲ್ಲಿ ಸೇರಿದೆ. ಈಗಾಗಲೇ ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ನಾಯಕರೊಂದಿಗೆ ಚರ್ಚಿಸಿ, 34 ಶಾಸಕರನ್ನು ಗುರುತಿಸಿ, ಇವರಿಗೆ ಯಾವ ನಿಗಮ–ಮಂಡಳಿ ನೀಡಬೇಕೆಂಬ ಒಂದು ಪಟ್ಟಿ ಸಿದ್ಧಪಡಿಸಿದ್ದಾರೆ. ಯಾವ ಲೋಕಸಭಾ ಕ್ಷೇತ್ರದಲ್ಲಿ ಪಕ್ಷ ಗೆಲುವಿನ ಸಮೀಪ ಇದೆಯೋ ಅದನ್ನು ಮತ್ತಷ್ಟು ಭದ್ರ ಮಾಡಿಕೊಳ್ಳಲು ಅಂತಹ ಕ್ಷೇತ್ರಗಳಿಗೆ ನಿಗಮಗಳ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುತ್ತಿದೆ. ಇದೆಲ್ಲದಕ್ಕೂ ಮಿಗಿಲಾಗಿ ರಾಜ್ಯದಲ್ಲಿ ಬಲಿಷ್ಠ ಸರ್ಕಾರ ಇದ್ದರೂ ಆಪರೇಷನ್ ಕಮಲದ ಭೂತ ವರಿಷ್ಠರನ್ನು ಕಾಡುತ್ತಿದೆ. ಮುನ್ನೆಚ್ಚರಿಕೆಯಾಗಿ ಪಕ್ಷದ ಶಾಸಕರನ್ನು ಹಿಡಿದಿಟ್ಟುಕೊಂಡು, ಲೋಕಸಭಾ ಚುನಾವಣೆ ಎದುರಿಸಿ ಹೆಚ್ಚು ಸ್ಥಾನ ಗಳಿಸುವ ಉದ್ದೇಶದಿಂದಲೇ ದೆಹಲಿಯಲ್ಲಿ ಎರಡು–ಮೂರು ದಿನಗಳ ಮ್ಯಾರಥಾನ್ ಚರ್ಚೆ ನಡೆಯಲಿದೆ.

ಇದಕ್ಕಾಗಿಯೇ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಬಳಸಿಕೊಳ್ಳಲಾಗಿರುವ ಸಚಿವರುಗಳನ್ನು ದೆಹಲಿಗೆ ಕರೆಸಿಕೊಂಡು ಅವರೊಂದಿಗೆ ಮುಖಾಮುಖಿ ಚರ್ಚೆ ನಡೆಸಲಿದ್ದಾರೆಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯದ ನಾಯಕರೊಂದಿಗೆ ಚರ್ಚೆ ಮಾಡಲಿದ್ದಾರೆ.

ಸಂಚಾರಿ ಆರೋಗ್ಯ ಘಟಕಕ್ಕೆ ಚಾಲನೆ

ಜನರಿಗೆ ಉಚಿತ ಆರೋಗ್ಯ ತಪಾಸಣೆ ಮಾಡುವುದಲ್ಲದೆ, ಎಕ್ಸ್‌ರೇ ಸೇರಿದಂತೆ ವಿವಿಧ ವೈದ್ಯಕೀಯ ಪರೀಕ್ಷೆಗಳನ್ನೂ ನಡೆಸಿ, ಔಷಧ ನೀಡಲಿದೆ. ಹೃದಯ ಸಂಬಂಧಿತ ಕಾಯಿಲೆಗಳನ್ನು ಪತ್ತೆ ಹಚ್ಚಲು ಸುಧಾರಿತ ಸ್ಕ್ರೀನಿಂಗ್ ಸೌಲಭ್ಯ ಹೊಂದಿರುತ್ತದೆ.

ಹೆಚ್ಚಿನ ವೈದ್ಯಕೀಯ ಸಮಾಲೋಚನೆಯನ್ನು ನಾರಾಯಣ ಹೆಲ್ತ್‌ನ ತಜ್ಞರೊಂದಿಗೆ ಟೆಲಿ ಸಮಾಲೋಚನೆ ಮೂಲಕ ಸ್ಥಳದಲ್ಲೇ ಚಿಕಿತ್ಸಾ ಸಲಹೆಗಳನ್ನು ನೀಡಲಿದೆ. ಆರೋಗ್ಯ ಇಲಾಖೆ, ಪ್ರಸ್ತುತ ಖಾಸಗಿ ಸಹಭಾಗಿತ್ವದಲ್ಲಿ ಇಂತಹ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಾಲನೆ ನೀಡಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ವಾಹನಗಳು ಸೇರ್ಪಡೆಗೊಳ್ಳಲಿವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

'ನಾಲ್ವಡಿ' ನಾಮಕರಣ ಈಗಾಗಲೇ ತೀರ್ಮಾನವಾಗಿದೆ

ಎಕ್ಸ್‌ಪ್ರೆಸ್' ಎಂದು ಬದಲಾಯಿಸಿದೆ. ಇದರ ಜೊತೆಗೆ ಮೈಸೂರು– ಬೆಂಗಳೂರು ಎಕ್ಸ್ ಪ್ರೆಸ್ ಹೈವೆಗೆ 'ಕಾವೇರಿ ಎಕ್ಸ್ ಪ್ರೆಸ್ ವೇ' ಎಂದು ಜೀವನದಿಯ ಹೆಸರಿಡಲು ಪ್ರಸ್ತಾಪ ಸಲ್ಲಿಸಿದ್ದೆ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದ್ದಾರೆ.

ಆದರೆ ಕಾಂಗ್ರೆಸ್‌ನವರಿಗೆ ಮತ ಬ್ಯಾಂಕ್ ಓಲೈಕೆಗಾಗಿ ಇತಿಹಾಸ ತಿರುಚಿ, ನಾಡ ದ್ರೋಹಿಗಳಿಗೆ ನಾಡ ಪ್ರೇಮಿಯ ಬಣ್ಣ ಹಚ್ಚುವ ಕಲೆ ಚೆನ್ನಾಗಿ ಗೊತ್ತಿದೆ. ಈ ಕಾರಣದಿಂದ ಇವರ ಆಡಳಿತಾವಧಿಯಲ್ಲಿ ಯಾವಾಗಲೂ ಟಿಪ್ಪುನಂತಹ ಕನ್ನಡ ದ್ರೋಹಿಗಳು ಮತ್ತು ಮತಾಂಧರ ವಿಜೃಂಭಣೆ ನಡೆಯುತ್ತದೆ ಎಂದು ಆಪಾದಿಸಿದ್ದಾರೆ.

ಸಿದ್ದರಾಮಯ್ಯ ಅವರಿಗೆ ತಾವು ಹುಟ್ಟಿ ಬೆಳೆದ ಊರಿನ ಜನರ ಭಾವನೆ ಅರ್ಥವಾಗುತ್ತಿಲ್ಲ, ಅರ್ಥವಾದರೂ ಓಲೈಕೆಗಾಗಿ ಜನರ ಭಾವನೆಗಳನ್ನು ಗಾಳಿಗೆ ತೂರುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ ಎಂದು ಅವರು ಕಿಡಿಕಾರಿದ್ದಾರೆ.

ಈ ಕಾರಣದಿಂದ ಯಾವುದೇ ಕಾರಣಕ್ಕೂ ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡಲು ನಾನು ಬಿಡುವುದಿಲ್ಲ. ನಿಲ್ದಾಣಕ್ಕೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ಮರು ನಾಮಕರಣ ಮಾಡಲೇಬೇಕು. ಈ ಭಾಗದ ಜನರ ಒಕ್ಕೊರಲಿನ ಅಭಿಪ್ರಾಯಕ್ಕೆ ನಾನು ಧ್ವನಿಯಾಗುತ್ತಿದ್ದೇನೆ. ಇದಕ್ಕೆ ಯಾರೇ ಅಡ್ಡ ಬಂದರೂ ನಾನು ಸುಮ್ಮನೆ ಬಿಡುವುದಿಲ್ಲ ಎಂದು ಪ್ರತಾಪ್ ಸಿಂಹ ಘರ್ಜಿಸಿದ್ದಾರೆ.

17 ಶಿಕ್ಷಣ ಸಂಸ್ಥೆಗಳ ಜೊತೆ ಸಂಗೀತ ವಿಶ್ವ ವಿದ್ಯಾನಿಲಯ ಒಡಂಬಡಿಕೆ

ವಿ.ವಿ.ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ಮಾಹಿತಿ



ಮೈಸೂರು, ಡಿ.16(ಬಿಎಲ್‌ಯು)– ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯವು ಶೈಕ್ಷಣಿಕ ಚಟುವಟಿಕೆಗಳನ್ನು ವಿಸ್ತರಿಸಲು 17 ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ತಿಳಿಸಿದರು.

ಮೈಸೂರಿನ ಲಕ್ಷ್ಮಿ ಪುರಂನಲ್ಲಿರುವ ವಿಶ್ವವಿದ್ಯಾನಿಲಯದ ಕುಟೀರದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ 10 ಶಿಕ್ಷಣ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. ಈ ಬಾರಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲು 17 ಶಿಕ್ಷಣ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ಹೇಳಿದರು.

ಪ್ರಸ್ತುತ ವಿಶ್ವವಿದ್ಯಾನಿಲಯವು ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಗಾಯನ–ವಾದನ, ಭರತನಾಟ್ಯ ಹಾಗೂ ನಾಟಕ ವಿಭಾಗಗಳಲ್ಲಿ ಎರಡು ವರ್ಷಗಳ ಡಿಪ್ಲೋಮಾ ತರಗತಿಗಳನ್ನು ನಡೆಸುತ್ತಿದೆ. ಜೊತೆಗೆ ಎರಡು ಹಾಗೂ ಮೂರು ವರ್ಷಗಳ ಸ್ನಾತಕೋತ್ತರ ಪದವಿ ತರಗತಿ ನಡೆಸಿಕೊಂಡು ಬರುತ್ತಿದೆ ಎಂದರು.

ಆದರೆ ಈ ವರ್ಷ ವಿಶ್ವವಿದ್ಯಾನಿಲಯ ಒಂದು ಹೆಜ್ಜೆ ಮುಂದೆ ಇಟ್ಟಿದ್ದು, ಸರ್ಟಿಫಿಕೇಟ್, ಡಿಪ್ಲೊಮಾ ತರಗತಿ ನಡೆಸುವ ಸಂಸ್ಥೆಗಳು ಮಾತ್ರವಲ್ಲದೆ ಸಂಗೀತದ ಬಗ್ಗೆ ಸಂಶೋಧನೆ ನಡೆಸುವ ಎರಡು ಸಂಶೋಧನಾ ಕೇಂದ್ರಗಳ ಜೊತೆ ಕೂಡ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಮೂಲಕ ಪ್ರದರ್ಶನ ಕಲೆಯ ಸಂಶೋಧನೆ ಆರಂಭಿಸಲಾಗಿದೆ ಎಂದು ತಿಳಿಸಿದರು.

ಸಂಗೀತ ವಿಶ್ವವಿದ್ಯಾನಿಲಯದ ಕಲಾ ಪ್ರಕಾರಗಳಿಗೆ ಶೈಕ್ಷಣಿಕ ಶಿಸ್ತು ಹಾಗೂ ಚೌಕಟ್ಟು ತರುವ ಹಿನ್ನೆಲೆ 2023 ರ ವಿಶ್ವವಿದ್ಯಾನಿಲಯಗಳ ಪರಿನಿಯಮಾವಳಿಗಳಿಗೆ ರಾಜ್ಯ ಸರ್ಕಾರ ತಿದ್ದುಪಡಿ ತಂದಿದೆ. ಇದರ ಪರಿಣಾಮ ಇಂದು ವಿಶ್ವವಿದ್ಯಾನಿಲಯವು ಶಿಕ್ಷಣ ಸಂಸ್ಥೆಗಳ ಹಾಗೂ ಸಂಗೀತ, ನೃತ್ಯ, ನಾಟಕ ತರಬೇತಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನುಕೂಲವಾಗಿದೆ. ಇದರಿಂದ ಸಂಗೀತ, ಕಲಾ ಪ್ರಕಾರಗಳ ಸಂಶೋಧನೆ ಮಾಡಲು ಸಹಾಯಕವಾಗಿದೆ ಎಂದು ಪ್ರೊ.ನಾಗೇಶ್ ಬೆಟ್ಟಕೋಟೆ ಹೇಳಿದರು.

ಸ್ವಂತ ಕಟ್ಟಡ ನಿರ್ಮಾಣಕ್ಕೆ 5 ಎಕರೆ ಮಂಜೂರು

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಮೈಸೂರಿನ ನಾಡನಹಳ್ಳಿಯ ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ನಗರದಲ್ಲಿ 5 ಎಕರೆ ಜಮೀನನ್ನು ಮುಡಾ ಹಸ್ತಾಂತರ ಮಾಡಿದೆ ಎಂದು ಪ್ರೊ.ನಾಗೇಶ್ ಬೆಟ್ಟಕೋಟೆ ಮಾಹಿತಿ ನೀಡಿದರು.

ಸಾತಗಳ್ಳಿ ಬಳಿ 8.45 ಎಕರೆ ಜಮೀನನ್ನು ಈ ಹಿಂದೆ ಮುಡಾ ಮಂಜೂರು ಮಾಡಿತ್ತು. ಆದರೆ ಆ ಜಾಗದಲ್ಲಿ ವಿದ್ಯುತ್ ಹೈ ಟೆನ್ಷನ್ ವೈಯರ್ ಹಾದು ಹೋಗಿದ್ದ ಕಾರಣ ಕಟ್ಟಡ ನಿರ್ಮಾಣ ಕಷ್ಟವಾಗಿತ್ತು. ಆದ ಕಾರಣ ಆ ಜಾಗವನ್ನು ಮತ್ತೆ ಮುಡಾಗೆ ಹಸ್ತಾಂತರ ಮಾಡಿ ನಾಡನಹಳ್ಳಿಯ 5 ಎಕರೆ ಜಮೀನು ಪಡೆಯಲಾಗಿದೆ ಎಂದರು.

ವಿಶ್ವವಿದ್ಯಾನಿಲಯದ ಕಟ್ಟಡ ನಿರ್ಮಾಣದ ವಿಸ್ತತ ಯೋಜನಾ ವರದಿ ತಯಾರಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಇದೇ ವೇಳೆ ಪ್ರೊ.ನಾಗೇಶ್ ಬೆಟ್ಟಕೋಟೆ ವಿವರ ನೀಡಿದರು.

ಸ್ವಂತ ಕಟ್ಟಡವಿಲ್ಲದ, ಆರ್ಥಿಕ ಸಂಕಷ್ಟದ ಏಕೈಕ ವಿಶ್ವವಿದ್ಯಾನಿಲಯ

ಸ್ವಂತ ಕಟ್ಟಡವಿಲ್ಲದೆ, ಆರ್ಥಿಕ ಸಂಕಷ್ಟಗಳ ನಡುವೆ ಯಶಸ್ವಿ ಶೈಕ್ಷಣಿಕ ಚಟುವಟಿಕೆ ಮುಂದುವರೆಸುತ್ತಿರುವ ಏಕೈಕ ವಿಶ್ವವಿದ್ಯಾನಿಲಯ ನಮ್ಮದಾಗಿದೆ ಎಂದು ಪ್ರೊ.ನಾಗೇಶ್ ಬೆಟ್ಟಕೋಟೆ ಹೇಳಿದರು. ವಿಶ್ವವಿದ್ಯಾನಿಲಯದ ಗಾತ್ರ ಚಿಕ್ಕದಾದರೂ, ಮಹತ್ವ ಕಡಿಮೆಯಾಗಿಲ್ಲ. ಕನ್ನಡದ ಕಲೆಗಳನ್ನು ವಿಶ್ವದಾದ್ಯಂತ ಪ್ರಚಾರ ಮಾಡುವ ಕೆಲಸ ಮಾಡುತ್ತಿದೆ. ಸರ್ಕಾರದಿಂದ ಹೆಚ್ಚಿನ ಅನುದಾನ ಬರದಿದ್ದರೂ ಇರುವುದರಲ್ಲಿ ಸರಿದೂಗಿಸಿಕೊಂಡು ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಆಗದಂತೆ ಯಶಸ್ವಿಯಾಗಿ ಎಲ್ಲಾ ಕಾರ್ಯಕ್ರಮ ನಡೆಸಿಕೊಂಡು ಹೋಗುತ್ತಿದ್ದೇವೆ ಎಂದರು.

ಸಂಗೀತ, ತಾಳವಾದ್ಯಗಳು ಮತ್ತು ನೃತ್ಯಕ್ಕೆ ಸಂಬಂಧಿಸಿದಂತೆ ಪ್ರಿ ವಿದ್ವತ್, ವಿದ್ವತ್ ಪರೀಕ್ಷೆಗಳನ್ನು ಈ ಮೊದಲು ಪ್ರೌಢ ಶಿಕ್ಷಣ ಮಂಡಳಿ ನಡೆಸುತ್ತಿತ್ತು. ಆದರೆ ಈಗ ಇದನ್ನು ನಮ್ಮ ವಿಶ್ವವಿದ್ಯಾನಿಲಯವೇ ಆಯೋಜನೆ ಮಾಡಲು ಸರ್ಕಾರ ಅನುಮತಿ ನೀಡಿದೆ. ಇದರಿಂದ ಈ ಪರೀಕ್ಷೆಗಳಿಗೆ ವಿಶ್ವ ಮನ್ನಣೆ ದೊರೆಯಲಿದೆ ಎಂದು ಪ್ರೊ.ನಾಗೇಶ್ ಬೆಟ್ಟಕೋಟೆ ಹೇಳಿದರು.

ಆನ್‌ಲೈನ್ ಕೋರ್ಸ್ ನಡೆಸಲು ಯುಜಿಸಿ ಅನುಮತಿ ನೀಡಿರುವ ಕಾರಣ 3, 6 ಮತ್ತು ಒಂದು ವರ್ಷದ ಡಿಪ್ಲೋಮಾ ಕೋರ್ಸ್ ನಡೆಸಲು ಅರ್ಜಿ ಆಹ್ವಾನಿಸಲಾಗುವುದು. ಈಗಾಗಲೇ ಪಿಹೆಚ್.ಡಿ, ಡಿ.ಲಿಟ್‌ನಂತಹ ಉನ್ನತ ಸಂಶೋಧನಾ ಕಾರ್ಯ ಆರಂಭಿಸಲಾಗಿದೆ ಎಂದರು. ಜನವರಿ ತಿಂಗಳಲ್ಲಿ 8 ಮತ್ತು 9ನೇ ಸಾಲಿನ ಘಟಿಕೋತ್ಸವ ನಡೆಸಲು ತಯಾರಿ ನಡೆಯುತ್ತಿದೆ ಎಂದು ಪ್ರೊ.ನಾಗೇಶ್ ಬೆಟ್ಟಕೋಟೆ ಮಾಹಿತಿ ನೀಡಿದರು.

ಪ್ರತಾಪ್ ಸಿಂಹ ಸಂಸದ ಸ್ಥಾನ ವಜಾಗೆ ಆಗ್ರಹ



ಮೈಸೂರು, ಡಿ.16(ಎಂಟಿವೈ)– ಸಂಸತ್‌ನಲ್ಲಿ ಹೊಗೆ ಬಾಂಬ್ ಸಿಡಿಸಿದ ಪ್ರಕರಣ ದೇಶದಾದ್ಯಂತ ಆತಂಕ ಸೃಷ್ಟಿಸಿದ್ದು, ಆರೋಪಿಗಳಿಗೆ ಗ್ಯಾಲರಿ ಪಾಸ್ ನೀಡಿದ ಸಂಸದ ಪ್ರತಾಪ ಸಿಂಹ ಅವರ ಸಂಸತ್ ಸದಸ್ಯತ್ವ ವಜಾಗೊಳಿಸಿ ತನಿಖೆಗೆ ಒಳಪಡಿಸುವಂತೆ ಕರ್ನಾಟಕ ದಲಿತ ಪ್ಯಾಂಥರ್ಸ್ ಮುಖಂಡ ಗಿರಿಯಣ್ಣ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸತ್‌ನಲ್ಲಿ ಹೊಗೆ ಬಾಂಬ್ ದಾಳಿ ನಡೆಸಿರುವ ಪ್ರಕರಣ ಗಂಭೀರವಾಗಿದೆ. ದಾಳಿ ನಡೆಸಿದ ಆರೋಪಿಗಳಷ್ಟೇ, ಸಂಸತ್ ಭವನ ಪ್ರವೇಶಿಸಲು ಅವಕಾಶ ಮಾಡಿಕೊಟ್ಟು ಸಹಕರಿಸಿದ ವ್ಯಕ್ತಿಗಳ ಕೃತ್ಯವೂ ಅಪರಾಧವಾಗಿದೆ. ಈಗಾಗಲೇ ಹೊಗೆ ಬಾಂಬ್ ದಾಳಿ ಮಾಡಿದ ಆರೋಪಿಗಳನ್ನು ಪೊಲೀಸರು ಬಂಧಿದ್ದಾರೆ. ಈ ಪ್ರಕರಣದ ಸಮಗ್ರ ತನಿಖೆ ನಡೆಸಬೇಕು. ದಾಳಿ ಮಾಡಿರುವವರಿಗೆ ನೀಡುವ ಶಿಕ್ಷೆಯಂತೆ, ದಾಳಿಗೆ ಸಹಕರಿಸಿದ ವ್ಯಕ್ತಿಗಳಿಗೂ ಶಿಕ್ಷೆ ನೀಡಬೇಕು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಸ್ ನೀಡಿರುವ ಬಗ್ಗೆ ಸಂಸದ ಪ್ರತಾಪ ಸಿಂಹ ಇದುವರೆಗೂ ಉತ್ತರ ನೀಡದಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಂಸತ್ ಭವನದಲ್ಲಿನ ದಾಳಿ ಪ್ರಕರಣದಿಂದ ಇದೀಗ ದೇಶದಲ್ಲಿನ ಭದ್ರತೆ ಎಷ್ಟರ ಮಟ್ಟಿಗೆ ಇದೆ ಎಂದು ಅವಲೋಕಿಸಬೇಕು. ಸಂಸತ್ ಭವನವನ್ನು ರಕ್ಷಿಸದವರು ದೇಶವನ್ನು ಹೇಗೆ ರಕ್ಷಿಸಬಲ್ಲರು ಎಂಬ ಅನುಮಾನ ಕಾಡುತ್ತಿದೆ. ಪ್ರಕರಣ ಕುರಿತು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕು. ಸಂಸದರ ಕಚೇರಿ ವಶಕ್ಕೆ ಪಡೆದು ನ್ಯಾಯಯುತ ತನಿಖೆ ನಡೆಸಬೇಕು. ಕೇಂದ್ರ ಗೃಹ ಸಚಿವ ಅಮಿತ್ ಶಾ ಇದರ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಪ್ರಧಾನಿ ನರೇಂದ್ರ ಮೋದಿ ಈ ಬಗ್ಗೆ ಮಾತನಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಪ್ಯಾಂಥರ್ಸ್ ಪದಾಧಿಕಾರಿಗಳಾದ ಡಾ. ಚೆನ್ನಕೇಶವ, ಕಿರಣ್‌ಕುಮಾರ್, ಮೋಹನ್, ಸಂತೋಷ್, ಚೇತನ್ ಕಾಂತರಾಜು ಇದ್ದರು.

ಡಿ.19ರಿಂದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್



ಮೈಸೂರು, ಡಿ.16(ಎಂಟಿವೈ)– ಮೈಸೂರಿನ ಎನ್‌ಐಇ ಕಾಲೇಜಿನಲ್ಲಿ ಡಿ.19 ರಿಂದ 23 ರವರೆಗೆ ಶಿಕ್ಷಣ ಇಲಾಖೆಯ ಆವಿಷ್ಕಾರ ವಿಭಾಗದಿಂದ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್' ಆಯೋಜಿಸಲಾಗಿದೆ ಎಂದು ಕಾಲೇಜಿನ ತರಬೇತಿ ಮತ್ತು ಉದ್ಯೋಗ ಮಾರ್ಗದರ್ಶನ ವಿಭಾಗದ ಅಧಿಕಾರಿ ಹರ್ಷಿತ್ ದಿವಾಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಮಟ್ಟದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಫಿನಾಲೆಯಲ್ಲಿ 12 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇವರಲ್ಲಿ ಅಂತಿಮ ಸುತ್ತಿಗೆ ಆಯ್ಕೆಯಾಗಿರುವವರು ಗ್ರ್ಯಾಂಡ್ ಫಿನಾಲೆಯಲ್ಲಿ ಸಮಸ್ಯೆ, ವಿವರಗಳ ಮೇಲೆ ಕೆಲಸ ಮಾಡಲಿದ್ದಾರೆ. ಕೇಂದ್ರೀಯ ಶಿಕ್ಷಣ ಸಚಿವಾಲಯದ ನವೀನ ಕೋಶ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯು ಆಯ್ಕೆ ಮಾಡಿರುವ 47 ಸಂಯೋಜಕ ಕೇಂದ್ರಗಳಲ್ಲಿ ಎನ್‌ಐಇ ಕಾಲೇಜು ಒಂದಾಗಿದೆ. ಹೀಗಾಗಿ ಈಗ ಇಲ್ಲಿ ಸ್ಪರ್ಧೆ ನಡೆಯುತ್ತಿದೆ ಎಂದರು.

ಡಿ.19ರಂದು ಬೆಳಗ್ಗೆ 9ಕ್ಕೆ ಕೇಂದ್ರೀಯ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಈ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ನಿಜ ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವೇದಿಕೆ ಒದಗಿಸುವ ರಾಷ್ಟ್ರ ಮಟ್ಟದ ಕೆಲಸ ಇದಾಗಿದೆ. ಪ್ರತಿ ಸಂಯೋಜಕ ಕೇಂದ್ರದಲ್ಲಿಯೂ ವಿದ್ಯಾರ್ಥಿ ತಂಡಗಳು, ಕೈಗಾರಿಕಾ ತಜ್ಞರು, ವಿನ್ಯಾಸ ಮಾರ್ಗದರ್ಶಕರು, ಮೌಲ್ಯ ಮಾಪಕರು ಅಷ್ಟೂ ದಿನ ದಿನದ 24 ಗಂಟೆಯೂ ಕೆಲಸ ಮಾಡಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದಾರೆಂದರು.

ಸುದ್ದಿಗೋಷ್ಠಿಯಲ್ಲಿ ಎನ್‌ಐಇ ಕಾಲೇಜಿನ ಪ್ರೊ.ಎನ್.ಎಸ್. ಶ್ರೀಕಾತ್, ಪ್ರೊ. ವಿವೇಕ್ ಭಾರದ್ವಾಜ್ ಇದ್ದರು.

ಕರ್ನಾಟಕದ ಶಬರಿಮಲೆ ಭಕ್ತರಿದ್ದ ಬಸ್–ಆಟೋ ಮಧ್ಯೆ ಅಪಘಾತ: ಸ್ಥಳದಲ್ಲೇ ಐವರು ಸಾವು

ಮಲಪ್ಪುರಂ: ಕರ್ನಾಟಕದಿಂದ ಬರುತ್ತಿದ್ದ ಶಬರಿಮಲೆ ಯಾತ್ರಾರ್ಥಿಗಳ ಬಸ್‌ಗೆ ಆಟೋ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕ ಹಾಗೂ ಅದರಲ್ಲಿದ್ದ ನಾಲ್ವರು ಪ್ರಯಾಣಿಕರು ಸೇರಿದಂತೆ ಐವರು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಮಂಚೇರಿಯಲ್ಲಿ ಶುಕ್ರವಾರ ಸಂಜೆ ಸುಮಾರು 6 ಗಂಟೆಗೆ ಸಂಭವಿಸಿದೆ.

ನಿನ್ನೆ ಸಂಜೆ ಆರು ಗಂಟೆಗೆ ಮಂಚೇರಿ–ಅರೀಕೋಡು ರಸ್ತೆಯ ಚೆಟ್ಟಿ ಅಂಗಡಿ ಎಂಬಲ್ಲಿ ಅಪಘಾತ ನಡೆದಿದೆ. ಶಬರಿಮಲೆ ಯಾತ್ರಿಕರನ್ನು ಹೊತ್ತೊಯ್ಯುತ್ತಿದ್ದ ಕರ್ನಾಟಕ ಬಸ್ ಮತ್ತು ಆಟೋ ಮಧ್ಯೆ ಅಪಘಾತವಾಗಿದೆ.

ಅಪಘಾತದಲ್ಲಿ ಆಟೋರಿಕ್ಷಾ ಚಾಲಕ ಅಬ್ದುಲ್ ಮಜೀದ್ (50) ಮತ್ತು ಪ್ರಯಾಣಿಕರಾದ ಥೆಸ್ಲೀಮಾ (34) ಮುಹ್ಸಿನಾ (32) ಮತ್ತು ಅವರ ಮಕ್ಕಳಾದ ರೈಹಾ ಫಾತಿಮಾ (4) ಮತ್ತು ರಿನ್ಶಾ ಫಾತಿಮಾ (7) ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ದೇಹಗಳನ್ನು ಮಂಚೇರಿ ವೈದ್ಯಕೀಯ ಕಾಲೇಜಿನಲ್ಲಿ ಇರಿಸಲಾಗಿದೆ.

ಜ.6ರಿಂದ ಯುವ ನಾಯಕತ್ವ ತರಬೇತಿ ಶಿಬಿರ



ಮೈಸೂರು, ಡಿ.16(ಎಂಟಿವೈ)– ಮೈಸೂರಿನ ಲಲಿತಾದ್ರಿಪುರದಲ್ಲಿರುವ ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ವತಿಯಿಂದ ಜ.6ರಿಂದ 13ರವರೆಗೆ ಯುವ ನಾಯಕತ್ವ ತರಬೇತಿ ಶಿಬಿರ ಆಯೋಜಿಸುತ್ತಿದ್ದು, 18 ರಿಂದ 45 ವರ್ಷ ವಯಸ್ಸಿನೊಳಗಿನ ಆಸಕ್ತರು ಶಿಬಿರದಲ್ಲಿ ಪಾಲ್ಗೊಳ್ಳಬಹುದು ಎಂದು ಸಂಸ್ಥೆಯ ಶಿಕ್ಷಕ ಜಿ.ಎ. ಸುಬ್ಬುಕೃಷ್ಣ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ ಅ.2ರಿಂದ 9ರವರೆಗೆ ಯುವ ನಾಯಕತ್ವ ತರಬೇತಿ ಶಿಬಿರ ಆಯೋಜಿಸಲಾಗಿತ್ತು. ಅಂದು ಶಿಬಿರದಲ್ಲಿ 45 ಮಂದಿ ಪಾಲ್ಗೊಂಡಿದ್ದರು. ಇವರಿಗೆ ಯುವ ನಾಯಕತ್ವ ತರಬೇತಿ ನೀಡಲಾಗಿತ್ತು. ಇದೀಗ ಮತ್ತೊಮ್ಮೆ ನಾಯಕತ್ವ ತರಬೇತಿ ಶಿಬಿರ ನಡೆಸಲಾಗುತ್ತಿದೆ ಎಂದರು,

ಸುದ್ದಿಗೋಷ್ಠಿಯಲ್ಲಿ ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಹೆಚ್.ಎಲ್.ವಿದ್ಯಾ, ಜಯರಾಮು, ಜೆ. ಮಹೇಶ್, ಪ್ರೀತಿ ಇದ್ದರು.

ವಕೀಲರ ರಕ್ಷಣಾ ಕಾಯ್ದೆ; ಸಿಎಂಗೆ ಕಾಂಗ್ರೆಸ್ ಕಾನೂನು ವಿಭಾಗ ಅಭಿನಂದನೆ



ಮೈಸೂರು,ಡಿ.16(ಎಂಟಿವೈ)– ರಾಜ್ಯ ಸರ್ಕಾರ ವಕೀಲರಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ 'ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ವಿಧೇಯಕ'ವನ್ನು ಜಾರಿಗೊಳಿಸಿದ್ದು, ಇದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಕೀಲರ ಸಮುದಾಯದ ಪರವಾಗಿ ಅಭಿನಂದಿಸುವುದಾಗಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾನೂನು, ಮಾನವ ಹಕ್ಕುಗಳ ಮತ್ತು ಮಾಹಿತಿ ಹಕ್ಕು ವಿಭಾಗದ ಅಧ್ಯಕ್ಷ ಹಾಗೂ ವಕೀಲ ತಿಮ್ಮಯ್ಯ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸೇರಿದಂತೆ ದೇಶದ ಹಲವೆಡೆ ವಕೀಲರ ಮೇಲಿನ ಹಲ್ಲೆ ಪ್ರಕರಣಗಳಿಗೆ ಕಡಿವಾಣ ಹಾಕುವ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ ವಕೀಲರ ರಕ್ಷಣೆಗೆ ರಾಜ್ಯ ಸರ್ಕಾರ ಮುಂದೆ ಬಂದಿದೆ. 'ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ವಿಧೇಯಕ'ವನ್ನು ಉಭಯ ಸದನಗಳಲ್ಲಿ ಅಂಗೀಕರಿಸಲಾಗಿದೆ. ರಾಜ್ಯದ ವೃತ್ತಿಪರ ವಕೀಲರಿಗೆ ರಕ್ಷಣೆ ನೀಡುವ ಸಲುವಾಗಿ ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ವಿಧೇಯಕವನ್ನು ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿ ಅಂಗೀಕಾರ ಪಡೆಯಲಾಗಿದೆ. ಆದರೆ ಮುಂದಿನ ಅಧಿವೇಶನದಲ್ಲಿ ಕೆಲವೊಂದು ತಿದ್ದುಪಡಿ ಮಾಡುವ ಅಗತ್ಯವಿದೆ ಎಂದರು.

ನ್ಯಾಯವಾದಿಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ಶಿಕ್ಷೆಯ ಪ್ರಮಾಣವನ್ನು ಮೂರು ವರ್ಷದಿಂದ ಏಳು ವರ್ಷದವರೆಗೆ ವಿಸ್ತರಿಸಬೇಕು. ಈಗಾಗಲೇ ವಕೀಲರ ಬಂಧನದ ಬಳಿಕ ಸಂಬಂಧಿಸಿದ ವಕೀಲರ ಸಂಘಕ್ಕೆ ಪೊಲೀಸರು ಮಾಹಿತಿ ನೀಡುತ್ತಿದ್ದಾರೆ ಆದರೆ, ಬಂಧನಕ್ಕೂ ಮುನ್ನವೇ ಸಂಬಂಧಪಟ್ಟ ವಕೀಲರ ಸಂಘಕ್ಕೆ ಮಾಹಿತಿ ನೀಡಬೇಕೆಂಬ ಸುಪ್ರೀಂ ಕೋರ್ಟ್ ಆದೇಶವನ್ನು ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಜಾರಿಗೆ ತರಬೇಕು. ಹೀಗಾಗಿ ಈ ಕಾನೂನು ಜಾರಿಗೆ ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಸೇರಿದಂತೆ ಇನ್ನಿತರರನ್ನು ಶೀಘ್ರದಲ್ಲೇ ಅಭಿನಂದಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾನೂನು ವಿಭಾಗದ ಉಪಾಧ್ಯಕ್ಷ ಪಾಳ್ಯ ಸುರೇಶ್, ಪುಟ್ಟರಸ, ಎ.ಆರ್. ಕಾಂತರಾಜು, ಪಿ.ಬಿ.ಅಭಿಷೇಕ್ ಇದ್ದರು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಡಿ.16– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2023–24ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ದಿನಾಂಕವನ್ನು ಡಿ.22ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧ್ವನಿ–ಬೆಳಕು ಕಾರ್ಯಕ್ರಮ ತಾತ್ಕಾಲಿಕ ರದ್ದು

ಮೈಸೂರು, ಡಿ.16– ಫಲಪುಷ್ಪ ಪ್ರದರ್ಶನ–2023ರ ಪೂರ್ವಭಾವಿ ಕೆಲಸ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಹಿನ್ನೆಲೆಯಲ್ಲಿ ಡಿ.18ರಿಂದ 2024ರ ಜನವರಿ 4ರವರೆಗೆ ಮೈಸೂರು ಅರಮನೆ ಆವರಣದಲ್ಲಿ ಸಂಜೆ ನಡೆಯುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಎಂದು ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಸಂಚಾರ ನಿಯಮ ಮಾರ್ಪಾಡು ಅತ್ಯಗತ್ಯ

ಕರ್ನಾಟಕ ಪ್ರಜಾಪಾರ್ಟಿ ರೈತಪರ್ವ ಅಭಿಮತ



ಮೈಸೂರು,ಡಿ.16(ಎಂಟಿವೈ)– ರಾಜ್ಯದಲ್ಲಿ ಸಂಚಾರ ನಿಮಯಗಳನ್ನು ಮಾರ್ಪಾಡು ಮಾಡುವ ಅಗತ್ಯವಿದೆ ಎಂದು ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವದ ರಾಜ್ಯಾಧ್ಯಕ್ಷ ಡಾ.ಬಿ. ಶಿವಣ್ಣ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಮದ್ಯಪಾನ ಮಾರಾಟ ಮಾಡಲು ಅನುಮತಿ ನೀಡಿದೆ. ಆದರೆ, ಮದ್ಯ ಸೇವನೆ ಮಾಡಿ ವಾಹನ ಚಲಾಯಿಸುವ ವಾಹನ ಸವಾರರಿಗೆ ತೊಂದರೆ ನೀಡುತ್ತಿದೆ. ಮದ್ಯಪಾನ ಮಾಡಿರುವ ಚಾಲಕರು, ಸವಾರರಿಗೆ ಹತ್ತು ಸಾವಿರ ರೂ., ದಂಡ ವಿಧಿಸುತ್ತಿರುವುದರಿಂದ ಅನೇಕರಿಗೆ ದಂಡದ ಮೊತ್ತ ಪಾವತಿಸಲು ಸಾಲ ಮಾಡುವ ದುಸ್ಥಿತಿ ನಿರ್ಮಾಣವಾಗಿದೆ. ಈ ಕಾರಣದಿಂದ ಅನೇಕು ಕುಟುಂಬಗಳು ಸಂಕಷ್ಟಕ್ಕೆ ಸಿಲುಕುತ್ತಿವೆ. ಈ ಹಿನ್ನೆಲೆಯಲ್ಲಿ ಕೂಡಲೇ ರಾಜ್ಯದಲ್ಲಿ ಮದ್ಯಪಾನ ನಿಷೇದ ಕಾಯಿದೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಹೆಲ್ಮೆಟ್ ಧರಿಸದೇ ಬೈಕ್ ಚಲಾಯಿಸುವ ಸವಾರರಿಗೆ ದಂಡ ವಸೂಲಿ ಮಾಡುವುದನ್ನು ಬಿಟ್ಟು, ಉತ್ತಮ ಕಂಪನಿಯ ಹೆಲ್ಮೆಟ್‌ಗಳನ್ನು ಪೊಲೀಸರೇ ತರಿಸಿ ಕೊಂಡು ದಂಡದ ಬದಲಾಗಿ ಬೈಕ್ ಸವಾರರಿಗೆ ಹೆಲ್ಮೆಟ್ ನೀಡುವ ಮೂಲಕ ಅರಿವು ಮೂಡಿಸಬೇಕಾಗಿದೆ ಇದರಿಂದಾಗಿ ಬೈಕ್ ಸವಾರರು ಆ ಸ್ಥಳದಲ್ಲಿಯೇ ಹಣ ಕೊಟ್ಟು ಹೆಲ್ಮೆಟ್ ಖರೀದಿಸಿದಂತಾಗುತ್ತದೆ. ಅಲ್ಲದೆ, ಹೆಲ್ಮೆಟ್ ಇಲ್ಲದೇ ಬೈಕ್ ಚಾಲನೆ ಮಾಡುವುದು ತಪ್ಪುತ್ತದೆ. ಇದರಿಂದ ರಾಜ್ಯದ ಪೊಲೀಸರು ಜನ ಸ್ನೇಹಿ ಪೊಲೀಸರಾಗಿ ಹೊರಹೊಮ್ಮಲಿದ್ದಾರೆ. ಇಂತಹ ಬದಲಾವಣೆಯಿಂದ ಜನರಿಗೆ ಪೊಲೀಸರ ಮೇಲೆ ನಂಬಿಕೆ ಹಾಗೂ ಭರವಸೆ ಮೂಡುತ್ತದೆ ಎಂದರು.

ವಾಹನ ತಪಾಸಣೆ ಮಾಡುವ ಸಮಯದಲ್ಲಿ ಸೌಜನ್ಯವಾಗಿ ವರ್ತಿಸುವಂತೆಯೂ ಹಿರಿಯ ಪೊಲೀಸ್ ಅಧಿಕಾರಿಗಳು ಮಾರ್ಗದರ್ಶನ ಮಾಡಬೇಕಾದ ಅನಿವಾರ್ಯತೆಯೂ ಕೂಡಾ ಇದೆ. ಹಾಗಾಗಿ ಕಾಲಕ್ಕೆ ಅನುಗುಣವಾಗಿ ಸಂಚಾರ ನಿಯಮ ಮಾರ್ಪಾಡು ಮಾಡಬೇಕು ಎಮದು ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗುತ್ತಿದ್ದು, ಇಲ್ಲದಿದ್ದರೆ ರಾಜ್ಯಾದ್ಯಂತ ಪಕ್ಷದ ವತಿಯಿಂದ ಹೋರಾಟ ಮಾಡಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಜಾ ಪಾರ್ಟಿ ರೈತ ಪರ್ವದ ಪದಾಧಿಕಾರಿಗಳಾದ ಕುಮಾರ್, ಸ್ಟೀಫನ್, ಮೋಹನ್‌ದಾಸ್, ಶ್ರೀನಿವಾಸ್, ಸುಧಾಮಣಿ ಹಾಗೂ ಭಾಗ್ಯ ಇದ್ದರು.

■ ವಿನಯ್ ಕಾರೇಕುರ



ಬಲಮುರಿಯಲ್ಲಿ ಹೊತ್ತು ಮುಳುಗಿದ ಮೇಲೆ ಮತ್ತೇರಿಸುವ ಮೋಜು-ಮಸ್ತಿ!

ಶ್ರೀರಂಗಪಟ್ಟಣ ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣಗಳಲ್ಲೊಂದಾದ ಬಲಮುರಿಯಲ್ಲಿ ರಾತ್ರಿ ವೇಳೆ ಅನಧಿಕೃತವಾಗಿ ಡಿಜೆ ಸಮೇತ ಮೋಜು-ಮಸ್ತಿನೊಂದಿಗೆ ಸಂಗೀತ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಬಲಮುರಿ ಫಾಲ್ಸ್ ಪ್ರದೇಶಕ್ಕೆ ಸಂಜೆ 6ರ ನಂತರ ಪ್ರವಾಸಿಗರ ನಿಷೇಧವಿದೆ. ಶ್ರೀ ಬಲಮುರಿ ಕ್ಷೇತ್ರದ ಅಭಿವೃದ್ಧಿ ಸಮಿತಿಯು ತಮ್ಮ ಸಿಬ್ಬಂದಿ ಮೂಲಕ ಸಂಜೆ 5.30 ರಿಂದಲೇ ಪ್ರವಾಸಿಗರ ವಾಹನಗಳನ್ನು ಬಲಮುರಿಯಿಂದ ಹೊರ ಕಳುಹಿಸುವ ಪ್ರಯತ್ನ ನಡೆಸುತ್ತಾರೆ. ಒಟ್ಟಾರೆ ಸಂಜೆ 6ರ ನಂತರ ಅಲ್ಲಿ ಪ್ರವಾಸಿಗರ ಯಾವುದೇ ವಾಹನ ಇರಬಾರದು ಎಂಬ ನಿಯಮ ವಿದೆ. ಈ ಸಮಯದ ನಂತರ ಅಭಿವೃದ್ಧಿ ಸಮಿತಿಯ ಸಿಬ್ಬಂದಿಯು ಅಲ್ಲಿಂದ ಹೊರ ನಡೆಯುತ್ತಾರೆ. ವಾಹನ ಪಾರ್ಕಿಂಗ್ ಟೆಂಡರ್‌ನಲ್ಲೂ ಕೂಡ ಬೆಳಗ್ಗೆ 8ರಿಂದ ಸಂಜೆ 6ರವರೆಗೆ ಮಾತ್ರ ವಾಹನ ಶುಲ್ಕ ವಸೂಲಿ ಮಾಡಿ ಪಾರ್ಕಿಂಗ್‌ಗೆ ಅವಕಾಶ ನೀಡಬೇಕು ಎಂಬ ಷರತ್ತು ವಿಧಿಸಲಾಗಿದೆ.

ವಿಪರ್ಯಾಸವೆಂದರೆ ಕತ್ತಲು ಆವರಿಸುತ್ತಿದ್ದಂತೆಯೇ ಕೇರಳ ಹಾಗೂ ತಮಿಳುನಾಡಿನ ಪ್ರವಾಸಿ ಬಸ್‌ಗಳು ಹಾಗೂ ಕಾರುಗಳು ಬಲಮುರಿ ಕ್ಷೇತ್ರವನ್ನು ಪ್ರವೇಶಿಸುತ್ತವೆ. ಶುಲ್ಕ ವಸೂಲಿ ಮಾಡುವ ಗೇಟ್‌ನಲ್ಲಿ ಯಾವುದೇ ಸಿಬ್ಬಂದಿ ಇರುವುದಿಲ್ಲವಾದ್ದರಿಂದ ಈ ವಾಹನಗಳಿಗೆ ಶುಲ್ಕ ವಸೂಲಿಯೂ ಆಗುವುದಿಲ್ಲ. ಆದರೆ ರಾತ್ರಿ ಸುಮಾರು 1 ಗಂಟೆಯ ವರೆಗೂ ಈ ವಾಹನಗಳು ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆಯಾಗಿರುತ್ತವೆ. ಕೇರಳದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸೇರಿದಂತೆ ಯುವ ಸಮೂಹದ ದಂಡು ಈ ಸಮಯದಲ್ಲಿ ಇಲ್ಲಿಗೆ ಭೇಟಿ ನೀಡುತ್ತದೆ. ಈ ಯುವ ಜನರಿಗಾಗಿ ಮಂದ ಬೆಳಕಿನಲ್ಲಿ ಡಿಜೆ ಪ್ರಾರಂಭವಾಗುತ್ತದೆ. ಡಿಜೆ ಸಂಗೀತಕ್ಕೆ ಯುವಕ-ಯುವತಿಯರು ಹುಚ್ಚೆದ್ದು ಕುಣಿದು-ಕುಪ್ಪಳಿಸುತ್ತಾರೆ. ಈ ಸಂಗೀತ ಕಾರ್ಯಕ್ರಮ ನಡೆಯುವ ಅನತಿ ದೂರದಲ್ಲೇ ಮದ್ಯದಂಗಡಿಯೂ ಇದೆ. ಇದು ಅಧಿಕೃತ ಮದ್ಯದಂಗಡಿಯಾಗಿದ್ದರೂ ಸಂಜೆ 6ರ ನಂತರ ನಿಯಮದಂತೆ ಮದ್ಯ ಮಾರಾಟಕ್ಕೆ ಅವಕಾಶವಿಲ್ಲ. ಆದರೆ, ಅನಧಿಕೃತವಾಗಿ ನಡೆಯುತ್ತಿರುವ ಸಂಗೀತ ಕಾರ್ಯಕ್ರಮದಲ್ಲಿ ಮದ್ಯವೂ ಸರಬರಾಜಾಗುತ್ತಿದೆ ಎಂಬ ಮಾಹಿತಿ ಇದ್ದು, ಈ



ಮಾಹಿತಿಯನ್ನು ಬಲಮುರಿಯಲ್ಲಿರುವ ಮದ್ಯದಂಗಡಿಯಿಂದಲೇ ಸರಬರಾಜು ಮಾಡಲಾಗುತ್ತಿದೆಯೇ ಅಥವಾ ಸಂಗೀತ ಕಾರ್ಯಕ್ರಮದ ಆಯೋಜಕರು ಹೊರಗಿನಿಂದ ತಂದು ಯುವ ಸಮೂಹಕ್ಕೆ ಮದ್ಯ ಸರಬರಾಜು ಮಾಡುತ್ತಿದ್ದಾರೆಯೇ ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲ.

ಹಲವಾರು ತಿಂಗಳುಗಳಿಂದಲೂ ಬಲಮುರಿಯಲ್ಲಿ ಈ ಅನಧಿಕೃತ ಸಂಗೀತ ಕಾರ್ಯಕ್ರಮ ನಡೆಯುತ್ತಿದೆ. ಇಲ್ಲಿ ರಾತ್ರಿ ವೇಳೆ ಮೋಜು-ಮಸ್ತಿಯ ಸಂಗೀತ ಕಾರ್ಯಕ್ರಮ ನಡೆಯುತ್ತದೆ ಎಂಬುದರ ಬಗ್ಗೆ ಕೇರಳ ಮತ್ತು ತಮಿಳುನಾಡಿನ ಟ್ರಾವೆಲ್ ಏಜೆನ್ಸಿಗಳಿಗೆ ಮಾಹಿತಿ ಇದೆ.

ಆದುದರಿಂದಲೇ ಟ್ರಾವೆಲ್ ಏಜೆನ್ಸಿಯವರು ತಮ್ಮ ಪ್ರವಾಸದ ಪ್ಯಾಕೇಜ್‌ನಲ್ಲಿ ಈ ಮೋಜು-ಮಸ್ತಿಯ ಸಂಗೀತ ಕಾರ್ಯಕ್ರಮವನ್ನೂ ಸೇರಿಸಿಕೊಂಡು ಪ್ರವಾಸಿಗರನ್ನು ರಾತ್ರಿ ವೇಳೆ ಇಲ್ಲಿಗೆ ಕರೆತರುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಹೊರ ರಾಜ್ಯದ ಟ್ರಾವೆಲ್ ಏಜೆನ್ಸಿಗಳಿಗೆ ಈ ವಿಚಾರ ತಿಳಿದಿದ್ದು, ಅವರು ತಮ್ಮ ಪ್ಯಾಕೇಜ್‌ನಲ್ಲಿ ಇದನ್ನೂ ಕೂಡ ಸೇರಿಸಿಕೊಂಡು ಪ್ರವಾಸಿಗರನ್ನು ಕರೆತರುತ್ತಿರುವಾಗ ಸಂಬಂಧಪಟ್ಟ ಸ್ಥಳೀಯ ಅಧಿಕಾರಿ ವರ್ಗದವರಿಗೆ ಈ ಅನಧಿಕೃತ ಸಂಗೀತ ಕಾರ್ಯಕ್ರಮದ ಬಗ್ಗೆ ಮಾಹಿತಿಯೇ ಇಲ್ಲ ಎಂಬುದು ಅಚ್ಚರಿ ಮೂಡಿಸಿದೆ.

ರಾತ್ರಿ ವೇಳೆ ಇಲ್ಲಿಗೆ ಆಗಮಿಸುವ ಪ್ರವಾಸಿಗರು ಮೋಜು-ಮಸ್ತಿನ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಜೊತೆಗೆ ಬಲಮುರಿ ಫಾಲ್ಸ್‌ಗೂ ಇಳಿಯುತ್ತಾರೆ ಎಂದು ಹೇಳಲಾಗಿದ್ದು, ಕಾರ್ಯಕ್ರಮ ನಡೆಯುವ ದಿನಗಳಂದು ಫಾಲ್ಸ್ ಬಳಿಯು ಬೆಳಕಿನ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಲಾಗಿದೆ.

“ ಬಲಮುರಿ ಕ್ಷೇತ್ರ ಪವಿತ್ರವಾದ ಕ್ಷೇತ್ರವಾಗಿದ್ದು, ನಮಗೆ ಹೆಮ್ಮೆ ತಂದಿದೆ. ಆದರೆ ಇಲ್ಲಿ ಹಗಲು-ರಾತ್ರಿ ಎಡಬಿಡದೆ ನೂರಾರು ವಾಹನಗಳು ಸಂಚರಿಸುತ್ತಿರುವುದು ನಮಗೆ ನೋವಿನ ಸಂಗತಿಯಾಗಿದೆ. ರಾತ್ರಿ ವೇಳೆ ವಾಹನಗಳ ಶಬ್ದದಿಂದಾಗಿ ಸರಿಯಾಗಿ ನಿದ್ರೆಯೂ ಮಾಡಲಾಗುತ್ತಿಲ್ಲ. ಬಲಮುರಿಯಲ್ಲಿ ನೀರಿಗಿಳಿಯುವುದನ್ನು ನಿಷೇಧಿಸಿದ್ದರೂ ಕೂಡ ಆಗಿಂದಾಗ್ಗೆ ಪ್ರವಾಸಿಗರು ನೀರಿನಲ್ಲಿ ಮುಳುಗಿ ಸಾವನ್ನಪ್ಪುವ ಘಟನೆಗಳು ನಡೆಯುತ್ತಲೇ ಇವೆ. ರಾತ್ರಿ ವೇಳೆ ಇಲ್ಲಿ ಯಾವುದೇ ರೀತಿಯ ಭದ್ರತೆ ಇಲ್ಲ. ಮೋಜು-ಮಸ್ತಿಗೆ ಬರುವ ಪ್ರವಾಸಿಗರು ರಾತ್ರಿ ವೇಳೆ ಅನಾಹುತ ಮಾಡಿಕೊಂಡರೆ ಬಲಮುರಿ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ. ಪವಿತ್ರವಾದ ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಡಿಜೆ ಅರೆಬೆತ್ತಲೆ ನೃತ್ಯವನ್ನು ನಿಷೇಧಿಸಬೇಕು. – ವಿಷಕಂಠು, ಗ್ರಾಮಸ್ಥ

“ ಕಾನೂನು ಪ್ರಕಾರ ಕರೆದಿರುವ ಟೆಂಡರ್‌ನಂತೆ ಬೆಳಗ್ಗೆ 8ರಿಂದ ಸಂಜೆ 6 ಗಂಟೆವರೆಗೂ ಬಲಮುರಿ ಕ್ಷೇತ್ರಕ್ಕೆ ಬರುವ ವಾಹನಗಳಿಂದ ಶುಲ್ಕ ಸಂಗ್ರಹಿಸುತ್ತೇವೆ. 6 ಗಂಟೆ ನಂತರ ಕ್ಷೇತ್ರದಲ್ಲಿ ನಮ್ಮ ಸಿಬ್ಬಂದಿ ಇರುವುದಿಲ್ಲ. ಮಧ್ಯರಾತ್ರಿವರೆಗೂ ಯುವಜನರು ಡಿಜೆ ಅರೆಬೆತ್ತಲೆ ನೃತ್ಯದಲ್ಲಿ ಭಾಗವಹಿಸುತ್ತಿದ್ದರೆ, ಅದು ಅಪಾಯಕ್ಕೆ ಆಹ್ವಾನ ನೀಡಿದಂತೆಯೇ ಸರಿ. ಕಾನೂನು ಪ್ರಕಾರವೂ ಇದು ತಪ್ಪು. ಈ ಸಂಬಂಧ ತಕ್ಷಣವೇ ನಮ್ಮ ಸಮಿತಿಯ ಸಭೆ ಕರೆದು ರಾತ್ರಿ ವೇಳೆ ಡಿಜೆ ಸಂಗೀತ ಕಾರ್ಯಕ್ರಮ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು ಚರ್ಚಿಸುತ್ತೇವೆ.
– ಸುಧಾಕರ್, ಶ್ರೀ ಬಲಮುರಿ ಕ್ಷೇತ್ರದ ಅಭಿವೃದ್ಧಿ ಸಮಿತಿ ಅಧ್ಯಕ್ಷ

“ ಬಲಮುರಿಯಲ್ಲಿ ಯಾವುದೇ ರೀತಿಯ ನೃತ್ಯ ಕಾರ್ಯಕ್ರಮಗಳಿಗೆ ಅನುಮತಿ ನೀಡಿಲ್ಲ. ರಾತ್ರಿ ವೇಳೆ ಡಿಜೆ ಅರೆಬೆತ್ತಲೆ ನೃತ್ಯ ಕಾರ್ಯಕ್ರಮಗಳು ನಡೆಯುತ್ತಿವೆ ಎಂಬುದರ ಬಗ್ಗೆ ಪೊಲೀಸ್ ಇಲಾಖೆಗೆ ಈವರೆವಿಗೂ ಯಾವುದೇ ಮಾಹಿತಿ ಇಲ್ಲ. – ಮುರಳಿ, ಡಿವೈಎಸ್ಪಿ, ಶ್ರೀರಂಗಪಟ್ಟಣ ಉಪ ವಿಭಾಗ




ರಾತ್ರಿ ವೇಳೆ ಬಲಮುರಿಯ ಪಾರ್ಕಿಂಗ್ ಪ್ರದೇಶದಲ್ಲಿ ಹೊರ ರಾಜ್ಯದ ಪ್ರವಾಸಿ ಬಸ್‌ಗಳು ನಿಂತಿರುವುದು.

ಮಕ್ಕಳ ಚಿತ್ರಕಥೆ

‘500ರೂ ಸುತ್ತಾಡಿದ್ದು ಹೀಗಿತ್ತು...!’

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಂದು ಲಾಡ್ಜಿಗೆ ಒಬ್ಬರು ರೂಮ್ ಬುಕ್ ಮಾಡಲು ಬಂದರು. ಅವರಿಗೆ ಮೊದಲು ರೂಮ್ ನೋಡಬೇಕಾಗಿತ್ತು. ಅದಕ್ಕೆ ಅಲ್ಲಿನ ಮ್ಯಾನೇಜರ್ ಕೇಳಿದಂತೆ 500 ರೂ. ಡಿಪಾಸಿಟ್ ನೀಡಿ ರೂಮು ನೋಡಲು ಹೊರಟರು.




ತನ್ನಲ್ಲಿ ಬಂದ 500ರೂ. ಹಣವನ್ನ ಮ್ಯಾನೇಜರ್ ಕಸಗುಡಿಸುವವಳನ್ನ ಕರೆದು ಅವಳ ಕಳೆದ ತಿಂಗಳ ಸಂಬಳದ ಬಾಕಿ ನೀಡಿದ.




ಅವಳು ಆ ಹಣವನ್ನ ಹತ್ತಿರದ ಕ್ಯಾಂಟೀನ್‌ಗೆ ಹೋಗಿ ತನ್ನ ತಿಂಗಳ ಲೆಕ್ಕ ಚುಕ್ತಗೊಳಿಸಿದಳು.



ಕ್ಯಾಂಟೀನ್ ಮಾಲೀಕ ಅದನ್ನು ಅಲ್ಲೇ ಇದ್ದ ಹಾಲಿನವನಿಗೆ ನೀಡಿ ಬಾಕಿ ಜಮಾ ಮಾಡುವಂತೆ ಹೇಳಿದ. ಹಾಲಿನವ ಸಂತೋಷದಿಂದ ಲಾಡ್ಜಿನ ಪಕ್ಕದಲ್ಲಿರುವ ಪಶು ವೈದ್ಯರಲ್ಲಿಗೆ ಹೋಗಿ ಕಳೆದ ವಾರ ಚಿಲ್ಲರೆ ಇಲ್ಲದ ಕಾರಣ ಔಷದ ಹಣದಲ್ಲಿ 500ರೂ. ಬಾಕಿ ಕೊಡಬೇಕಿತ್ತು ಎಂದು ಹೇಳಿ ಕೊಟ್ಟ.



ವೈದ್ಯ ಕೂಡಲೇ 500 ರೂಪಾಯಿಯನ್ನು ಲಾಡ್ಜಿನ ಮ್ಯಾನೇಜರ್‌ಗೆ ನೀಡಿ ತನ್ನ ರೂಮ್ ಬಾಡಿಗೆಯ ಬಾಕಿ ಹಣ ನೀಡಿ ಮುಗುಳ್ನಗೆ ನೀಡಿದ.



ಅಷ್ಟರಲ್ಲಿ ಗ್ರಾಹಕ ತನಗೆ ರೂಮ್ ಇಷ್ಟವಾಗಲಿಲ್ಲ ಎಂದು ಹೇಳಿ ತಾನು ನೀಡಿದ್ದ 500 ರೂಪಾಯಿಯನ್ನು ವಾಪಸ್ ಪಡೆದ. ನೋಟು ತಿರುಗಿ ಗ್ರಾಹಕನ ಕೈಗೇ ಬಂತು. ಆದರೆ ಅದು ಸಂಚಾರ ಮಾಡಿದ ದಾರಿಯಲ್ಲಿ ಹಲವು ರೀತಿಯ ಸಾಲವನ್ನು ತೀರಿಸಿತ್ತು.

ನೀತಿ: ಜೀವವಿರದ ಒಂದು ಬೆಲೆಯುಳ್ಳ ಕಾಗದದ ಚೂರು ಎಲ್ಲರ ಸಾಲಗಳನ್ನೂ ತೀರಿಸಿ, ಅವರ ಮೊಗದಲ್ಲಿ ನಿಶ್ಚಿಂತೆಯ ನಗುವನ್ನು ತರಿಸಲು ಕಾರಣವಾದರೆ..... ಜೀವವಿರುವ ನಾವುಗಳು ಎಷ್ಟು ಮೊಗಗಳಲ್ಲಿ ನಗೆಯನ್ನು ತರಿಸಲು ಕಾರಣವಾಗಿದ್ದೇವೆ...? ಯೋಚಿಸುವ ಪರಿ ನಮಗೆ ಬಿಟ್ಟಿದ್ದು...!



ವಾರಭವಿಷ್ಯ

17.12.2023 ರಿಂದ 23.12.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಧನುಸ್ಸು, ಚಂದ್ರ-ಮಕರ, ಕುಂಭ, ಮೀನ, ಮೇಷ, ಕುಜ-ವೃಶ್ಚಿಕ, ಬುಧ-ಧನುಸ್ಸು, ಗುರು-ಮೇಷ, ಶುಕ್ರ-ತುಲಾ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಔದ್ಯೋಗಿಕ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗುತ್ತವೆ. ಎಷ್ಟೇ ಧನ ಸಂಚಯವಾದರೂ ಅಷ್ಟೇ ಖರ್ಚುಗಳು ಬರುತ್ತವೆ. ಕೊಡಿಟ್ಟ ಹಣವೂ ವ್ಯಯವಾದೀತು. ಶತ್ರು ಜನರ ತೊಂದರೆಯಿಂದ ಕಂಗಾಲು ಆಗುವಿರಿ. ವಾರಾಂತ್ಯಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಮಿತ್ರ ಜನರಿಂದ ಸಹಾಯ, ದೈವಾನುಕೂಲ, ಸತ್ಕರ್ಮದಲ್ಲಿ ಆಸಕ್ತಿ, ದಾನ-ಧರ್ಮ ಎಸಗಿ ಸತ್ಕೀರ್ತಿಗೆ ಭಾಜನರಾಗುವಿರಿ.

ಶ್ರೀ ಗಣಪತಿಗೆ ಅರ್ಕ ಪುಷ್ಪ ಸಮರ್ಪಣೆ. ಶುಭ ಸಂಖ್ಯೆ-3.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಬಿಡುವಿಲ್ಲದ ಓಡಾಟಗಳು. ಹೆಚ್ಚಿನ ಕೆಲಸದಿಂದ ದೇಹಾಯಾಸ. ಯತ್ನ ಕಾರ್ಯದಲ್ಲಿ ಅಡ್ಡಿ-ಆತಂಕಗಳನ್ನು ಎದುರಿಸಬೇಕಾದೀತು. ಕೈಗೆ ಬಂದದ್ದು ಬಾಯಿಗಿಲ್ಲದಂಥ ಪರಿಸ್ಥಿತಿ. ಹಿರಿಯರ ಮಾರ್ಗದರ್ಶನದಂತೆ ಪೂಜೆ-ಪುನಸ್ಕಾರಗಳನ್ನು ಆಚರಿಸುವುದರಿಂದ ಮನಸ್ಸಿಗೆ ನೆಮ್ಮದಿ. ವಾರದ ಕಡೆಗೆ ಭೋಗ ವಸ್ತುಗಳು ಮನೆಗೆ ಬರುವುದು. ಮಿತ್ರರ ವಿಚಾರದಲ್ಲಿದ್ದ ತಪ್ಪು ಕಲ್ಪನೆಗಳು ನಿವಾರಣೆ ಆಗುವುದು.

ಸನ್ಮಂಗಳದಾಯಿನಿ ದೇವೀ ದರ್ಶನ. ಶುಭ ಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಅಂದುಕೊಂಡ ಕಾರ್ಯ ಅಂದುಕೊಂಡಂತೆ ನಡೆದು ಮನಸ್ಸಿಗೆ ಹರ್ಷ. ಉತ್ತಮ ಕೆಲಸಗಳಿಂದ ಪ್ರಶಂಸೆಗೆ ಪಾತ್ರರಾಗುವಿರಿ. ಉಡುಗೊರೆಗಳು ದೊರೆಯುವುದು. ನೂತನ ವಸ್ತ್ರ, ವಾಹನ ಖರೀದಿಸುವ ಯೋಗವಿದೆ. ನಿಮ್ಮ ನೌಕರಿ ಸ್ಥಳದಲ್ಲಿ ಅಪನಂಬಿಕೆಗೆ ಗುರಿಯಾಗುವ ಸಾಧ್ಯತೆ. ಕೆಲವು ವೇಳೆ ನಿಮ್ಮ ಕೋಪ ನಿಮಗೇ ಮುಳುವಾಗಬಹುದು, ಘರ್ಷಣೆಯಾಗುವುದನ್ನು ತಪ್ಪಿಸಿ.

ಶ್ರೀರಾಮನಾಮ ಜಪ. ಶುಭ ಸಂಖ್ಯೆ-7.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರುವುದು. ಹಿರಿಯರ ನೈತಿಕ ಬೆಂಬಲ ಹಾಗೂ ಮಾರ್ಗದರ್ಶನದಿಂದ ನಿಂತು ಹೋಗಿದ್ದ ಕಾರ್ಯ ಕಲಾಪಗಳಲ್ಲಿ ಪ್ರಗತಿ ಕಂಡು ಬರುವುದು. ವಾರ ಮಧ್ಯೆ ಧನ-ಧಾನ್ಯ ಲಾಭವಾದರೂ, ಮಾನಸಿಕ ದುಗುಡತೆ ಮತ್ತು ಶ್ರಮಾಧಿಕ್ಯದಿಂದ ದೇಹಾಯಾಸ ಅನುಭವಿಸುವಿರಿ. ನೆಂಟರಿಷ್ಟರು ಮನೆಗೆ ಬರುವರು, ಅವರ ಉಪಚಾರಕ್ಕೆ ಧನ ವ್ಯಯ. ವಾಯು ತೊಂದರೆ ಉಂಟಾದೀತು.

ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ-5.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)

ನಿಮಗೆ ಪ್ರಗತಿಯ ಆಕಾಂಕ್ಷೆಯಿದೆ. ದೈವಾನುಕೂಲವೂ ಇದೆ. ಎನ್‌ಕ್ಯಾಷ್ ಮಾಡಿಕೊಳ್ಳಿ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಕೆಲಸದ ಸಂದರ್ಶನಗಳಲ್ಲಿ ಯಶಸ್ವಿಯಾಗುವಿರಿ. ವನಿತಾಮಣಿಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ಮೌಲ್ಯದ ವಸ್ತು ಮತ್ತು ವಾಹನ ಹೊಂದುವ ಕನಸು ನನಸಾಗಲಿದೆ. ನೌಕರರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ಆಗುವುದು. ಉಷ್ಣಜನಿತ ಕಾಯಿಲೆ.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-9.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಆದಿಗೆ ಮಾನಸಿಕ ಅಸ್ಥಿರತೆ ಕಾಡುತ್ತದೆ. ಹಣಕಾಸು ವಿಚಾರದಲ್ಲಿ ಏರುಪೇರುಗಳು ಕಾಣಬರುತ್ತದೆ. ಅನಾವಶ್ಯಕ ವಿಚಾರಗಳಿಗೆ ಹಣ ವ್ಯಯವಾಗುವುದು. ವಿದ್ಯಾರ್ಥಿಗಳಿಗೆ ಏಕಾಗ್ರತೆಯ ಕೊರತೆ ಕಾಡುವುದು. ಮಿತ್ರರಿಂದ ಆರ್ಥಿಕ ಲಾಭ ಹೊಂದುವಿರಿ. ಕೈಗಾರಿಕೆಗಳ ಹೂಡಿಕೆ ಪ್ರಯತ್ನಗಳನ್ನು ಮುಂದೂಡಿ. ನೆರೆಹೊರೆಯಲ್ಲಿ ವಾದ-ವಿವಾದಗಳಿಂದ ದೂರವಿರುವುದು ಉತ್ತಮ.

ಶ್ರೀ ಸತ್ಯನರಾಯಣ ಸೇವೆ. ಶುಭ ಸಂಖ್ಯೆ-8.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಪ್ರಾರಂಭಕ್ಕೆ ವಿತ್ತಲಾಭ, ಸುಖ, ಸಂತೋಷ ವೃದ್ಧಿ, ವಾಹನ ಖರೀದಿಗೆ ಮನಸ್ಸು ಮಾಡುವಿರಿ. ಸಪ್ತಮಭಾವ ಸ್ಥಿತ ಗುರುವಿನ ಕೃಪಾದೃಷ್ಟಿ ನಿಮ್ಮ ರಾಶಿಯ ಮೇಲಿದೆ. ಅಸಾಧ್ಯವಾದುದನ್ನು ಸಾಧಿಸಿಕೊಳ್ಳುವಿರಿ. ಆದರೆ ಪಂಚಮ ಸ್ಥಿತ ಶನಿದೇವ ನಿಮ್ಮನ್ನು ಹಲವು ರೀತಿಯ ಪರೀಕ್ಷೆಗೆ ಒಳಪಡಿಸಲಿದ್ದಾನೆ. ಹೇಳಿಕೆ ಮಾತುಗಳನ್ನು ನಂಬದಿರಿ. ಆರೋಗ್ಯದಲ್ಲಿ ಏರುಪೇರು.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-6.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ನೋವು-ನಲಿವುಗಳು ಜೊತೆ ಜೊತೆಯಾಗಿಯೇ ಬರುತ್ತಿವೆ. ಕೆಲವು ಸಂದರ್ಭಗಳಲ್ಲಿ ಕೈ ಚೆಲ್ಲಿ ಕೂರಬೇಕಾದ ಪರಿಸ್ಥಿತಿ ಎದುರಾದೀತು. ವೃಥಾ ಅಪವಾದಕ್ಕೆ ಗುರಿಯಾಗುವ ಸಂಭವವಿದೆ. ಸರ್ಕಾರಿ ನೌಕರರಿಗೆ ಟ್ರಾನ್ಸ್‌ಫರ್ ಜೊತೆಗೆ ಬಡ್ತಿ ಯೋಗವಿದೆ. ಭೂಮಿ ಸಂಬಂಧಿತ ಮಾರಾಟ ಲಾಭ ತರುವುದು. ಸ್ಥಿರಾಸ್ತಿ ಸಂಬಂಧ ಹೊಸ ಒಪ್ಪಂದಗಳು ಉಂಟಾದೀತು. ಅನಿರೀಕ್ಷಿತ ಪ್ರಯಾಣಗಳು ಉಂಟಾಗುವುದು.

ಶ್ರೀದೇವೀ ಖಡ್ಗಮಾಲಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಧನ-ಧಾನ್ಯ ಲಾಭ, ಕೀರ್ತಿ, ಸನ್ಮಾನಗಳಿಗೆ ಭಾಜನರಾಗುವಿರಿ. ಇಷ್ಟ ಜನರ ಮಿಲನದಿಂದ ಮನಸ್ಸಿಗೆ ಉಲ್ಲಾಸ. ಸತಿ-ಪತಿಯರ ನಡುವೆ ಇದ್ದ ತಪ್ಪು ಗ್ರಹಿಕೆಗಳು ನಿವಾರಣೆ ಆಗುವುದು. ಹಲವರಿಗೆ ವಿದೇಶ ಪ್ರವಾಸದ ಯೋಗವಿದೆ. ರಾಹು-ಕೇತುಗಳು ಶುಭರಿಲ್ಲ, ದುಡುಕಿನಿಂದ ಕಾರ್ಯಗೆಡುವುದು. ಸಂಚಾರಗಳು ಹೆಚ್ಚುವುದರಿಂದ ಶಾರೀರಿಕವಾಗಿ ಬಳಲುವಿರಿ. ವಾಹನಾಪಘಾತಗಳಿಂದ ಎಚ್ಚರವಾಗಿರಿ.

ಶ್ರೀ ತ್ರಿಮೂರ್ತಿ ರೂಪದತ್ತಗುರು ದರ್ಶನ. ಶುಭ ಸಂಖ್ಯೆ-1.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಶುಭ ಚಂದ್ರಗ್ರಹದ ಪರಿಣಾಮ ದ್ರವ್ಯಲಾಭ, ಮನೋ-ಬುದ್ಧಿಗಳು ಚುರುಕಾಗಿರುವುದು. ಕಷ್ಟಕರವಾದ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುವಿರಿ. ವಾರಮಧ್ಯೆ ಕಳತ್ರ-ಪುತ್ರದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವುದು. ಕೋಪ ತ್ಯಜಿಸಿ, ತಾಳ್ಮೆ ವಹಿಸಿ ಒಳಿತಾಗುವುದು. ನಿಮ್ಮ ಆರೋಗ್ಯದ ಬಗ್ಗೆ ಉದಾಸೀನ ತಳೆಯದಿರಿ. ಡ್ರೈವಿಂಗ್‌ನಲ್ಲಿ ನಿಧಾನವೇ ಪ್ರಧಾನವಾಗಿರಲಿ.

ಶ್ರೀ ಶನೇಶ್ವರ ಮೂಲ ಮಂತ್ರ ಪಠಿಸಿ. ಶುಭ ಸಂಖ್ಯೆ-3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆರಂಭಕ್ಕೆ ಮಹಿಳಾ ಮಣಿಯರು ಅರಗು-ಮೆರಗಿನ ಪದಾರ್ಥ ಖರೀದಿಸುವರು. ನಿಮ್ಮ ಪೂರ್ವ ಯೋಜಿತ ಕಾರ್ಯಗಳು ಟೈಂ ಟೈಂಗೆ ಸರಿಯಾಗಿ ನಡೆಯುವುದು. ಜನ್ಮ ರಾಶಿ ಸ್ಥಿತ ಶನಿದೇವನ ಕಾರಣ ಇಂಜಿನಿಯರ್, ಕಂಟ್ರಾಕ್ಟರ್‌ಗಳಿಗೆ ಒಪ್ಪಂದದಂತೆ ಕೆಲಸಗಳು ನಡೆಯದೆ ನಷ್ಟ ಉಂಟಾಗುವುದು. ಕೃಷಿಕರಿಗೆ ಬೆಳೆದ ಬೆಳೆಗೆ ಸರಿಯಾದ ದರ ದೊರೆಯದೆ ನಿರಾಶೆಯಾಗುವುದು.

ಶ್ರೀ ಹನುಮಂತ ದರ್ಶನ. ಶುಭ ಸಂಖ್ಯೆ-4.

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)

ವಾರದ ಆದಿಗೆ ಮನಸ್ಸು ಮುದವಾಗಿರುತ್ತದೆ. ವಸ್ತು, ವಾಹನ, ಕನಕಾಭರಣ ಖರೀದಿಯ ಯೋಗವಿದೆ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ ದೊರೆಯುತ್ತದೆ. ಪ್ರಮುಖ ವ್ಯಕ್ತಿಗಳಿಂದ ಅಪರೂಪದ ಆಹ್ವಾನ ದೊರೆಯುತ್ತದೆ. ಐಟಿ-ಬಿಟಿ ಉದ್ಯೋಗಿಗಳಿಗೆ ಸಂಬಳದ ಬಗ್ಗೆ ಒಳ್ಳೆಯ ಸುದ್ದಿ ಬರಲಿದೆ. ವಿವಾಹ ಯೋಗ್ಯರಿಗೆ ವೀಳ್ಯದೆಲೆ ಶಾಸ್ತ್ರ, ಒಪ್ಪು ಮಾತುಗಳು ಘಟಿಸಬಹುದು. ನರ ಸಂಬಂಧಿ ಸಮಸ್ಯೆ ಕಾಡುವುದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

ಕೋಟೆ, ಸರಗೂರಲ್ಲಿ ಸಾರಾಯಿ ದಂಧೆ ತಡೆಗೆ ಕ್ರಮ

ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಅಡಿಷನಲ್ ಎಸ್ಪಿ ಡಾ. ನಂದಿನಿ ಭರವಸೆ



ಸರಗೂರು, ಡಿ.16– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಸಾರಾಯಿ ದಂಧೆಯನ್ನು ತಡೆದು, ಪೊಲೀಸರ ರಾತ್ರಿ ಬೀಟ್ ಹೆಚ್ಚಿಸುವುದರೊಂದಿಗೆ ರಸ್ತೆ ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಅಡಿಷನಲ್ ಎಸ್ಪಿ ಡಾ. ಬಿ.ಎನ್.ನಂದಿನಿ ಅವರು ಭರವಸೆ ನೀಡಿದ್ದಾರೆ.

ಪಟ್ಟಣದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಅಂಗ–ಸಂಸ್ಥೆಯಾದ ಜನಧ್ವನಿ ಸಮುದಾಯ ಬಾನುಲಿ ಕೇಂದ್ರದಲ್ಲಿ ಕಾನೂನು ಸುವ್ಯವಸ್ಥೆಗಳ ಕುರಿತು ಏರ್ಪಡಿಸಲಾಗಿದ್ದ ನೇರ ಸಂದರ್ಶನ ಫೋನ್ ಇನ್ ಕಾರ್ಯಕ್ರಮದಲ್ಲಿ ಗ್ರಾಮಸ್ಥರ ಪ್ರಶ್ನೆಗಳಿಗೆ ಉತ್ತರಿಸಿ ಅವರು ಮಾತನಾಡಿದರು.

ಪೊಲೀಸ್ ಇಲಾಖೆಯು ದಿನದ 24 ಘಂಟೆಯು ಸಾರ್ವಜನಿಕರ ಸೇವೆಗೆ ಸನ್ನದ್ಧವಾಗಿದೆ. ಯಾವುದೇ ಗ್ರಾಮ ಪಟ್ಟಣಗಳಿಂದ ದೂರು ಬಂದ 20 ನಿಮಿಷದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗಳಿಗೆ ಸ್ಪಂದಿಸುವ ವ್ಯವಸ್ಥೆಯನ್ನು ಮಾಡಿದೆ, ಪೊಲೀಸ್ ಇಲಾಖೆಯು ಜನಸ್ನೇಹಿ ಇಲಾಖೆಯಾಗಿ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸುತ್ತಿದೆ ಎಂದರು.

ಅಪರಾಧ ತಡೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಯಾವುದೇ ಸ್ಟೇಷನ್‌ಗೆ ಹೋದಾಗ ಸ್ವಾಗತಕಾರರು ಕೂರಿಸಿ ಸಮಸ್ಯೆಗಳನ್ನು ಕೇಳುವ ವ್ಯವಸ್ಥೆ ಸುಧಾರಣೆಯಾಗಿದೆ. ಗ್ರಾಮಗಳಲ್ಲಿ ಅಪರಾಧಗಳು ಕಂಡು ಬಂದಾಗ ನಮ್ಮ ಗಸ್ತು ಪೊಲೀಸರು ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರ ಜೊತೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸುತ್ತಿದ್ದಾರೆ, ಇತ್ತೀಚಿನ ದಿನಗಳಲ್ಲಿ ಸೈಬರ್ ಕ್ರೈಮ್ ಹೆಚ್ಚಾಗುತ್ತಿದ್ದು, ಅನ್ಯ ವ್ಯಕ್ತಿಗಳು ಕರೆ ಮಾಡಿ ಓ.ಟಿ.ಪಿಯನ್ನು ಕೇಳಿದಾಗ ಹಂಚಿಕೊಳ್ಳದೆ ಇದರ ಬಗ್ಗೆ ಸದಾ ಜಾಗೃತಿವಹಿಸುವಂತೆ ತಿಳಿಸಿದರು.

ಇಂತಹ ಘಟನೆಗಳು ಸಂಭವಿಸಿದಾಗ 1 ಗಂಟೆಯ (ಗೋಲ್ಡನ್ ಅವರ್) ಒಳಗೆ ಸ್ಟೇಷನ್‌ಗೆ ಮಾಹಿತಿ ನೀಡುವಂತೆ ತಿಳಿಸಿದ ಅವರು, ರಸ್ತೆ ಸುರಕ್ಷತೆ ಪಾಲನೆ, ಡಿಸೆಂಬರ್ ತಿಂಗಳಲ್ಲಿ ಅಪರಾಧ ಮಾಸಾಚರಣೆ ಮಾಡುತ್ತಿದ್ದು ಸಾರ್ವಜನಿಕರು ಸಹಕರಿಸಬೇಕು, ಅಧಿಕಾರಿಗಳು ಠಾಣೆಯಲ್ಲಿ ಸಾರ್ವಜನಿಕ ಕುಂದು ಕೊರತೆ ಸಭೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಭೆಯನ್ನು ಆಯೋಜಿಸುತ್ತಿದ್ದು ಪ್ರತಿಯೊಬ್ಬರು ಸಹಕರಿಸುವಂತೆ ಕೋರಿದರು.

ಫೋನ್ ಇನ್ ಕಾರ್ಯಕ್ರಮಕ್ಕೆ ಬಸನಗಿರಿ ಹಾಡಿ ಜಿ. ಸ್ವಾಮಿ, ಮಹಾದೇವ ಶೆಟ್ಟಿ ಟಿ. ನರಸೀಪುರ, ರಾಜು ಸರಗೂರು, ಗಣೇಶ್ ಸಾಗರೆ, ಯೋಗೇಂದ್ರ ಪ್ರಸಾದ್, ರೇಣುಕಾ, ವಿನೋದ್, ನಾಗರಾಜು ಮಾಗುಡಿಲು, ಕೆ.ವಿ. ಭಾಸ್ಕರ್, ಹುಣಸಕುಪ್ಪೆ ನಾಗರಾಜು ಕರೆ ಮಾಡಿ ತಾಲೂಕಿನಲ್ಲಿ ನಡೆಯುವ ಅಕ್ರಮ ಸಾರಾಯಿ, ರಸ್ತೆ ಸುರಕ್ಷತೆ ನಿಯಮ ಪಾಲನೆ, ಪೊಲೀಸ್ ಬಿಟ್, ಎಫ್.ಐ.ಆರ್. ದಾಖಲು ಇನ್ನಿತರ ವಿಚಾರಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಕಾರ್ಯಕ್ರಮವನ್ನು ಜನಧ್ವನಿ ರೇಡಿಯೋ ಕೇಂದ್ರದ ವ್ಯವಸ್ಥಾಪಕ ನಿಂಗರಾಜು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಡಾ.ಕುಮಾರ್ ಜಿ.ಎಸ್ ಹಾಗೂ ಜನಧ್ವನಿ ಬಾನುಲಿ ಕೇಂದ್ರದ ಸಿಬ್ಬಂದಿಗಳಾದ ಶಿವಲಿಂಗ್, ನೀಲಾವತಿ, ಶ್ರೀಕಾಂತ್, ಅನಿತಾ, ಸೋಮೇಶ್ ಹಾಗೂ ಸ್ಫೂರ್ತಿ ಉಪಸ್ಥಿತರಿದ್ದರು.

ನಂಜನಗೂಡು ನಗರಸಭೆ ಉಪ ಚುನಾವಣೆ

ಜೆಡಿಎಸ್ ಅಭ್ಯರ್ಥಿ ಸುಬ್ರಹ್ಮಣ್ಯ ನಾಮಪತ್ರ ಸಲ್ಲಿಕೆ

ನಂಜನಗೂಡು, ಡಿ.16– ನಗರ ಸಭೆಯ 20ನೇ ವಾರ್ಡ್‌ಗೆ ಡಿ.27 ರಂದು ನಡೆಯಲಿರುವ ಉಪ ಚುನಾವಣೆಗೆ ಜೆ.ಡಿ.ಎಸ್ ಅಭ್ಯರ್ಥಿಯಾಗಿ ಸುಬ್ರಹ್ಮಣ್ಯ ಶುಕ್ರವಾರ ಚುನಾವಣಾಧಿಕಾರಿ ಕೃಷ್ಣ ಅವರಿಗೆ ನಾಮಪತ್ರ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸುಬ್ರಹ್ಮಣ್ಯ, ಕಳೆದ ಬಾರಿ ನಗರಸಭೆಗೆ ನಡೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ 51 ಮತಗಳ ಅಂತರದಿಂದ ಪರಾಭವಗೊಂಡಿದ್ದೆ, ಈ ಬಾರಿ ಇದೇ ವಾರ್ಡ್‌ನಿಂದ ಜಾತ್ಯಾತೀತ ಜನತಾದಳದ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದೇನೆ. ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ ಅವರ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತಿದ್ದೇನೆ. 20ನೇ ವಾರ್ಡ್‌ನಲ್ಲಿ 850 ಮತದಾರರಿದ್ದು, ಮತದಾರರನ್ನು ನೇರವಾಗಿ ಭೇಟಿಯಾಗಿ ಮತಯಾಚನೆ ಮಾಡುತ್ತಿದ್ದೇನೆ, ವಾರ್ಡ್‌ನ ಮತದಾರರ ಆಶೀರ್ವಾದದಿಂದ ಈ ಬಾರಿ ಗೆಲ್ಲುವ ಅವಕಾಶ ಹೆಚ್ಚಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಾತ್ಯಾತೀತ ಜನತಾದಳದ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ತಾಲೂಕು ಅಧ್ಯಕ್ಷ ಆರ್.ವಿ.ಮಹದೇವಸ್ವಾಮಿ, ಸಂಜುಗೌಡ, ಉಪಸ್ಥಿತರಿದ್ದರು.



ನಂಜನಗೂಡು ನಗರಸಭೆಯ 20 ನೇ ವಾರ್ಡ್‌ಗೆ ಡಿ.27 ರಂದು ನಡೆಯಲಿರುವ ಉಪಚುನಾವಣೆಯಲ್ಲಿ ಜೆ.ಡಿ.ಎಸ್ ಅಭ್ಯರ್ಥಿಯಾಗಿ ಸುಬ್ರಹ್ಮಣ್ಯ ಶುಕ್ರವಾರ ಚುನಾವಣಾಧಿಕಾರಿ ಕೃಷ್ಣರವರಿಗೆ ನಾಮಪತ್ರ ಸಲ್ಲಿಸಿದರು.

ತಿ.ನರಸೀಪುರ ಕೆಎಸ್‌ಐಸಿ ಮುಂದೆ ದಸಂಸ ಪ್ರತಿಭಟನೆ

ಕೆಲಸದಿಂದ ತೆಗೆದಿರುವ ಹೊರಗುತ್ತಿಗೆ ನೌಕರರ ನೇಮಕಕ್ಕೆ ಆಗ್ರಹ



ತಿ.ನರಸೀಪುರ, ಡಿ.16– ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್ (ಕೆಎಸ್‌ಐಸಿ) ಕಾರ್ಖಾನೆಯಲ್ಲಿ ತೆಗೆದು ಹಾಕಿರುವ ಹೊರಗುತ್ತಿಗೆ ಕಾರ್ಮಿಕರ ಮರುನೇಮಕಕ್ಕೆ ಆಗ್ರಹಿಸಿ ಹಾಗೂ ಕಾರ್ಮಿಕರ ಶೋಷಣೆ ಮತ್ತು ದಲಿತ ವಿರೋಧಿತನ ಖಂಡಿಸಿ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಮುಖಂಡರು, ಕಾರ್ಯಕರ್ತರು ಪಟ್ಟಣದ ಕೆಎಸ್‌ಐಸಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಮೈಸೂರು ಮುಖ್ಯರಸ್ತೆಯ ಕೆಎಸ್‌ಐಸಿ ಮುಂಭಾಗ ಜಮಾವಣೆಗೊಂಡ ಕಾರ್ಯಕರ್ತರು ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಉಮಾ ಮಹದೇವ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾಸಗೀಕರಣ, ಹೊರಗುತ್ತಿಗೆ ಹೆಸರಿನಲ್ಲಿ ಸಾರ್ವಜನಿಕ ಸಂಸ್ಥೆಗಳಲ್ಲಿ ಮೀಸಲಾತಿ ಅನುಸರಿಸದೇ ನೇಮಕಾತಿ ಮಾಡುವ ಮೂಲಕ ಮೀಸಲಾತಿ ವಂಚಿಸುತ್ತಾ ಬಂದಿವೆ. ಹೊರಗುತ್ತಿಗೆಯಲ್ಲಿ ಕಾರ್ಮಿಕರ ಶೋಷಣೆಗೆ ಒಳಪಡಿಸುವ ಉದ್ದೇಶವಿದೆ. ಈ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಿಂದ ನಿರಂತರ ಹೋರಾಟ ಮಾಡುತ್ತಲೇ ಬಂದಿದ್ದೇವೆ. ಸರ್ಕಾರ ಗಂಭೀರವಾಗಿ ಪರಿಗಣಿಸದ ಕಾರಣ ಇಂದು ಹೊರಗುತ್ತಿಗೆ ಕಾರ್ಮಿಕರು ಶೋಷಣೆ ಅನುಭವಿಸುವಂತಾಗಿದೆ ಎಂದರು.

ಪಟ್ಟಣದ ಕೆಎಸ್‌ಐಸಿಯಲ್ಲಿ ಉಸ್ತುವಾರಿ ಪ್ರಧಾನ ವ್ಯವಸ್ಥಾಪಕ ತಮ್ಮ ವೈಯಕ್ತಿಕ ಪ್ರತಿಷ್ಠೆಯಿಂದ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಬೇಜವಾಬ್ದಾರಿಯಿಂದ ಕೆಎಸ್‌ಎಫ್ –9 ಎಂಬ ಖಾಸಗಿ ಏಜೆನ್ಸಿ ಮೂಲಕ ಹೊರಗುತ್ತಿಗೆಯಡಿ ಕೆಲಸ ಮಾಡುತ್ತಿದ್ದ ಬಡ ಕಾರ್ಮಿಕರನ್ನು ಕ್ಷುಲ್ಲಕ ಕಾರಣದಿಂದ ಕೆಲಸದಿಂದ ತೆಗೆದಿದ್ದು, ನೊಂದ ಕಾರ್ಮಿಕ ನಿಂಗರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿದ್ದಾರೆ. ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಿಂದ ಹೊರ ತೆಗೆದಿರುವ ಕಾರ್ಮಿಕರನ್ನು ಮರು ನೇಮಕಾತಿ ಮಾಡಿಕೊಳ್ಳಬೇಕೆಂದು ನಿರ್ದೇಶನ ನೀಡಿದ್ದನ್ನೇ ನೆಪ ಮಾಡಿಕೊಂಡು ಹೊರಗಿನಿಂದ ಶಿಫಾರಸ್ಸು ಮಾಡಿಸಿದ್ದಕ್ಕೆ ನಾನು ನಿನ್ನನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ವೈಯಕ್ತಿಕ ಪ್ರತಿಷ್ಠೆಯಾಗಿ ತೆಗೆದುಕೊಂಡು ನೊಂದ ಕಾರ್ಮಿಕರ ಮೇಲೆ ಮತ್ತಷ್ಟು ಶೋಷಣೆ ಮಾಡುತ್ತಿದ್ದಾರೆಂದು ಅವರು ಆರೋಪಿಸಿದರು.

ಖಾಸಗಿ ಏಜೆನ್ಸಿ ಅವರ ವಿರುದ್ಧ ಕ್ರಮ ಕೈಗೊಂಡು ನ್ಯಾಯ ನೀಡಬೇಕೆಂದು ನಮ್ಮ ಸಮಿತಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಕಳೆದ ಮೂರು ತಿಂಗಳ ಹಿಂದೆಯೇ ಮನವಿ ಮಾಡಿದ್ದೇವೆ. ಅವರು ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಪ್ರತಿಭಟನೆಯ ಹಾದಿ ಹಿಡಿಯಬೇಕಾಯಿತು ಎಂದರು,

ಪ್ರತಿಭಟನೆಯಲ್ಲಿ ಮಹದೇವ, ಆಲತ್ತೂರು ಶಿವರಾಜು, ಎಚ್.ಅಶೋಕ್, ಮರಕೂಡು ಸಣ್ಣತಾಯಮ್ಮ, ಚೆಂದಳ್ಳಿ ಮಲ್ಲೇಶ್, ಕೇತುಪುರ ರವೀಂದ್ರ, ಆಲಗೂಡು ನಾಗರಾಜು, ಮರಡಿಪುರ ಮಲ್ಲಿಕಾರ್ಜುನ, ಲತಾ, ಸರೋಜಮ್ಮ, ಮತ್ತಿತರರು ಉಪಸ್ಥಿತರಿದ್ದರು.

ಉಪ ಚುನಾವಣೆಯಲ್ಲಿ ಬಿಜೆಪಿ ಗೆಲುವು ಖಚಿತ



ನಂಜನಗೂಡು, ಡಿ.16– ನಂಜನಗೂಡು ನಗರ ವ್ಯಾಪ್ತಿಯಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಬೆಂಬಲಿಸಿ ನಗರಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಮತದಾರರು ಗೆಲ್ಲಿಸಿಕೊಡಲಿದ್ದಾರೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ವಿಶ್ವಾಸ ವ್ಯಕ್ತಪಡಿಸಿದರು.

ಶುಕ್ರವಾರ ನಗರಸಭೆ 20ನೇ ವಾರ್ಡಿನ ಬಿಜೆಪಿ ಅಭ್ಯರ್ಥಿಯಾಗಿ ಉಪ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸಿದ ಪಿ.ಮಹೇಶ್ ಅತ್ತಿಖಾನೆಯೊಡನೆ ನಗರದ ತಾಲೂಕು ಕಚೇರಿಗೆ ಆಗಮಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಕಳೆದ ಬಾರಿ ವಾರ್ಡಿನ ಮತದಾರರು ಬಿಜೆಪಿಯನ್ನು ಬೆಂಬಲಿಸಿದ್ದರು. ಉಪ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಕೀಲ ಮಹೇಶ್ ಅತ್ತಿಖಾನೆ ಶಿಕ್ಷಣ ಕ್ಷೇತ್ರದಲ್ಲಿ ಸುಮಾರು 15 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದು, ಅಭ್ಯರ್ಥಿ ಎಂಬ ಹಿರಿಮೆಯನ್ನು ಗಳಿಸಿದ್ದಾರೆ. ಅಭಿವೃದ್ಧಿಯನ್ನೇ ಮಾನದಂಡವಾಗಿಸಿಕೊಂಡು ಮತದಾರರ ಮನವೊಲಿಸಲಾಗುವುದು. ಇನ್ನು ಉಪ ಚುನಾವಣೆಯಲ್ಲಿ ಪಕ್ಷದ ಕಾರ್ಯಕರ್ತರೆಲ್ಲರೂ ಒಟ್ಟಾಗಿ ಅಭ್ಯರ್ಥಿ ಪರ ಕೆಲಸ ನಿರ್ವಹಿಸಲಿದ್ದು ಮಹೇಶ್ ಅತ್ತಿಖಾನೆ ನಿಶ್ಚಿತವಾಗಿ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ಪಿ.ಮಹೇಶ್ ಅತ್ತಿಖಾನೆ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಬಿಜೆಪಿಯಲ್ಲಿ ತಳ ಮಟ್ಟದಲ್ಲಿ ಕೆಲಸ ನಿರ್ವಹಿಸಿದ್ದೇನೆ. ಮತದಾರರ ಸೇವೆ ಮಾಡುವ ಉದ್ದೇಶದೊಂದಿಗೆ ಪಕ್ಷದ ಕಾರ್ಯಕರ್ತರ ಬೆಂಬಲದೊಂದಿಗೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದು ಖಂಡಿತ ಮತದಾರರು ಬೆಂಬಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿಜೆಪಿ ಮಂಡಲ ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ವಿನಯ್‌ಕುಮಾರ್, ಕೆ.ಜಿ.ಆನಂದ್, ಪ್ರೇಮಾ ಶಂಭಯ್ಯ, ಬಾಲಚಂದ್ರು, ಸಂಜಯ್‌ಶರ್ಮಾ, ರಾಘವೇಂದ್ರ, ಉಮೇಶ್‌ಮೋದಿ, ಎನ್.ಸಿ.ಬಸವಣ್ಣ, ಮಹೇಶ್, ಮೊದಲಾದವರು ಉಪಸ್ಥಿತರಿದ್ದರು.

ಮೈಸೂರಿನ ಕೆಲವೆಡೆ ನೀರು ಪೂರೈಕೆ ವ್ಯತ್ಯಯ

ಮೈಸೂರು: ಭಾನುವಾರ ಮೈಸೂರಿನ ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಪುಲಿಕೇಶಿ ರಸ್ತೆ ಮಂಡಿಮೊಹಲ್ಲಾ, ವೀರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್ ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಲಷ್ಕರ್ ಮೊಹಲ್ಲಾ ಭಾಗಶಃ, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್‌ನಗರ, ಮೀನಾಬಜಾರ್, ಹಾಗೂ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶಗಳು ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜು ಇರುವುದಿಲ್ಲ.

ಕೆ.ಆರ್.ನಗರದ ಎಲ್ಲಾ ವಾರ್ಡುಗಳಿಗೂ ಮೂಲಸೌಕರ್ಯ ಕಲ್ಪಿಸಲು ಅನುದಾನ



ಕೆ.ಆರ್.ನಗರ, ಡಿ.16– ಪುರಸಭೆಯ ಎಲ್ಲಾ 23 ವಾರ್ಡುಗಳಿಗೂ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಮುಂದಿನ ದಿನಗಳಲ್ಲಿ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ 2ನೇ ವಾರ್ಡಿನಲ್ಲಿ 15ನೇ ಹಣಕಾಸು ಯೋಜನೆಯಡಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಚಾಲನೆ ನೀಡಿ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೊಸ ಬಡಾವಣೆಗಳಿಗೆ ಯುಜಿಡಿ ಸಂಪರ್ಕ ಕಲ್ಪಿಸಲು 20 ಕೋಟಿ ರೂ ಮಂಜೂರು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕಳೆದ ವಾರ ನಡೆದ ಸಚಿವ ಸಂಪುಟದ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ದೊರೆತಿದೆ ಎಂದರು.

ನಗರದ ಜನತೆಗೆ ಸಮರ್ಪಕವಾದ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿಗೆ ಈಗಾಗಲೇ ಸರ್ಕಾರದಿಂದ ಅಮೃತ ಯೋಜನೆಯಡಿ 30 ಕೋಟಿ ರೂ ಅನುದಾನ ಬಿಡುಗಡೆಯಾಗಿದ್ದು, ಆ ಹಣದಲ್ಲಿ 4 ಓವರ್‌ಹೆಡ್ ಟ್ಯಾಂಕ್, ಎರಡು ನೀರು ಶುದ್ಧೀಕರಣ ಘಟಕ ಸೇರಿದಂತೆ ಕಾವೇರಿ ನದಿಯಿಂದ ಪೈಪ್‌ಲೈನ್ ಕೆಲಸ ಮಾಡುವುದರ ಜತೆಗೆ ಇದರ ಅಗತ್ಯ ಕಾಮಗಾರಿಗಳನ್ನು ಮಾಡಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪುರಸಭೆ ಸದಸ್ಯ ಕೋಳಿಪ್ರಕಾಶ್, ಮುಖ್ಯಾಧಿಕಾರಿ ಡಾ.ಜಯಣ್ಣ ಮಾತನಾಡಿದರು. ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಕೆ.ಜಿ.ಸುಬ್ರಮಣ್ಯ ಸದಸ್ಯರಾದ ಶಿವುನಾಯಕ, ನಟರಾಜು, ಶಂಕರ್‌ಸ್ವಾಮಿ, ಮಾಜಿ ಸದಸ್ಯ ಕೆ.ವಿನಯ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಹೆಚ್.ಹೆಚ್.ನಾಗೇಂದ್ರ, ಎಂ.ಲೋಕೇಶ್, ಕೆಂಚಿಮಂಜು, ಎಸ್.ಸಾಗರ್, ಪುರಸಭೆ ಇಂಜಿನಿಯರ್‌ಗಳಾದ ಕೆ.ಆರ್.ಚಂದ್ರಶೇಖರ್, ಸೌಮ್ಯ, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜಿ.ರಮೇಶ್, ಮತ್ತಿತರರು ಹಾಜರಿದ್ದರು.

ಜ್ಞಾನ ವೃದ್ಧಿಸಿಕೊಂಡರೆ ದೇಶದಲ್ಲಿ ಎಲ್ಲಿ ಬೇಕಾದರೂ ಬದುಕಬಹುದು

ಅಪರ ಜಿಲ್ಲಾ ವರಿಷ್ಠಾಧಿಕಾರಿ ಡಾ.ಬಿ.ಎನ್. ನಂದಿನಿ ಅಭಿಪ್ರಾಯ



ಹೆಚ್.ಡಿ.ಕೋಟೆ, ಡಿ.16– ಸಾಧಕರಿಗೆ ಸನ್ಮಾನ ಮಾಡುವಾಗ ನಾನು ಅವರಂತೆ ಸಾಧನೆ ಮಾಡಬೇಕು ಎಂದು ಅಂದುಕೊಂಡಾಗ ಮಾತ್ರ ಸಾಧನೆ ಮಾಡಲು ಸಾಧ್ಯ. ಅದೇ ರೀತಿ ಜ್ಞಾನ ವೃದ್ಧಿಸಿಕೊಂಡರೆ ದೇಶದಲ್ಲಿ ಎಲ್ಲಿ ಬೇಕಾದರೂ ಬದುಕಬಹುದು ಎಂದು ಅಡಿಷನಲ್ ಎಸ್ಪಿ ಡಾ.ಬಿ.ಎನ್. ನಂದಿನಿ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಆಯೋಜಿಸಲಾಗಿದ್ದ ಪ್ರಥಮ ಬಿ.ಎ ಮತ್ತು ಬಿಕಾಂ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಮತ್ತು ಎನ್.ಎಸ್.ಎಸ್ ಕಾರ್ಯ ಚಟುವಟಿಕೆಯ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಲಿಕೆ ಎನ್ನುವುದು ನಿರಂತರವಾಗಿರಬೇಕು, ಒಬ್ಬ ಮನುಷ್ಯ ಜನನದಿಂದ ಮರಣದವರೆಗೂ ಸಹ ಭೂಮಿಯ ಮೇಲೆ ನಿತ್ಯ ಕಲಿಯುವುದು ಇದ್ದೇ ಇರುತ್ತದೆ. ಆರ್ಥಿಕವಾಗಿ ಸಬಲೀಕರಣ ಹೊಂದುವ ಮೂಲಕ ಕುಟುಂಬ ಮಾತ್ರವಲ್ಲದೇ ನಿಮ್ಮ ಗ್ರಾಮವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಮಾದರಿ ವ್ಯಕ್ತಿಗಳಾಗಿ ಎಂದರು.

ಮೊಬೈಲ್ ಗೀಳು ಎಷ್ಟರ ಮಟ್ಟಿಗೆ ಇಂದು ಪರಿಣಾಮಕಾರಿಯಾಗಿದೆ ಎಂದರೆ, ನಿಮ್ಹಾನ್ಸ್‌ನಲ್ಲಿ ಮೊಬೈಲ್ ಗೀಳು ಬಿಡಿಸಲು ಪ್ರತ್ಯೇಕ ವಿಭಾಗವನ್ನೇ ತೆರೆಯಲಾಗಿದೆ ಎಂದು ತಿಳಿಸಿದ ಅವರು, ಸಾಮಾಜಿಕ ಜಾಲತಾಣದಲ್ಲಿ ಇಂದು ವಂಚನೆ ಪ್ರಕರಣಗಳು ಹೆಚ್ಚು ಹೆಚ್ಚು ನಡೆಯುತ್ತಿವೆ. ಈ ಪ್ರಕರಣ ಹತೋಟಿಗೆ ತರಲು ಯುವ ಸಮೂಹದಿಂದ ಮಾತ್ರ ಸಾಧ್ಯ. ಅದನ್ನು ನೀವು ಸಾಬೀತು ಮಾಡಬೇಕು ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ, ಮಾತನಾಡಿ, ವಿದ್ಯೆ ಎಂಬುದು ಮನುಷ್ಯನನ್ನು ಸುಂದರಗೊಳಿಸುತ್ತದೆ. ಯಾವ ಮಾದರಿಯಲ್ಲಿ ಸುಂದರಗೊಳಿಸುತ್ತದೆ ಎಂದರೆ ಭಾವನಾತ್ಮಕವಾಗಿ, ಸಮಾಜವನ್ನು ನೋಡುವಂತ ಕಣ್ಣನ್ನು ಸುಂದರಗೊಳಿಸುತ್ತದೆ. ಮತ್ತೊಬ್ಬ ಸ್ನೇಹಿತರನ್ನು ಪ್ರೀತಿಸುವಂಥ ಭಾವನೆಗಳನ್ನು ಸುಂದರಗೊಳಿಸುತ್ತದೆ. ನಾವು ಕಲಿತಂತ ವಿದ್ಯೆಯನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ನಮ್ಮ ಕೊನೆಯ ಉಸಿರಿರುವವರೆಗೂ ನಾವು ಕಲಿತಿರುವ ವಿದ್ಯೆ ನಮ್ಮೊಂದಿಗೆ ಇರುತ್ತದೆ ಎಂದು ತಿಳಿಸಿದರು.

ಪ್ರತಿಭಾ ಪುರಸ್ಕಾರ: ನನ್ನ ಮಣ್ಣು ನನ್ನ ದೇಶ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೀರ್ತಿ ತಂದ ಅಭಿಗೌಡ, ಅಂತರ ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಭಾನುಮತಿ, ಬಿಕಾಂ ವಿಭಾಗದಲ್ಲಿ ಹೆಚ್ಚು ಅಂಕ ಗಳಿಸಿದ ಸಂಗಿತಾ ಎನ್, ಐಟಿ ವಿಭಾಗದಲ್ಲಿ ಸಹನಾಭಾಯಿ, ವಾಣಿಜ್ಯ ತೆರಿಗೆ ವಿಭಾಗದಲ್ಲಿ ನೂರು ಅಂಕ ಪಡೆದ ಮದನ ಚಂದನ್ ಎಚ್.ಆರ್. ಹೇಮಂತ್ ಜಿ, ಅಪೂರ್ವ ಎಸ್.ಎಸ್. ಅಶ್ವಿನಿ, ಕವಿತಾ ಮಹಮ್ಮದ್ ಆಲಿಷ್, ಶ್ರೀಹರಿ, ನಿಶ್ಚಿತ, ರಾಧಿಕಾ ಕೆ.ಆರ್, ಮೇಘನಾ, ಪೂರ್ಣಿಮಾ, ಸ್ವಪ್ನ, ಚಿತ್ರ, ಲಾವಣ್ಯ, ನೇತ್ರಾವತಿ, ರಚಿತ ಎಂ, ಚೈತ್ರ ಎಂ, ಸೋಮು ಎಂ, ಸಿದ್ದರಾಜು ಬಿ ಸೇರಿದಂತೆ ವಿವಿಧ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಪ್ರೊ.ಕೆ.ಪಿ. ಬಸವೇಗೌಡ, ಪ್ರಾಂಶುಪಾಲ ಜೆ.ಎನ್. ವೆಂಕಟೇಶ್, ಪ್ರೊ.ಚಂದ್ರೇಗೌಡ, ಎನ್‌ಎಸ್‌ಎಸ್ ಕಾರ್ಯಕ್ರಮ ಸಂಶೋಧನಾಧಿಕಾರಿ ಡಾ.ಎಂ.ಬಿ. ಸುರೇಶ್, ನಾರಾಯಣ್, ಆರಕ್ಷಕ ನಿರೀಕ್ಷಕ ಶಬ್ಬೀರ್ ಹುಸೇನ್, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್ ಗೌಡ, ಚನ್ನಕೇಶವ, ಅಂಕಪ್ಪ ಎ.ಸಿ.ಬೈರಪ್ಪ ರಾಜೇಶ್, ಸೋಮೇಶ್, ಸಿದ್ದೇಗೌಡ, ರಾಮಚಂದ್ರ, ರವಿ, ಚಂದನ, ನರಸಿಂಹೇಗೌಡ, ಅಮೂಲ್ಯ, ಪ್ರಕಾಶ್ ನಾಯಕ, ಮಾದೇವ, ಅವಿನ, ಕಾವ್ಯಬಾಯಿ, ಚಿಕ್ಕದೇವಿ, ಚೈತ್ರ, ರಮ್ಯ, ಮಹೇಂದ್ರ, ಮಹೇಶ್, ಮಕ್ಕಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಫೈಟ್ ಕ್ಲಬ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾಯಾ ನಗರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಜರುಗಾ ಹುಷಾರುಗಾ(ತೆ)	4 ಪ್ರದರ್ಶನಗಳು
ಸಂಗಂ	
ಸ್ನೇಹರ್ಷಿ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಪ್ತಸಾಗರದಾಚೆ ಎಲ್ಲೋ–ಸೈಡ್ ಬಿ(ಕ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ,
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರಗೂರು ಶಾಲೆಗಳ ಸನಿಹ ಗಬ್ಬೆದ್ದು ನಾರುವ ರಸ್ತೆ

ಮೂಗು ಮುಚ್ಚಿಕೊಂಡು ತಿರುಗಾಡುತ್ತಿರುವ ವಿದ್ಯಾರ್ಥಿಗಳು



ಸರಗೂರು, ಡಿ.16– ಆರೋಗ್ಯವಿರುವುದೇ ಸ್ವಚ್ಛತೆಯಲ್ಲಿ. ಸ್ವಚ್ಛ ಪರಿಸರದ ಬಗ್ಗೆ ಹತ್ತಾರು ಘೋಷಣೆಗಳು ಸಾಮಾನ್ಯ. ಪ್ರಾಥಮಿಕ ಶಾಲಾ ಹಂತದಿಂದಲೇ ಸ್ವಚ್ಛತಾ ಕ್ರಮಗಳ ಬಗ್ಗೆ ಪಾಠಗಳು, ಶುದ್ಧಗಾಳಿ, ಶುದ್ಧ ಆಹಾರ, ಆರೋಗ್ಯಪೂರ್ಣ ಜೀವನಕ್ಕೆ ಅತ್ಯಂತ ಅಗತ್ಯ ಕೂಡ. ಆದರೆ ಇದು ಕೇವಲ ಮಾತುಗಳಲ್ಲಿ ಉಳಿದುಕೊಂಡಿದೆ.

ಪಟ್ಟಣದಲ್ಲಿ ಇದಕ್ಕೆ ತದ್ವಿರುದ್ಧವಾದ ವಾತಾವರಣವಿದೆ. ಮೂರು ಶಾಲೆಗಳ ಸನಿಹವೇ ಹಾದು ಹೋಗಿರುವ ರಸ್ತೆಯಲ್ಲಿ ಸಹಿಸಲು ಸಾಧ್ಯವಾಗದಷ್ಟು ಮಾಲಿನ್ಯದಿಂದ ಕೂಡಿದ್ದು, ಸಾರ್ವಜನಿಕರಷ್ಟೆ ಅಲ್ಲ, ಶಾಲಾ ಮಕ್ಕಳು ಓಡಾಡಲಾಗದ ಅಸಹನೀಯ ವಾತಾವರಣದಿಂದ ಕೂಡಿದೆ.

ರಸ್ತೆ ಬದಿ ಮಲ ಮೂತ್ರ ವಿಸರ್ಜಿಸುವ ಹಾಗೂ ತ್ಯಾಜ್ಯಗಳನ್ನು ಬಿಸಾಡುವ ತಾಣವಾಗಿ ಮಾರ್ಪಟ್ಟಿದೆ ಇದು ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ ಹಾಗೂ ಸರ್ಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆ, ಇದರ ಮುಂದೆ ಶ್ರೀ ದೇವರಾಜ ಸ್ವಾಮಿ ವಿದ್ಯಾಸಂಸ್ಥೆ ಇರುವ ರಸ್ತೆಯಲ್ಲೇ ಈ ರೀತಿಯ ಅನಾರೋಗ್ಯಕರ ವಾತಾವರಣವಿದೆ.

ಮಾಲಿನ್ಯ ತಡೆಗೆ ಮಾಡಿದ ಮನವಿಗೂ ಸ್ಪಂದಿಸದಷ್ಟು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇಲ್ಲಿದ್ದಾರೆ. ದುರ್ವಾಸನೆಯಿಂದಾಗಿ ಮೂಗು ಮುಚ್ಚಿಕೊಂಡು ಅನಿವಾರ್ಯವಾಗಿ ಓಡಾಡಬೇಕಾದ ಪರಿಸ್ಥಿತಿ ಇದೆ. ಶಾಲೆಗೆ ಬರುವ ಮಕ್ಕಳು ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಗಮಿಸುವ ಗಣ್ಯರಿಗೂ ಮುಜುಗರವಾಗುವ ಸನ್ನಿವೇಶ ಇಲ್ಲಿದೆ. ಇಂತಹ ದಯನೀಯ ಸ್ಥಿತಿ ಕಂಡೂ ಕಾಣದಂತೆ ವರ್ತಿಸುತ್ತಿರುವುದು ಆಶ್ಚರ್ಯಕರ ಸಂಗತಿಯಾಗಿದೆ.

ಸ್ಥಳೀಯ ಆಡಳಿತ ಸಂಸ್ಥೆಗಳ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಈಗಲಾದರೂ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ರಸ್ತೆ ಮಾಲಿನ್ಯ ತಡೆಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಇಂದು, ನಾಳೆ ನೀರು ವ್ಯತ್ಯಯ

ಮೈಸೂರು, ಡಿ.16– ನಂಜನಗೂಡು ನಗರಸಭೆ ವ್ಯಾಪ್ತಿಯ ದೇವಿರಮ್ಮನಹಳ್ಳಿ ಬಡಾವಣೆಯಲ್ಲಿರುವ ಕುಡಿಯುವ ನೀರು ಸರಬರಾಜು ಮಾಡುವ ನೀರು ಶುದ್ಧೀಕರಣ ಘಟಕದಲ್ಲಿರುವ ನೀರಿನ ಟ್ಯಾಂಕ್ ಸ್ವಚ್ಛಗೊಳಿಸಬೇಕಾಗಿರುವುದರಿಂದ ಡಿ.17 ಮತ್ತು 18ರಂದು ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ನಂಜನಗೂಡು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು,ಡಿ.16– ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು beedi/cine, Limestone& dolomite ಗಣಿಗಳ ಮೆಟ್ರಿಕ್ ಪೂರ್ವ ಯೋಜನೆಯ ವಾರ್ಡ್‌ಗಳಿಗೆ ಶಿಕ್ಷಣಕ್ಕಾಗಿ ಹಣಕಾಸಿನ ನೆರವಿಗೆ ಸಂಬಂಧಿಸಿದಂತೆ ಸಂಸ್ಥೆಯಿಂದ ಅರ್ಜಿ ಸಲ್ಲಿಸಲು ಮತ್ತು ಪರಿಶೀಲನೆ ಅವಧಿಯನ್ನು ವಿಸ್ತರಿದೆ. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ beedi/cine/ IOMC/LSDM ಕೆಲಸಗಾರರ ಶಿಕ್ಷಣಕ್ಕಾಗಿ ಆರ್ಥಿಕ ನೆರವಿಗೆ ಅರ್ಜಿ ಸಲ್ಲಿಸಲು ಡಿ.31 ಕೊನೆಯ ದಿನಾಂಕವಾಗಿದ್ದು, INO ಮಟ್ಟದ ಪರಿಶೀಲನೆಗೆ 2024 ಜನವರಿ 15 ಕೊನೆಯ ದಿನಾಂಕವಾಗಿದೆ. ಅರ್ಜಿ ಸಲ್ಲಿಕೆ ಮತ್ತು ಮಾಹಿತಿಗಾಗಿ https://scholarships.gov.in ಸಂಪರ್ಕಿಸಬಹುದು.

9ನೇ ವರ್ಷದ ಸವಿನೆನಪು



ನಿಧನ: 17.12.2014

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿರುತ್ತದೆ ನಿಮ್ಮ ಆಶೀರ್ವಾದ ನಮ್ಮ ಮೇಲಿರಲಿ. ದುಃಖತಪ್ತರು: ಹೆಂಡತಿ ಚಂದ್ರಮ್ಮ, ಮಗಳು ಶೃತಿ.ಎಂ ಮಗ ರಾಕೇಶ್.ಎಂ

ಶ್ರೀ ಎಂ.ಮಂಜು(ಗಾಡಿ ಮಂಜಣ್ಣ)

#81, 2ನೇ ಅಡ್ಡರಸ್ತೆ, ಗುಂಡುರಾವ್ ನಗರ, ಊಟಿ ರೋಡ್, ಮೈಸೂರು

ಕಳೆದಿದೆ

ಶಿವಕುಮಾರ, ಹುರಳಿಕ್ಯಾತನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ. ಚಿಕ್ಕಂಕನಹಳ್ಳಿ ಗ್ರಾಮ ಪಂಚಾಯ್ತಿಗೆ ಮನೆ ಕಂದಾಯ ಕಟ್ಟಲು ಹೋಗಿದ್ದಾಗ ಮನೆ ದಾಖಲಾತಿಗಳು ಮತ್ತು ಆಧಾರ್ ಕಾರ್ಡ್ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:

Mob: 9880914557

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ

ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–9/1476/2023–24 ದಿನಾಂಕ: 14–12–2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 5:30 ಗಂಟೆ ನಂತರ	ಸಂಜೆ 5:30 ಗಂಟೆ ಒಳಗೆ	ಸಂಜೆ 5:45 ಗಂಟೆಯ ನಂತರ
ಕ್ರ ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1	1 ಸಂಖ್ಯೆ	26.00	18-12-2023	02-01-2024	03-01-2024
2	Kw-2	2 ಸಂಖ್ಯೆ	75.33	18-12-2023	02-01-2024	03-01-2024
3	Goods Tender	1 ಸಂಖ್ಯೆ	3.80	18-12-2023	02-01-2024	03-01-2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– **ಕಾರ್ಯಪಾಲಕ ಅಭಿಯಂತರರು,** ನೀಸ&ಒಚ(ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು